ISSN: 2249-2429 Volume : 10, Issue : 2, Pages 52, 7th Sept. 2020 Annual Subscription ₹.750/-

RNI REG.NO.KARKAN/2011/38712

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA** *A Quarterly Education and Research Journal*

Listed in U.G.C. Care List

APPROVED BY UGC CARE

## ಭಾರತದ ಶೈಕ್ಷಣಿಕ ಚಿತ್ರಣ ಬದಲಿಸಲಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ-೨೦೨೦

## ಭಾರತ ಸಂವಿಧಾನದ ಪ್ರಸ್ತಾವನೆಯ ಮಹತ್ವ










## ಪರಿಶಿಷ್ಟ ಸಮುದಾಯಗಳ ಯುವಕರಿಗೆ ಉದ್ಯಮಶೀಲತೆಯ ಅವಶ್ಯಕತೆ

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

U.G.C. Care Listed Journal

7ನೇ ಸಪ್ಟಂಬರ 2020 ಸಂಪುಟ : 10 ಸಂಚಿಕೆ : 2

ಪ್ರಕಾಶಕರು :

ಜಯದೇವ ಮೈ. ಮೆಣಸಗಿ

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಪಾದಕರು :

ಡಾ. ಎಸ್. ಬಿ. ಯಾದವಾಡ

ಸಹಸಂಪಾದಕರು :

ಡಾ. ಪ್ರಕಾಶ ಕೆ. ಬಡಿಗೇರ



ಸಂಪಾದಕ ಮಂಡಳಿ

- ಪ್ರೊ. ಎಸ್.ಎಸ್. ಪಾಟೀಲ
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- ಪ್ರೊ. ಬಿ.ಎಲ್. ಲಕ್ಕಣ್ಣವರ
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕ.ರಾ.ಅ.ಮ.ವಿ,ವಿಜಯಪುರ ಮತ್ತು ಕುಲಸಚಿವರು, ಕ.ರಾ.ಗ್ರಾ.ಅ.
  ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ.
- ಪ್ರೊ. ಕೆ.ಎಂ. ಮೇತ್ರಿ
  ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ,
  ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಡಾ. ಎನ್. ಲಕ್ಷ್ಮೀ
  ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- ಡಾ. ಜಗನ್ನಾಥ ಕೆ. ಡಾಂಗೆ
  ಮುಖ್ಯಸ್ಥರು ಮತ್ತು ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- ಡಾ. ರಾಜಪ್ಪ ದಳವಾಯಿ
  ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ,
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- ಡಾ. ಅನಿಲ ವಿ. ಬಮಗೊಂಡ
  ಸಹಾಯಕ ಪ್ರಾಧ್ಯಾಪಕರು, ಬಿ.ಎಲ್.ಡಿ.ಇ. ಸಂಸ್ಥೆಯ
  ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ.



**Shikshan Soudha**

*A Quarterly Education and Research Journal*

**Vidyanidhi Prakashana ®**
**Sri Sivakumar Agency ®**
Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-237527, 277527
email : shikshansoudha@gmail.com


The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.

## ಶಿಕ್ಷಣ ಸೌಧ

ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ

## ಅಂತರಂಗ Inside

### ಸೈದ್ಧಾಂತಿಕ (Articles)


05 'ಶಿವರಾತ್ರಿ' ನಾಟಕದಲ್ಲಿ ಸಾಮಾಜಿಕ ಸಂವೇದನೆ – ಬಾಳಕೃಷ್ಣ ನಾಯಿಕ, ಡಾ. ಮಹೇಶ ಫ. ಗಾಜಪ್ಪನವರ

08 ಭಾರತದ ಶೈಕ್ಷಣಿಕ ಚಿತ್ರಣ ಬದಲಿಸಲಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020 – ಡಾ. ಪ್ರಕಾಶ ಕೆ. ಬಡಿಗೇರ

11 ಭಾರತ ಸಂವಿಧಾನದ ಪ್ರಸ್ತಾವನೆಯ ಮಹತ್ವ – ಡಾ. ಗಿರೀಶ ಮೂಗ್ತಿಹಳಿ

15 ಶಿವರಾಮ ಕಾರಂತರ ಗರ್ಭಗುಡಿ : ದಲಿತಪರ ಚಿಂತನೆಯ ಅಧ್ಯಯನ – ಡಾ. ಮಲ್ಲಯ್ಯ ಸಂಡೂರು

17 ಪರಿಶಿಷ್ಟ ಸಮುದಾಯಗಳ ಯುವಕರಿಗೆ ಉದ್ಯಮಶೀಲತೆಯ ಅವಶ್ಯಕತೆ ಮತ್ತು ಸವಾಲುಗಳು – ಡಾ. ಸುರೇಶ ಕೆ.ಪಿ.

20 ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರ ಚಳವಳಿ : ಬ್ರಾಹ್ಮಣೇತರರ ಏಳಿಗೆ ಮತ್ತು ಬಿಕ್ಕಟ್ಟು – ಡಾ. ಕೆ. ಗುರುಸ್ವಾಮಿ

25 ಗ್ರಾಫಾಲಾಜಿ; ಕೈಬರಹದಮೂಲಕ ವ್ಯಕ್ತಿತ್ವ ವಿಶ್ಲೇಷಣೆ – ಡಾ. ಗಿರೀಶ ಟಿ.

28 ಸಂಸ್ಕೃತ – ಸಂಸ್ಕೃತಿಯ ಪರಿಕಲ್ಪನಾತ್ಮಕ ಚರ್ಚೆ – ಶ್ರೀ ಧರ್ಮಪಾಲನಾಥ ಸ್ವಾಮೀಜಿ

30 ಶಾಲಾ ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಯನ್ನು ಅರ್ಥೈಸುವಲ್ಲಿ ಶಿಕ್ಷಕರ ಪಾತ್ರ – ರೇಶ್ಮ ಎಂ.ವೈ.

31 ಕುವೆಂಪು ಅವರ ಜಲಗಾರ ನಾಟಕ : ಅದ್ವೈತ ತತ್ವ – ಡಾ. ಚೈತಾಲಿ ಕೆ.ಎಸ್.


### ಸಂಶೋಧನೆಗಳು (Research Articles)


33 ಚಿತ್ರದುರ್ಗ ಜಿಲ್ಲೆಯ ಮಹಿಳಾ ಕಿರಾಣಿ ಗ್ರಾಹಕರ ಖರೀದಿ ನಡವಳಿಕೆಯ ಮೇಲೆ ಪರಿಣಾಮ ಬೀರುವ ಅಂಶಗಳು–ಒಳನೋಟ – ಹೇಮಾ ಜಿ.

39 ಮಂಡಕ್ಕಿ ತಯಾರಿಕೆ ಉದ್ಯಮಗಳ ಕಾರ್ಯನಿರ್ವಹಣೆ – ಹರೀಶ ತಿಗರಿ, ಡಾ. ಕನ್ನಕಟ್ಟಿ ಜಯಣ್ಣ

45 ಭಾರತೀಯ ಸ್ಟೇಟ್ ಬ್ಯಾಂಕಿನ ಮಹಿಳಾ ಉದ್ಯೋಗಿಗಳ ಒತ್ತಡದ ಮಟ್ಟ – ಸವಿತಾ ಎಲ್.ಹೆಚ್., ಡಾ. ಹನುಮಂತರಾಯುಡು

50 ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರು ಎದುರಿಸುತ್ತಿರುವ ಸಮಸ್ಯೆಗಳು ಒಂದು ಸಮಾಜಶಾಸ್ತ್ರೀಯ ಅಧ್ಯಯನ – ಕಾಂಬಳೆ ರಾಜು ವಸಂತ, ಡಾ. ಶಾಮಲಾ ಭೀ. ದಾಸೋಗ


### ಶಿಕ್ಷಣ ತಜ್ಞರು (Educationists)


54 ಜೆ. ಕೃಷ್ಣಮೂರ್ತಿ – ಜಯದೇವ ಎಂ. ಮೆಣಸಗಿ

ಸಂಪಾದಕೀಯ

ಶಿಕ್ಷಣ ಸೌಧ 7ನೇ ಜೂನ್ 2020 ಸಂಪುಟ : 10 ಸಂಚಿಕೆ : 2

**ಶಿಕ್ಷಣ ಸೌಧ** ಸಂಪಾದಕೀಯ

# ನೂತನ ಶಿಕ್ಷಣ ನೀತಿ–2020

ಇಂದು ದೇಶದ ಸಮಗ್ರ ಮತ್ತು ಸರ್ವತೋಮುಖ ಅಭಿವೃದ್ಧಿ ಶಿಕ್ಷಣದಿಂದ ಮಾತ್ರ ಸಾಧ್ಯ. ಹೀಗಾಗಿ ಪ್ರಗತಿಪರ ಶಿಕ್ಷಣದ ಆಶಯದಂತೆ ಕಾಲಕಾಲಕ್ಕೆ ಶಿಕ್ಷಣ ಕ್ಷೇತ್ರದ ವಿಧಿವಿಧಾನಗಳು ರೀತಿ ರಿವಾಜುಗಳಲ್ಲಿ ಪುನರುಜ್ಜೀವನದ ಅಗತ್ಯ ತುಂಬಾ ಇದೆ. 34 ವರ್ಷಗಳ ನಂತರ ಹೊಸ ನಿರೀಕ್ಷೆ ಕನಸು ಗಮ್ಯಗಳೊಂದಿಗೆ ನೂತನ ಶಿಕ್ಷಣ ನೀತಿ–2020 ಜಾರಿಗೆ ಬಂದಿದೆ. ಇದರ ಮುಖ್ಯಾಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಶಿಕ್ಷಣ ಕೇತ್ರದಲ್ಲಿ ಸುಧಾರಣೆಗಳ ಪರ್ವ ಶುರುವಾಗಲಿದೆ ಎಂಬುದನ್ನು ಗಟ್ಟಿಯಾಗಿ ಉದ್ಘೋಷಸಬಹುದಾಗಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಇನ್ನು ಶಿಕ್ಷಣ ಸಚಿವಾಲಯವಾಗಿದೆ. ಯುಜಿಸಿಯು ಉನ್ನತ ಶಿಕ್ಷಣ ಧನಸಹಾಯ ಸಮಿತಿಯಾಗಿ ಮರು ನಾಮಕರಣಗೊಳ್ಳಲಿವೆ. ಹಲವು ಉನ್ನತ ಶಿಕ್ಷಣಗಳಿಗೆ ಬೇರೆ ಬೇರೆ ಆಡಳಿತ ಶಾಖೆಗಳಿರದೇ ಎಲ್ಲವೂ ಒಂದೇ ಆಡಳಿತ ಮಂಡಳಿಯ ನಿಯಂತ್ರಣದಲ್ಲಿ ನಡೆಯಲಿದೆ. ಸರ್ವರಿಗೂ ಉನ್ನತ ಶಿಕ್ಷಣ ಕೈಗೆಟುಕಲಿ ಎಂಬ ಉದ್ದೇಶದೊಂದಿಗೆ ದೂರ ಶಿಕ್ಷಣದಲ್ಲಿ ದಾಖಲಾತಿ ಪ್ರಮಾಣವು 50% ಗೆ ಏರಿಕೆಗೆ ನಿರ್ಧರಿಸಲಾಗಿದೆ. ಐಐಟಿಗಳಲ್ಲಿಯೂ ಕಲೆ ಮತ್ತು ಸಾಂಸ್ಕೃತಿಕ ವಿಷಯಗಳ ಬೋಧನೆ ಅವಕಾಶ ಕಲ್ಪಿಸಲಾಗಿದೆ. ಶಿಕ್ಷಣಕ್ಕೆ ಹೆಚ್ಚು ಅವಕಾಶಗಳಲಿಲ್ಲದ ಪ್ರಾಂತ್ಯಗಳಲ್ಲಿ ಸಾರ್ವಜನಿಕ ಹೂಡಿಕೆ ಆಧಾರದ ಮೇಲೆ ಉನ್ನತ ಶಿಕ್ಷಣ ಸಂಸ್ಥೆ ಸ್ಥಾಪಿಸುವ ಮತ್ತು 2030 ರೊಳಗೆ ಜಿಲ್ಲೆಗೊಂದು ಯೂನಿವರ್ಸಿಟಿ ಸ್ಥಾಪಿಸಿ ಉನ್ನತ ಶಿಕ್ಷಣ ಪ್ರಮಾಣ ಹೆಚ್ಚಿಸುವ ಉತ್ಕೃಷ್ಟ ಗುರಿಯನ್ನು ಎನ್‌ಇಪಿ–2020 ಹೊಂದಿದೆ.

ಬಹುಮುಖ್ಯವಾಗಿ 21ನೇ ಶತಮಾನಕ್ಕೆ ತಕ್ಕಂತೆ ವಿಜ್ಞಾನ ತಂತ್ರಜ್ಞಾನ ಹೊಸ ಹೊಸ ಆವಿಷ್ಕಾರಗಳನ್ನು ಬಳಸಿಕೊಂಡು ವ್ಯಾಪಕವಾಗಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಬೋಧನಾ ಕ್ರಮದಲ್ಲಿ ಅಳವಡಿಸಿಕೊಳ್ಳುವ ಗುರಿ ಹೊಂದಿದೆ. ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು 6 ನೇ ತರಗತಿಯಿಂದಲೇ ವೃತ್ತಿಪರ ಶಿಕ್ಷಣ ಅಳವಡಿಸಲಾಗಿದೆ.

ಮುಖ್ಯವಾಗಿ 10+2 ಬದಲಿಗೆ ಪ್ರತಿ ಹಂತದಲ್ಲೂ ಗುಣಮಟ್ಟದ ಶಿಕ್ಷಣ ಪೂರೈಸುವ ನಿಟ್ಟಿನಲ್ಲಿ 5+3+3+4 ಶಿಕ್ಷಣ ಪದ್ಧತಿ ತರಲಾಗಿದೆ ಒಟ್ಟಿನಲ್ಲಿ ಭಾರತವನ್ನು ಜಾಗತಿಕ ಜ್ಞಾನದ ಮಹಾಶಕ್ತಿಯತ್ತ ಕೊಂಡೊಯ್ಯುವ ಧ್ಯೇಯದ ಎನ್‌ಇಪಿ–2020 ಭಾರತೀಯ ಶಿಕ್ಷಣದಲ್ಲಿ ಹೊಸ ಕ್ರಾಂತಿ ಉಂಟುಮಾಡಿದೆ.

– **ಡಾ. ಎಸ್.ಬಿ. ಯಾದವಾಡ**
**ಸಂಪಾದಕರು**

## ಭಾವಪೂರ್ಣ ಶ್ರದ್ಧಾಂಜಲಿ



**ಡಾ. ಎನ್. ಬಿ. ಕೊಂಗವಾಡ**

ದಿನಾಂಕ ೧೧-೬-೨೦೨೦ರಂದು ನಿಧನರಾದ ಡಾ. ಎನ್. ಬಿ. ಕೊಂಗವಾಡ ಇವರು ಶೈಕ್ಷಣಿಕ ಕ್ಷೇತ್ರದಲ್ಲಿ ನಿಮ್ಮದೇ ಆದ ಛಾಪು ಮುಡಿಸಿ, ಸುಮಾರು ೧೫೦ಕ್ಕೂ ಹೆಚ್ಚು ಕೃತಿಗಳನ್ನು ಬರೆದು ಸಾಹಿತ್ಯ ಸಾರಸತ್ವ ಲೋಕಕ್ಕೆ ಅರ್ಪಣೆ ಮಾಡಿ, ಒಬ್ಬ ಚಿಂತಕರಾಗಿ, ವಿಮರ್ಶಕರಾಗಿ, ಪ್ರಾಚಾರ್ಯರಾಗಿ, ಆಡಳಿತಾಧಿಕಾರಿಯಾಗಿ, ಸಂಶೋಧಕರಾಗಿ, ಮಾರ್ಗದರ್ಶಕರಾಗಿ, ಸತತ ೧೦ ವರ್ಷಗಳ ಕಾಲ ಶಿಕ್ಷಣ ಸೌಧ ಪತ್ರಿಕೆಯ ಮುಖ್ಯ ಸಂಪಾದಕರಾಗಿ, ಪ್ರಕಾಶಕರಾಗಿ, ಶೈಕ್ಷಣಿಕವಾಗಿ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಶಿಕ್ಷಕರ, ವಿದ್ಯಾರ್ಥಿಗಳ ಅಚ್ಚು ಮೆಚ್ಚಿನ ಲೇಖಕ/ಶಿಕ್ಷಕರಾಗಿ ಇಂದು ನಮ್ಮನ್ನು ಅಗಲಿದ ನಿಮಗೆ ನಮ್ಮ ವಿದ್ಯಾನಿಧಿ ಪ್ರಕಾಶನ ಬಳಗ, ಶ್ರೀ ಶಿವಕುಮಾರ ಏಜನ್ಸಿ, ಮೈಮ ಅಕ್ಷರ ಮುದ್ರಣ ಮತ್ತು ಮೈಲಾರಪ್ಪ ಮೆಣಸಗಿ ಮೇಮೊರಿಯಲ್ ಟ್ರಸ್ಟಿನ ಸಮೂಹ ಶಿಕ್ಷಣ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹೃದಯ ಪೂರ್ವಕ ನುಡಿ ನಮನಗಳು.

– **ಪ್ರಕಾಶಕರು**

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ‘ಶಿವರಾತ್ರಿ’ ನಾಟಕದಲ್ಲಿ ಸಾಮಾಜಿಕ ಸಂವೇದನೆ

✍ **ಬಾಳಕೃಷ್ಣ ನಾಯಿಕ,** ಸಂಶೋಧನಾ ವಿದ್ಯಾರ್ಥಿ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ

✍ **ಡಾ. ಮಹೇಶ ಫ. ಗಾಜಪ್ಪನವರ** ಸಹಾಯಕ ಪ್ರಾಧ್ಯಾಪಕರು ಮತ್ತು ಪಿಎಚ್.ಡಿ ಮಾರ್ಗದರ್ಶಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ

**ನಾ**ಟಕ ರಚನಾಕಾರನೊಬ್ಬನು ಜಗತ್ತನ್ನು ತನ್ನದೇಯಾದ ದೃಷ್ಟಿಯಿಂದ ನೋಡಿ, ತನ್ನ ಅನುಭವಕ್ಕೆ ದಕ್ಕಿದ ಸಂವೇದನೆಗಳನ್ನು ಶಬ್ದಗಳಲ್ಲಿ ದಾಖಲಿಸುತ್ತಾನೆ. ಪ್ರತಿಯೊಬ್ಬ ನಾಟಕಕಾರನು ತನಗೆ ಸಹಜವಾಗಿ ಲಭ್ಯವಾದ ಸಮಸ್ತ ವಿಶ್ವದ ಆಗು ಹೋಗುಗಳನ್ನು ಪ್ರತಿಭೆಯ ಕಣ್ಣುಗಳಿಂದ ನಿರೀಕ್ಷಿಸುತ್ತಾನೆ. ಆತನ ಮೇಲೆ ಪರಿಣಾಮ ಬೀರಿದ ಬೇರೆ ಬೇರೆ ಸಂಗತಿಗಳನ್ನು ನಾಟಕದಲ್ಲಿ ಸೆರೆ ಹಿಡಿಯುತ್ತಾನೆ. “ಚರಿತ್ರೆಯು ನಾಟಕಾದಿ ಸಾಹಿತ್ಯ ಕಲೆಗಳಿಗೆ ಕಚ್ಚಾ ಮಾಲನ್ನು ಮಾತ್ರ ಒದಗಿಸುತ್ತದೆ. ಅದನ್ನು ಕರಗಿಸಿಕೊಂಡು, ಅರಗಿಸಿಕೊಂಡು ತನ್ನ ಇಷ್ಟ ದೇವತಾಮೂರ್ತಿಯನ್ನಾಗಿ ಮಾಡಿ ಅದರಲ್ಲಿ ಭಾವ-ಬಣ್ಣಗಳನ್ನು ತುಂಬುವುದು ನಾಟಕಕಾರನ ಕೆಲಸವಾಗಿದೆ. ಅಂತೆಯೇ ಇತಿಹಾಸದ ಕ್ಯಾನ್ವಾಸಿನ ಮೇಲೆ ರಚಿತವಾದ ಯಾವದೇ ನಾಟಕವು ಇತಿಹಾಸದ ಸಂದೇಶವನ್ನು ಸ್ವೀಕರಿಸಿ, ಅದರ ವಿವರಗಳನ್ನು ಸಮಕಾಲೀನ ಬದುಕಿನ ಸಂದರ್ಭದಿಂದಲೇ ತುಂಬಿಕೊಳ್ಳುತ್ತದೆ. ಉತ್ತಮ ಚಾರಿತ್ರಿಕ ನಾಟಕ ಸಮಕಾಲೀನ ನಲೆಯಲ್ಲಿ ಚಾರಿತ್ರಿಕ ಸಂಗತಿಗಳನ್ನು ಶೋಧಿಸುತ್ತದೆ.” (ಪುಟ:129, ‘ಸಾಹಿತ್ಯ ಪರಿಸರ’). ಅತೀ ಸಂವೇದನಾಶೀಲನಾದ ನಾಟಕ ರಚನಾಕಾರನು ತನ್ನ ಸಮಕಾಲೀನ ಆಗು-ಹೋಗುಗಳಿಗೆ ಸಹಜವಾಗಿ ಸ್ಪಂದಿಸುತ್ತಾನೆ.

ಬಸವಣ್ಣನವರ ಸಾಮಾಜೀಕ ಚಳುವಳಿಯ ವಿಷಯವನ್ನಿಟ್ಟುಕೊಂಡು ಕನ್ನಡದಲ್ಲಿ ಹಲವಾರು ಕಥೆಗಳು, ಕಾದಂಬರಿಗಳು, ಕವನಗಳು, ಸಂಶೋಧನೆಗಳು, ನಾಟಕಗಳು ಬಂದಿವೆ. ಅವುಗಳಲ್ಲಿ ಪ್ರಮುಖವಾದ ನಾಟಕಗಳೆಂದರೆ; ಲಂಕೇಶರ ‘ಸಂಕ್ರಾಂತಿ’, ಗಿರೀಶ ಕಾರ್ನಾಡರ ‘ತಲೆದಂಡ’, ಎಚ್.ಎಸ್. ಶಿವಪ್ರಕಾಶರ ‘ಮಹಾಚೈತ್ರ’, ಜಡಭರತರ ‘ನಾನೇ ಬಿಜ್ಜಳ’, ಎಂ.ಎಂ. ಕಲಬುರ್ಗಿಯವರ ‘ಕೆಟ್ಟಿತ್ತು ಕಲ್ಯಾಣ’ ಎನ್ನುವ ನಾಟಕಗಳು ಪ್ರಕಟವಾಗಿವೆ. ಆದರೆ ಇದೇ ವಿಷಯವನ್ನಿಟ್ಟುಕೊಂಡು ಕಂಬಾರರು ಇವೆಲ್ಲಗಿಂತ ಭಿನ್ನವಾದ ‘ಶಿವರಾತ್ರಿ’ ಎಂಬ ಮಹತ್ವದ ನಾಟಕವನ್ನು ರಚಿಸಿಕೊಟ್ಟರು. ಇದು ಎಲ್ಲ ನಾಟಕಗಳಿಗಿಂತ ಭಿನ್ನವಾಗಿದೆ.

ಚಂದ್ರಶೇಖರ ಕಂಬಾರರ ‘ಶಿವರಾತ್ರಿ’ ನಾಟಕವು ಒಟ್ಟು ಆರು ದೃಶ್ಯಗಳ ಒಂದು ಪೂರ್ಣಾಂಕ ನಾಟಕ. ಬಿಜ್ಜಳ ಮತ್ತು ಬಸವಣ್ಣನವರ ಜೀವನದ ಕೊನೆಯ ದಿನಗಳನ್ನು ನಿಮಿತ್ತವಾಗಿಟ್ಟುಕೊಂಡು ರಚಿಸಿದ ಈ ನಾಟಕ ಹಲವಾರು ದೃಷ್ಟಿಯಿಂದ ಗಮನ ಸೆಳೆಯುತ್ತದೆ. ನಾಟಕದುದ್ದಕ್ಕೂ ಸಮಾನತೆಯ ಹಸಿವು ಕಾಡುತ್ತಿರುವುದು ಪ್ರಮುಖವಾಗಿ ಕಂಡುಬರುತ್ತದೆ. “ಬಸವಣ್ಣ ಒಬ್ಬ ಧೀಮಂತ ನಾಯಕನಾಗಿ ಮತ್ತು ನಮ್ಮ ಕಾಲದ ಸಮಸ್ಯೆಗಳಿಗೆ ಉತ್ತರವಾಗಿ ಕಾಣತೊಡಗಿದ್ದು ನ್ಯಾಯಸಮ್ಮತವೆ. ಆದರೆ ಇಂಥ ಬಸವಣ್ಣನನ್ನು ಬಿಜ್ಜಳನಂಥ ದೊರೆ ಸಂಸೆಯದಿಂದ ನೋಡಲು ಕಾರಣವೇನು ಎಂಬ ಪ್ರಶ್ನೆಯು, ನಮ್ಮ ಇಂದಿನ ರಾಜಕೀಯವು ಶುದ್ದವಾದುದನೆಲ್ಲ ಗುಮಾನಿಯಿಂದಲೇ ಕಾಣಲು ಕಾರಣವೇನು ಎಂಬ ಪ್ರಶ್ನೆಯಿಂದಲೇ ಪ್ರೇರಿತವಾಗಿದೆ. ಅಥವಾ ಒಳ್ಳೆಯದಾದುದೆಲ್ಲ ವಿಫಲತೆಯ ದಾರಿಯಲ್ಲೇ ಏಕೆ ಸಾಗುತ್ತಿದೆ ಎಂಬ ಹತಾಶ ಭಾವವೂ ಇದರಲ್ಲಡಗಿದೆ.” (ಪುಟ:63, ‘ಪರಿಭಾವ’). ಕಾರ್ನಾಡರು ತಮ್ಮ ‘ತಲೆದಂಡ’ ನಾಟಕದಲ್ಲಿ ಚಿತ್ರಿಸಿರುವ ಬಿಜ್ಜಳನಿಗೂ ಹಾಗೂ ‘ಶಿವರಾತ್ರಿ’ ನಾಟಕದಲ್ಲಿ ಕಂಬಾರರು ಚಿತ್ರಿಸಿರುವ ಬಿಜ್ಜಳನಿಗೂ ಬಹಳಷ್ಟು ವ್ಯತ್ಯಾಸಗಳು ಕಂಡು ಬರುತ್ತವೆ. ಅಲ್ಲಿಯ ಬಿಜ್ಜಳ ಬಸವಣ್ಣನವರ ಮೇಲೆ ಸಂಪೂರ್ಣ ನಂಬಿಕೆಯುಳ್ಳವನು. ಆದರೆ ಇಲ್ಲಿಯ ಬಿಜ್ಜಳ ಬಸವಣ್ಣನವರಿಗೆ ಪೂರಕವಾಗಿಲ್ಲ. ಶಿವರಾತ್ರಿಯ ಬಿಜ್ಜಳನನ್ನು ಕಂಬಾರರು ಇವತ್ತಿನ ಕಾಲಘಟ್ಟದ ರಾಜಕೀಯ ನಾಯಕರ ಮನಸ್ಥಿತಿಗೆ ಹೋಲಿಸಿ ಬರೆದಿದ್ದಾರೆ. ಇವತ್ತಿನ ರಾಜಕೀಯ ನಾಯಕರು ಹೇಗೆ ಒಳ್ಳೆಯದನ್ನೆಲ್ಲವನ್ನು ಸಂಸೆಯದಿಂದ ನೋಡುತ್ತಾರೆಯೋ ಹಾಗೆಯೆ ಬಿಜ್ಜಳನೂ ಬಸವಣ್ಣನವರು ಮಾಡುವ ಸಾಮಾಜಿಕ ಕಾರ್ಯಗಳನ್ನು ಸಂಸೆಯದಿಂದಲೇ ನೋಡುತ್ತಾನೆ.

ಇಲ್ಲಿಯವರೆಗೆ ಬಂದ ಹಲವು ನಾಟಕಗಳು ಬಸವಣ್ಣನವರ ಸಮಾನತೆಯ ತತ್ವವನ್ನು ಬಿಂಬಿಸುತ್ತವೆ ಹಾಗೂ ಬಸವಣ್ಣನವರ ಚಳುವಳಿ ಹೇಗೆ ವಿಫಲತೆಯನ್ನು ಕಾಣುತ್ತದೆ ಎನ್ನುವುದರ ಬಗ್ಗೆಯೇ ಯೋಚಿಸಿವೆ. “ಕಂಬಾರರನ್ನು ಕಾಡುತ್ತಿರುವ ಸಮಸ್ಯೆಯು ಬಸವಣ್ಣನ ಸಮಸ್ಯೆಯಲ್ಲ, ಅವರನ್ನು ಕಾಡುತ್ತಿರುವದು ಬಿಜ್ಜಳನ ದೃಷ್ಟಿಕೋನ.” (ಪುಟ: 63, ಪರಿಭಾವ). ಖ್ಯಾತ ವಿಮರ್ಶಕ ಮಾಧವ ಕುಲಕರ್ಣಿಯವರು ತಮ್ಮ ವಿಮರ್ಶಾ ಲೇಖನದಲ್ಲಿ ಹೇಳಿರುವ ವಿಚಾರವು ಸರಿಯಾಗಿದೆ. ಏಕೆಂದರೆ ನಾಟಕದುದ್ದಕ್ಕೂ ಬಿಜ್ಜಳನ ದೃಷ್ಟಿಕೋನವು ಬಹಳ ಬಿನ್ನವಾಗಿದೆ. ಇಲ್ಲಿಯ ಬಿಜ್ಜಳನಿಗೆ ಸುಧಾರಣೆ ಬೇಕಾಗಿಲ್ಲ, ಅವನಿಗೆ ಬೇಕಾಗಿರುವುದು ಕೇವಲ ಅಧಿಕಾರ. ಅಧಿಕಾರಕ್ಕಾಗಿ ಏನೆಲ್ಲ ಮಾಡಲು ಸಿದ್ದನಾಗಿದ್ದಾನೆ. ಅಂದರೆ ಇಲ್ಲಿ ಕಂಬಾರರನ್ನು ಕಾಡುತ್ತಿರುವ ಸಮಸ್ಯೆಯೆಂದರೆ, ವ್ಯವಸ್ಥೆಯ ದೃಷ್ಟಿಕೋನದಲ್ಲಿ ಸಮಾನತೆಗೆ ಬೆಲೆ ಏಕೆ ಸಿಗುವುದಿಲ್ಲ ಎಂಬುದೇ ಅವರ ಸಂಕಟವಾಗಿದೆ.

ನಾಟಕದ ಪ್ರಾರಂಭದಲ್ಲಿಯೇ ನಟಿಯ ಈ ಮಾತುಗಳು ಬಸವಣ್ಣನ ಮತ್ತು ಬಿಜ್ಜಳರ ಮನಸ್ಥಿತಿಗಳನ್ನು ಬಿಚ್ಚಿಡುತ್ತವೆ:

> **“ಬಸವಣ್ಣನ ಮಾತು ಮುತ್ತಿನಹಾರ.**
> **ಅಲ್ಲಮನ ಮಾತು ಜ್ಯೋತಿರ್ಲಿಂಗ.**
> **ಆದರೆ ಬಿಜ್ಜಳನ ಮಾತಿಗೆ ಹತ್ತು ಮನಸ್ಸು,**
> **ಹದಿನೆಂಟು ಬುದ್ಧಿ!”** **(ಪುಟ : 18, ‘ಶಿವರಾತ್ರಿ’)**

ಬಿಜ್ಜಳನ ಮನಸ್ಥಿತಿಯ ಕುರಿತು ಇದಕ್ಕಿಂತ ದೊಡ್ಡ ಉದಾಹರಣೆ ಬೇಕಾಗಿಲ್ಲ ಎನಿಸುತ್ತದೆ. ನಾಟಕದಲ್ಲಿ ಬಿಜ್ಜಳ ಮತ್ತು ಬಸವಣ್ಣನವರ ನಡುವೆ ದೊಡ್ಡ ವೈಚಾರಿಕ ಸಂಘರ್ಷ ನಡೆಯುತ್ತಲೇ ಸಾಗುತ್ತದೆ. ಬಸವಣ್ಣನವರು ಕಣ್ಣು ಇಲ್ಲದವರಿಗೆ ಕಣ್ಣು ಕೊಡಲು ಪ್ರಯತ್ನಿಸಿದರೇ, ಬಿಜ್ಜಳನು ಕಣ್ಣು ಇದ್ದವರ ಕಣ್ಣು ಕೀಳಿಸಿದ. ಇದೇ ಬಸವಣ್ಣನವರಿಗೂ ಮತ್ತು ಬಿಜ್ಜಳನಿಗು ಇರುವ ವ್ಯತ್ಯಾಸ. ಬಸವಣ್ಣನವರು ನುಡಿದಂತೆ ನಡೆದುಕೊಂಡರು ಆದರೆ ಬಿಜ್ಜಳ ಅಧಿಕಾರದ ಆಸೆಗಾಗಿ ಏನೆಲ್ಲವನ್ನು ಮಾಡಲು ಸಿದ್ಧವಿರುತ್ತಾನೆ. ಬಸವಣ್ಣನವರು ತನ್ನ ವಿರುದ್ಧವಾಗಿದ್ದಾರೆ ಎನ್ನುವ ಭೂತವನ್ನು ತನ್ನ ಮೇಲೆ ತಾನೆ ಬಿಟ್ಟುಕೊಂಡು ಸಂಶಯದಿಂದ ಬದುಕುತ್ತಿರುವುದು ಇಲ್ಲಿ ಬಿಜ್ಜಳನ ದುರಂಥವಾಗಿದೆ. ಅವನ ಮನಸ್ಸಿನಲ್ಲಿ ತುಂಬಿಕೊಂಡಿರುವ ಕೊಳೆಯನ್ನು ಹೋಗಲಾಡಿಸಲು ಯಾರಿಂದಲೂ ಸಾಧ್ಯವಿಲ್ಲ. ಅದನ್ನು ಅವನೆ ತೊಳೆದುಕೊಂಡು ಶುದ್ಧಗೊಳಿಸಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕೊಳ್ಳಬೇಕಾಗಿದೆ. ಅದನ್ನು ಬಸವಣ್ಣನವರಿಂಲೂ ಹೋಗಲಾಡಿಸಲು ಸಾಧ್ಯವಾಗುವುದಿಲ್ಲ ಏಕೆಂದರೆ ಅವನು ಬಸವಣ್ಣನವರ ಮೇಲೆ ನಂಬಿಕೆ ಕಳೆದುಕೊಂಡು ಬದುಕುತ್ತಿದ್ದಾನೆ.

'ಧರ್ಮವಿವೇಕ' ಎಂಬ ಮಾತಿನಲ್ಲಿ ಹಲವಾರು ಅರ್ಥಗಳು ಅಡಗಿವೆ. ಇದು ಸನಾತನ ಧರ್ಮವಿವೇಕವಲ್ಲ. ಇದು ಬಸವಣ್ಣ ಹೊಸದಾಗಿ ರೂಪಿಸಿದ 'ಧರ್ಮವಿವೇಕ'. ಇದರಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯಗಳು ಆಧಾರಸ್ಥಂಭಗಳು. (ಪುಟ : 65, 'ಪರಿಭಾವ'). ವಿಮರ್ಶಕರು ಹೇಳುವ ಮಾತನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವರ ಮಾತು ಇಲ್ಲಿ ಬಹಳ ಅರ್ಥಪೂರ್ಣವಾಗಿದೆ ಎನಿಸುತ್ತದೆ. ಏಕೆಂದರೆ ಸನಾತನಿಗಳ ಧರ್ಮವಿವೇಕವು ಸಮಸಮಾಜವನ್ನು ಕಟ್ಟಲು ಯಾವ ಕಾಲಕ್ಕೂ ಬಯಸಲಿಲ್ಲ. ಅದು ಅದರ ಗರ್ಭದಲ್ಲಿಟ್ಟುಕೊಂಡು ಜತನ ಮಾಡಿಕೊಂಡು ಬಂದಿರುವುದು ಕೇವಲ ಅಸಮಾನತೆ, ಕ್ರೌರ್ಯ, ಹಿಂಸೆ, ದಮನಿತರ ಮೇಲೆ ದಬ್ಬಾಳಿಕೆ ಹಾಗೂ ಸಮಾಜದಲ್ಲಿ ಎಲ್ಲ ಇಲ್ಲಗಳ ಮೂಲಕ ಬದುಕುವವರ ಶೋಷಣೆಯೆ ಅದರ ಮುಖ್ಯ ಉದ್ದೇಶವಾಗಿದೆ. ಆದರೆ ಬಸವಣ್ಣನವರು ಹೊಸದಾಗಿ ರೂಪಿಸಿದ 'ಧರ್ಮವಿವೇಕ' ಬೇರೆ ಉದ್ದೇಶವನ್ನು ಹೊಂದಿದೆ. ಇದರಲ್ಲಿ ಮನುಷ್ಯನಾಗಿ ಹುಟ್ಟಿದ ಯಾರೇಯಾಗಲಿ ಆತ ಅರಸನಿರಲಿ ಅಥವಾ ಆಳಾಗಿರಲಿ ಅವನು ಕಾಯಕವನ್ನು ಮಾಡುತ್ತಿದ್ದಾನೆಂದರೆ ಅವನಿಗೂ ಸಮಾಜದಲ್ಲಿ ಸಮಾನವಾದ ಸ್ಥಾನಮಾನ ಸಿಗಬೇಕು. ಆತ ಯಾವದೇ ವರ್ಗಕ್ಕೆ ಸೇರಿದವನಾಗಿದ್ದರು ಅವನಿಗೂ ಎಲ್ಲರಂತೆ ಸಮಾಜದಲ್ಲಿ ಸ್ವತಂತ್ರ್ಯವಾಗಿ ಬದುಕುವ ಹಕ್ಕಿದೆ. ಇದು ಇಲ್ಲಿ ಬಸವಣ್ಣನವರು ಕಟ್ಟಬಯಸಲು ಹೊರಟಿರುವ ಸಮಾಜದ ಪರಿಕಲ್ಪನೆ.

**"ನಮ್ಮ ರಾಜ್ಯದ ಕಾನೂನು ಹೇಳುತ್ತದೆ :**
**ರಾಜ್ಯದಲ್ಲಿರುವ ಎಲ್ಲ ಎಲ್ಲದರ ಮೇಲೆ ರಾಜನಿಗೆ**
**ಹಕ್ಕಿದೆ. ಮಹಾರಾಜರಾದ ಬಿಜ್ಜಳ ದೊರೆಗಳು–**
**ನಾವು ಕೇಳುತ್ತಿದ್ದೇವೆ : ನಮಗೆ ಕಾಮಾಕ್ಷಿ ಬೇಕು.**
**ಅವಳು ಎಲ್ಲಿದ್ದರಲ್ಲಿಂದ, ಹ್ಯಾಗಿದ್ದರೆ ಹಾಗೇ ಬೇಕು.**
**ಕರೆದುಕಂಡು ಬಾ. (ಪುಟ: 50, 'ಶಿವರಾತ್ರಿ')**

ಸನಾತನ 'ಧರ್ಮವಿವೇಕ' ಎಂದರೆ ಇದು. ಬಿಜ್ಜಳನು ತನ್ನ ಕಾಮದಾಸೆ ತೀರಿಸಿಕೊಳ್ಳುವುದಕ್ಕಾಗಿ ಸಾವಂತ್ರಿಯ ಮನೆಗೆ ಬಂದು ಅವಳ ಮೇಲೆ ಹಕ್ಕು ಚಲಾಯಿಸುತ್ತಾನೆ. ತಾನು ರಾಜನಾಗಿರುವ ಕಾರಣಕ್ಕೆ ಅವನು ಕೈ ಮಾಡಿ ತೋರಿಸಿದ ಹುಡುಗಿಯನ್ನು ಸಾವಂತ್ರಿ ಅವನಿಗೆ ತಂದು ಒಪ್ಪಿಸಲೇಬೇಕು. ಅವನನ್ನು ಬಿಟ್ಟರೆ ಅವಳ ಮನೆಯಲ್ಲಿರುವ ಹುಡುಗಿಯರನ್ನು ಆತನ ರಾಜದಲ್ಲಿರುವ ಯಾವ ಗಂಡಸು ಕೂಡ ಕಣ್ಣೆತ್ತಿ ನೋಡುವಹಾಗಿಲ್ಲ. ಅಲ್ಲಿರುವ ಎಲ್ಲ ವಯಸ್ಸಿನ ವೇಶ್ಯೆಯರು ಬಿಜ್ಜಳನ ಅಧೀನವಾಗಿರಬೇಕು. ಇದು ಅವನ ರಾಜ್ಯದಲ್ಲಿರುವ ಕಾನೂನಾಗಿತ್ತು. ಅದನ್ನು ಎಲ್ಲರು ಪಾಲಿಸಲೇಬೇಕು ಎನ್ನುವುದು ಬಿಜ್ಜಳನ ವಾದವಾಗಿದೆ.

**"ಸ್ವಚ್ಛಂದವಾಗಿ ದೇಹ ಮಾರುವುದಕ್ಕೆ ಬಂದವರಲ್ಲ ನಾವು.**
**ನಮಗೂ ನಿಯಮಗಳಿವೆ ಸ್ವಾಮಿ. ಸಂದರ್ಭಾನುಸಾರ**
**ಮುಖ ನೋಡಿ ಮಣೆ ಹಾಕುವ ನಿಯಮಗಳಲ್ಲ ಇವು.**
**ಎಲ್ಲರಿಗೂ ಸಮಾನವಾದ ನಿಯಮಗಳು."**
**(ಪುಟ : 50, 'ಶಿವರಾತ್ರಿ').**

ಬಸವಣ್ಣನವರು ಹೊಸದಾಗಿ ರೂಪಿಸಲು ಹೊರಟಿರುವ 'ಧರ್ಮವಿವೇಕ'ವೆಂದರೆ ಇದು. ಬಿಜ್ಜಳನು ತನಗಾಗಿ ಸಾಕಷ್ಟು ಕಾನೂನುಗಳನ್ನು ರೂಪಿಸಲು ಹೊರಟಿದ್ದಾನೆ. ಆದರೆ ಬಸವಣ್ಣನವರ ಪ್ರಕಾರ ಅವು ಸರಿ ಎನಿಸದಿದ್ದರೆ ಅಂಥ ಕಾನೂನನ್ನು ಯಾರು ಒಪ್ಪಬೇಕಂತೇನಿಲ್ಲ. ವೇಶ್ಯೆಯಾಗಿರುವ ಕಾರಣಕ್ಕೆ ಸಮಾಜದ ದೃಷ್ಟಿಯಲ್ಲಿ ಹಾಗೂ ಬಿಜ್ಜಳನ ದೃಷ್ಟಿಯಲ್ಲಿ ಸಾವಂತ್ರಿ ಒಬ್ಬಳು ಕಟ್ಟ ಕಡೆಯ ವ್ಯಕ್ತಿಯಾಗಿರಬಹುದು. ಆದರೆ ಬಸವಣ್ಣನವರ ದೃಷ್ಟಿಯಲ್ಲಿ ಅವಳಿಗೂ ಪ್ರಶ್ನಿಸುವ ಹಕ್ಕಿದೆ. ಕಾಯಕ ಧರ್ಮವನ್ನು ಸ್ವೀಕರಿಸಿದವರೆಲ್ಲರಿಗೂ ರಾಜನಿಗೆ ಸಮಾನವಾದ ಗೌರವವಿದೆ. ಆದರೆ ಸರ್ವಾಧಿಕಾರತ್ವವನ್ನು ಸ್ಥಾಪಿಸಲು ಹೊರಟಿರುವ ಬಿಜ್ಜಳನಿಗೆ ಬಸವಣ್ಣನವರ ಮನೊದೋರಣೆ ಹಿಡಿಸುವುದಿಲ್ಲ.

"ಬಸವಣ್ಣನವರ ಶರಣ ಚಳುವಳಿ ಅವನ ಅನುಯಾಯಿಗಳಲ್ಲಿ ಎಂಥ ಆಶೋತ್ತರಗಳನ್ನು ಬಿತ್ತಿರುತ್ತದೆ ಎಂದರೆ ತನ್ನ ಚಿಂತನೆ– ಕ್ರಿಯೆಗಳ ಪ್ರಭಾವ ಎಷ್ಟು ಆಳವಾದದ್ದೆಂದು ಸ್ವತ: ಅವನಿಗೇ ಗೊತ್ತಿರುವುದಿಲ್ಲ. ಕಲಾವತಿ – ಶೀಲವಂತರ ಮದುವೆಯ ಪ್ರಸ್ಥಾಪವನ್ನು ಅವನು ಮೊದಲ ಬಾರಿಗೆ ಕೇಳಿದಾಗ, 'ಒಮ್ಮೆಲೆ ಬಸವಣ್ಣನ ಕಣ್ಣಲ್ಲಿ ನೀರು ತುಂಬಿ ಬರುತ್ತದೆ. ಮಾತೊಡೆಯುವುದಿಲ್ಲ." (ಪುಟ:214, 'ಸಾಹಿತ್ಯ ಸಂದರ್ಭ'). ವಿಮರ್ಶಕರು ಶರಣ ಚಳುವಳಿ ಕುರಿತು ರಚಿಸಿದ ಕಾರ್ನಾಡರ 'ತಲೆದಂಡ' ನಾಟಕದ ವಿಮರ್ಶೆ ಮಾಡುವ ಸಂದರ್ಭದಲ್ಲಿ ಪ್ರಸ್ಥಾಪ ಮಾಡಿದ್ದಾರೆ. ಇದು ಬಹಳ ಅರ್ಥಪೂರ್ಣವಾಗಿದೆ. ಬಸವಣ್ಣನವರು ತನ್ನ ಅನುಯಾಯಿಗಳು ಯಾವುದಾದರು ದೊಡ್ಡ ನಿರ್ಧಾರ ತೆಗೆದುಕೊಂಡು ಅವರಿಗಿಂತ ಒಂದು ಹೆಜ್ಜೆ ಮುಂದು ಒರೆದು ಸಮಾಜದ ಒಳ್ಳೆಯ ಕಾರ್ಯಕ್ಕೆ ಮುಂದಾದರೆ ಅದನ್ನು ನೋಡಿ ಸಂತೋಷ ತಡೆಯಲಾಗದೆ ಕಣ್ಣಿರು ಸುರಿಸಿದವರು. ಇಂಥ ಸಮಸಮಾಜದ ಕನಸು ಹೊತ್ತ ಬಸವಣ್ಣನಿಗೂ ಹಾಗೂ ಸಮಸಮಾಜದ ಬೆಳವಣಿಗೆಯನ್ನು ನೋಡಿ ಸಹಿಸಿಕೊಳ್ಳಲಾರದ ಬಿಜ್ಜಳನಿಗೂ ಬಹಳ ವ್ಯತ್ಯಾಸವಿದೆ.

"ಅಪ್ಪ ನಮ್ಮ ಮಾದಾರ ಚನ್ನಯ್ಯ, ಹೊಲೆಮಾದಿಗರಿಗೆ ಹುಟ್ಟಿದವನು ನಾನು" (ಪುಟ : 75, 'ಸಾಹಿತ್ಯ ಪರಿಸರ'). ಸಾಮಾಜಿಕ ಸಂವೇದನೆಯ ಕುರಿತು ಬಸವಣ್ಣನವರು ಇದಕ್ಕಿಂತ ದೊಡ್ಡ ಮಾತು ಇನ್ನೇನು ಹೇಳಲು ಸಾಧ್ಯ ಹೇಳಿ. ನಾವು ಆಧುನಿಕ ಕಾಲದಲ್ಲಿದ್ದರೂ ತನ್ನ ಜಾತಿ ಶ್ರೇಷ್ಠ ಬೇರೆಯವರ ಜಾತಿ ಕನಿಷ್ಠ ಎಂಬ ಅವಿವೇಕತನದಿಂದ ಬದುಕುತ್ತಿದ್ದೇವೆ. ಧರ್ಮದ ನಶೆಯನ್ನು ಇವತ್ತಿನ ಒರೆಗೂ ಇಳಿಸಿಕೊಂಡಿಲ್ಲ. ಕೆಳಜಾತಿಯವರನ್ನು ಕೆಲವರು ಪ್ರಾಣಿಗಳಿಗಿಂತ ಕೀಳಾಗಿ ಕಾಣುತ್ತಾರೆ. ನಾಯಿಯನ್ನು ಮುಟ್ಟುತ್ತಾರೆ ಮುದ್ದಾಡುತ್ತಾರೆ ಆದರೆ ಮನುಷ್ಯರನ್ನು ಮುಟ್ಟುವುದಿಲ್ಲ. ಇಲ್ಲಿ ಬಸವಣ್ಣನವರು ಹೇಳಿರುವುದು ಕೀಳರಿಮೆಯಿಂದಲ್ಲ. ಕೆಳ ಜಾತಿಯವರು ಕೂಡ ಮೇಲು ಜಾತಿಯವರಿಗಿಂತ ಕಡಿಮೆಯಲ್ಲ ಎಂದು ಮೇಲು ಜಾತಿಯವರಿಗೆ ಸವಾಲು ಹಾಕುತ್ತಾರೆ. ಯಾವ ವರ್ಗದವರಿರಲಿ ಅಥವಾ ಯಾವದೆ ಜಾತಿಯವರಿರಲಿ ಇಲ್ಲಿ ಎಲ್ಲರು ಸಮಾನರು ಎಂಬ ಸ್ವಾಭಿಮಾನವನ್ನು ಹಾಗೂ ಆತ್ಮವಿಶ್ವಾಸವನ್ನು ಕೆಳಜಾತಿಯವರಲ್ಲಿ ಹುಟ್ಟು ಹಾಕಬೇಕಾಗಿದೆ. ಅದಕ್ಕಾಗಿ ಬಸವಣ್ಣನವರು ಹೀಗೆ ಹೇಳುತ್ತಾರೆ. ಬಸವಣ್ಣನವರ ಉದ್ದೇಶ ಎಲ್ಲರಲ್ಲಿಯೂ ಸಮಾನತೆಯನ್ನು ಮೂಡಿಸಬೇಕಾಗಿತ್ತು.

"ಬಸವಣ್ಣನವರು ಜಾತಿ–ರಹಿತ ಹಾಗೂ ವರ್ಗರಹಿತ ಸಮಾಜವನ್ನು ಕಟ್ಟಬಯಸಿದ್ದರು ಎಂದು ಮುಂತಾಗಿ ವೈಭವೀಕರಿಸಿ ಮಾತನಾಡುವುದು ಅಷ್ಟು ಸೂಕ್ತವಲ್ಲ" (ಪುಟ:77, 'ಸಾಹಿತ್ಯ ಪರಿಸರ'). ವಿಮರ್ಶಕ ಶಿವರಾಮಯ್ಯನವರು ಹೇಳುವ ವಿಚಾರವನ್ನು ಒಪ್ಪಲಾಗದು. ಇವರ ಪ್ರಕಾರ ಬಸವಣ್ಣನವರು ಜಾತಿ–ರಹಿತ ಹಾಗೂ ವರ್ಗರಹಿತ ಸಮಾಜವನ್ನು ಕಟ್ಟಲು ಬಯಸದೇ ಹೋಗಿದ್ದರೆ; ಅವರು ಅಂತರ್ಜಾತಿ ವಿವಾಹವನ್ನು ಮಾಡುತ್ತಿರಲಿಲ್ಲ. ಜಾತಿ ಹಾಗೂ ವರ್ಗರಹಿತ ಸಮಸಮಾಜವನ್ನು ಕಟ್ಟುವುದೆ ಅವರ ಮುಖ್ಯ ಉದ್ದೇಶವಾಗಿತ್ತು. ಜಾತಿಯನ್ನು ಹೊಡೆದೋಡಿಸಲು ತಮ್ಮ ಜೀವದ ಹಂಗನ್ನು ತೊರೆದು ಹೋರಾಟ ಮಾಡಿದ್ದಾರೆ. ಜಾತಿ ರಹಿತ ಸಮಾಜ ಕಟ್ಟುವುದು ಅವರ ಉದ್ದೇಶ ಇಲ್ಲವಾಗಿದ್ದರೆ ಅವರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಜನಿವಾರವನ್ನು ಕಿತ್ತು ಬಿಸಾಕುತ್ತಿರಲಿಲ್ಲ. ಜಾತಿ ಮತ್ತು ವರ್ಗರಹಿತ ಸಮಾಜ ನಿರ್ಮಾಣ ಮಾಡುವ ಸಂಕಲ್ಪ ಹೊಂದಿರುವುದರಿಂದಲೇ ಅದನ್ನು ಅವರು ಕಿತ್ತು ಬಿಸಾಕಿ ಇಲ್ಲಿ ಎಲ್ಲರೂ ಸಮಾನರೆಂದು ಎಲ್ಲ ಜಾತಿಯ ಜನರೊಂದಿಗೆ ಬದುಕಿ ತೋರಿಸಿದರು.

**"ಸಮಾಜವೆಂದರೆ ಕೇವಲ ಅಗ್ರಹಾರವೇ ಪ್ರಭು'**
**ಇನ್ನುಳಿದ ಧರ್ಮಬಾಹಿರ ಜನ ಶೇಕಡಾ ತೊಂಬತ್ತರಷ್ಟು**
**ಇರುವಾಗ?"** **(ಪುಟ : 63, 'ಶಿವರಾತ್ರಿ').**

ಬಸವಣ್ಣನವರು ಬಿಜ್ಜಳನಿಗೆ ಪ್ರಶ್ನಿಸುವ ಈ ಮಾತುಗಳು ಅವರಲ್ಲಿರುವ ಸಾಮಾಜಿಕ ಕಳಕಳಿ ಹಾಗೂ ಸಾಮಾಜಿಕ ಸಂವೇದನೆಯನ್ನು ತಿಳಿಸಿಕೊಡುತ್ತದೆ. ಬಸವಣ್ಣನವರ ಪ್ರಕಾರ ಸಮಾಜವೆಂದರೆ ಕೇವಲ ಬ್ರಾಹ್ಮಣರು ವಾಸಿಸುವ ಕೇರಿಯಲ್ಲ ಎಂಬರ್ಥದಲ್ಲಿ ಅವರು ಬಿಜ್ಜಳನಿಗೆ ಹೇಳುತ್ತಾರೆ. ಅಗ್ರಹಾರವನ್ನು ಬಿಟ್ಟು ಇನ್ನು ಸಾಕಷ್ಟು ಜನರಿದ್ದಾರೆ. ಅವರ ಕಡೆಗು ಗಮನಕೊಡಬೇಕಾಗಿದೆ. ಸಮಾಜದಲ್ಲಿ ಕಾಯಕ ಮಾಡಿಕೊಂಡು ಬದುಕುತ್ತಿದ್ದಾರೆಂದರೆ ಅವರಿಗೂ ಸಮಾಜದಲ್ಲಿ ಬದುಕುವ ಹಕ್ಕಿದೆ. ಯಾರು ನಮ್ಮ ರಾಜ್ಯದಲ್ಲಿ ಬೆವರು ಸುರಿಸಿ ದುಡಿಯುತ್ತಿದ್ದಾರೊ ಅವರು ರಾಜನಿಗೆ ಸಮಾನವಾದವರು. ಅವರಿಗೂ ಸಮಾನವಾಗಿ ಬದುಕುವ ಹಕ್ಕನ್ನು ನೀವು ಕೊಡಬೇಕು ಎನ್ನುವುದೆ ಇಲ್ಲಿ ಬಿಜ್ಜಳನ ಜೊತೆಗೆ ಬಸವಣ್ಣನವರ ವಾದವಾಗಿದೆ.

"ಖಾಸಗಿಯಾಗಿ ಬಸವಣ್ಣನನ್ನು ಬಿಜ್ಜಳ ಪ್ರೀತಿಸಿದರೂ ಸಾರ್ವಜನಿಕವಾಗಿ ಅವನು ಎಚ್ಚರಿಕೆಯಿಂದ ವ್ಯವಸ್ಥೆಯ ಹಿತಾಸಕ್ತಿಗಳನ್ನೇ ಕಾಪಾಡುತ್ತಾನೆ." (ಪುಟ:207, 'ಆಧುನಿಕ ಕನ್ನಡ ನಾಟಕ')

ಖ್ಯಾತ ನಾಟಕ ವಿಮರ್ಶಕ ಡಾ. ಕೆ. ಮರುಳ ಸಿದ್ದಪನವರ ಪ್ರಸ್ತಾಪನೆಯೂ ಬಹಳ ಸೂಕ್ತವೆನಿಸುತ್ತದೆ. ಅವರು ಹೇಳುವ ಹಾಗೆ ಬಿಜ್ಜಳನ ಮನಸ್ಥಿಯು ಬಸವಣ್ಣನವರ ವಿಚಾರಗಳಿಗೆ ವಿರೋಧವಾಗಿದೆ. ಬಿಜ್ಜಳ ವಿಚಾರ ಮಾಡುವುದು ಕೇವಲ ಅವನ ಅಧಿಕಾರ ಉಳಿಯಬೇಕು ಹಾಗೂ ಜನರು ಅವನ ಹಿಡಿತದಲ್ಲಿರಬೇಕು. ಬಸವಣ್ಣನವರು ಹೇಳುವ ಸಮಾನತೆಯನ್ನು ಜನರಿಗೆ ಕೊಟ್ಟರೆ ಅವರು ತನ್ನ ಹಿಡಿತದಲ್ಲಿ ಉಳಿಯುವುದಿಲ್ಲ ಎನ್ನುವ ವಿಕಾರವಾದ ಮನಸ್ಥಿತಿಯೂ ಬಿಜ್ಜಳನದಾಗಿದೆ. ಎಲ್ಲರು ಆತನು ಹೇಳಿದ ಹಾಗೆ ನಡಯಬೇಕು. ಜನರು ಅವನ ಮಾತು ಮೀರಿ ಒಂದು ಹೆಜ್ಜೆ ಮುಂದೆ ಹೋದರೆ ಅದನ್ನು ಸಹಿಸಿಕೊಳ್ಳುವಷ್ಟು ವಿಶಾಲ ಹೃದಯವೂ ಅವನದಲ್ಲ. ಅದಕ್ಕಾಗಿ ಅವನ ವಿರುದ್ಧ ಬಸವಣ್ಣನವರು ಮಹಾಮನೆಯನ್ನು ಕಟ್ಟಲು ಹೋರಾಡುತ್ತಾರೆ.

**"ಈ ರಾಜ್ಯದಲ್ಲಿ ನಾಗರಿಕ ಆಡಳಿತ ಇರುವುದೇ**
**ನಿಜವಾದರೆ ತಾವು ಬಲಾತ್ಕಾರದಿಂದ ಅಧಿಕಾರ**
**ಚಲಾಯಿಸಬಾರದು ಪ್ರಭು."** **(ಪುಟ:51, 'ಶಿವರಾತ್ರಿ')**

ನಾಟಕದಲ್ಲಿ ಬಿಜ್ಜಳ ರಾಜನನ್ನು ಒಬ್ಬಳು ವೇಶ್ಯೆ ಕೇಳುವ ಮಾತಿದು. ಇದು ಬಸವಣ್ಣನವರಿಗೆ ಬೇಕಾಗಿರುವ ಸಮಾಜ. ಬಸವಣ್ಣನವರು ಸೂಳೆಯರನ್ನು ಶರಣೆಯರನ್ನಾಗಿ ಮಾಡಿದರು. ಅವರಿಗೂ ರಾಜ್ಯದಲ್ಲಿ ಸಮಾನವಾಗಿ ಬದುಕುವ ಹಕ್ಕನ್ನು ನೀಡಿದರು. ಇಲ್ಲಿ ಸೂಳೆ ಸಾವಂತ್ರಿ ಬಿಜ್ಜಳನಿಗೆ ಕೇಳುವುದೇನೆಂದರೆ ನಿಮ್ಮ ರಾಜ್ಯದಲ್ಲಿ ನಿಜವಾಗಿಯೂ ನಾಗರಿಕರಿಗೆ ಪೂರಕವಾಗಿರುವ ಆಡಳಿತವಿದೆಯೇ? ಅದು ಇರುವುದೇ ನಿಜವಾದರೆ ನೀವು ಬಲಾತ್ಕಾರದಿಂದ ಆಡಳಿತ ಮಾಡಬಾರದು. ಕ್ಷುಲ್ಲಕ ಕಾರಣವನ್ನಿಟ್ಟುಕೊಂಡು ಜನರ ಮೇಲೆ ದಬ್ಬಾಳಿಕೆಯಿಂದ ಅಧಿಕಾರ ಚಲಾಯಿಸಬಾರದು ಎಂದು ಗರ್ಜಿಸುತ್ತಾಳೆ. ಇವತ್ತಿನ ಸಮಾಜ ಕಟ್ಟಕಡೆಯ ಮಹಿಳೆಯೆಂದು ಯಾರನ್ನು ಅಗೌರವದಿಂದ ಕಾಣುತ್ತದೆಯೋ ಅವರಿಗೂ ಬಸವಣ್ಣನವರು ಪ್ರಶ್ನಿಸುವ ಹಕ್ಕನ್ನು ನೀಡಿ ಗೌರವಿಸಿದರು.

**"ಈಗೇನೂ ಇಲ್ಲ! ಕಾಯಕ ಮಾಡ್ತೀನಿ**
**ಊಟ ಮಾಡ್ತೀನಿ, ಉಳಿದದ್ದನ್ನ ಮಹಾಮನೆಗೆ**
**ಕೊಡ್ತೀನಿ, ಹೆಚ್ಚ ಗಳಿಕಿ ಆದರ ತೆರಿಗೆ ಕಟ್ಟತೀನಿ."**
**(ಪುಟ : 39, 'ಶಿವರಾತ್ರಿ')**

ಬಸವಣ್ಣನವರನ್ನು ಕೊಲೆ ಮಾಡಬೇಕೆಂದು ಕಾಶ್ಮೀರದಿಂದ ಬಂದ ಕಳ್ಳ ಚಿಕ್ಕಯ್ಯ ಹೇಳುವ ಮಾತಿದು. ಕೊಲೆ ಮಾಡಲು ಬಂದವನು ಬಸವಣ್ಣನವರ ಜೀವಪರವಾದ ಮಾನವೀಯತೆಯ ಮಾತುಗಳಿಂದ ಬದಲಾಗುತ್ತಾನೆ. ಕಳ್ಳತನವನ್ನು ಮಾಡುವ ಕಾಯಕವನ್ನು ತೊರೆದು ಸುಳ್ಳು ಹೇಳದೆ, ಜನರನ್ನು ಯಾಮಾರಿಸದೆ ಬದುಕಲು ಕಲಿಯುತ್ತಾನೆ. ಶರಣ ಧರ್ಮವನ್ನು ಸ್ವೀಕರಿಸುತ್ತಾನೆ. ಶರಣನಾದವನು ಕಾಯಕ ಮಾಡದೆ ಊಟ ಮಾಡುವ ಹಾಗಿಲ್ಲ ಹಾಗೆ ಮಾಡಿದರೆ ಅದು ಪಾಪವಾಗುತ್ತಿತ್ತು. ಬಸವಣ್ಣನವರು ಆವತ್ತಿನ ಕಾಲದ ಜನರಿಗೆ ಎಂಥಾ ಸಾಮಾಜಿಕ ಸಂವೇದನೆಯನ್ನು ಮೂಡಿಸಿದ್ದರು ಎಂಬುದು ಚಿಕ್ಕಯ್ಯನ ಪಾತ್ರದ ಮೂಲಕ ತಿಳಿಯುತ್ತದೆ. ಕಾಯಕ ಮಾಡಿ ಬಂದ ಲಾಭದಲ್ಲಿ ಉಳಿದದ್ದನ್ನು ಮಹಾಮನೆಗೆ ಕೊಡುತ್ತಿದ್ದರು. ಅದಕ್ಕಿಂತ ಹೆಚ್ಚು ಆದಾಯ ಬಂದರೆ ತೆರಿಗೆ ಕಟ್ಟುತ್ತಿದ್ದರು. ಬಸವಣ್ಣನವರ ಸಿದ್ಧಾಂತವನ್ನು ದೊಡ್ಡ ದೊಡ್ಡ ರಾಜಕಾರಣಿಗಳು ಪಾಲನೆ ಮಾಡಿದ್ದರೆ ಇವತ್ತು ಭಾರತ ದೇಶ ಭ್ರಷ್ಟಾಚಾರ ಮುಕ್ತ ದೇಶವಾಗುತ್ತಿತ್ತು. ಆದರೆ ಬಸವಣ್ಣನವರ ಸಾಮಾಜಿಕ ತಿಳುವಳಿಕೆ ಯಾರಿಗೂ ಬೇಕಾಗಿಲ್ಲ. ಜನರು ಜಾತಿ ಮತ್ತು ಧರ್ಮದ ನಶೆ ಏರಿಸಿಕೊಂಡು ಬದುಕುತ್ತಿರುವುದು ಬಹುದೊಡ್ಡ ದುರಂತವಾಗಿದೆ. ಒಟ್ಟಾರೆಯಾಗಿ 'ಶಿವರಾತ್ರಿ' ನಾಟಕದಲ್ಲಿ ಕಂಬಾರರು ಬಸವಣ್ಣನವರು ರೂಪಿಸಿದ ಶರಣ ಚಳುವಳಿಯನ್ನು ಆಧಾರವಾಗಿಟ್ಟುಕೊಂಡು ಜನರಿಗೆ ಸಾಮಾಜಿಕ ಸಂವೇದನೆಯ ಕುರಿತು ತಿಳುವಳಿಕೆಯನ್ನು ಮೂಡಿಸುವ ಒಂದು ಒಳ್ಳೆಯ ನಾಟಕವಾಗಿದೆ.

## ಆಕರ ಗ್ರಂಥಗಳು


- **ಅಶೋಕ ಟಿ.** ಪಿ. ಸಾಹಿತ್ಯ ಸಂದರ್ಭ–2011 : ಬೆಂಗಳೂರು ವಸಂತ ಪ್ರಕಾಶನ.
- **ಚಂದ್ರಶೇಖರ ಕಂಬಾರ,** ಶಿವರಾತ್ರಿ –2011 : ಬೆಂಗಳೂರು, ಬಸವನಗುಡಿ, ಅಂಕಿತ ಪುಸ್ತಕ ಪ್ರಕಾಶನ.
- **ಮರುಳಸಿದ್ದಪ್ಪ ಕೆ.** ಆಧುನಿಕ ಕನ್ನಡ ನಾಟಕ –2002 : ಬೆಂಗಳೂರು, ಬಸವನಗುಡಿ, ಅಂಕಿತ ಪುಸ್ತಕ ಪ್ರಕಾಶನ.
- **ಮಾಧವ ಕುಲಕರ್ಣಿ.** ಪರಿಭಾವ – 2011 : ಮೈಸೂರು ಮಾನಸ ಬುಕ್ ಹೌಸ್.
- **ಶಿವರಾಮಯ್ಯ,** ಸಾಹಿತ್ಯ ಪರಿಸರ – 1993 : ಚಿಕ್ಕಮಗಳೂರು ವೈಚಾರಿಕ ಪುಸ್ತಕ ಮಾಲೆ.


## – ಸೂಚನೆ –

ಲೇಖನ ಹಾಗೂ ಸಂಶೋಧನಾ ಲೇಖನಗಳನ್ನು ಕಳಿಸುವವರು ಕಡ್ಡಾಯವಾಗಿ ಪತ್ರಿಕೆಯ ಸದಸ್ಯತ್ವ ಪಡೆದವರಾಗಿರಬೇಕು. ಲೇಖನವಾದಲ್ಲಿ 1500 ಶಬ್ದಗಳನ್ನು ಮೀರಬಾರದು ಹಾಗೂ ಸಂಶೋಧನಾ ಲೇಖನವಾದಲ್ಲಿ 2000 ಶಬ್ದಗಳನ್ನು ಮೀರಿರಬಾರದು. ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಗೆ ಚಂದಾದಾರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿರಿ. ಉತ್ತಮ ಲೇಖನ ಅಥವಾ ಸಂಶೋಧನಾ ಲೇಖನಗಳನ್ನು ಕಳಿಸಿರಿ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಭಾರತದ ಶೈಕ್ಷಣಿಕ ಚಿತ್ರಣ ಬದಲಿಸಲಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020

✍ **ಡಾ. ಪ್ರಕಾಶ ಕೆ. ಬಡಿಗೇರ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

**ಶಿ**ಕ್ಷಣವನ್ನು ವ್ಯಕ್ತಿಗಳು, ಸಮಾಜಿಕ ಗುಂಪುಗಳು, ರಾಷ್ಟ್ರಗಳು ಮತ್ತು ಮಾನವ ಸಮಾಜದ ಪ್ರಮುಖ ಅವಶ್ಯಕತೆಯಾಗಿ ನೋಡಲಾಗಿದೆ. ಆಧುನಿಕ ಜಗತ್ತು ಇದನ್ನು ಮೂಲಭೂತ ಮಾನವ ಹಕ್ಕು ಎಂದು ಪರಿಗಣಿಸುತ್ತದೆ. ಭಾರತೀಯ ಗಣರಾಜ್ಯದ ರಚನೆಯ ನಂತರ, ಹೆಚ್ಚಿನ ಹೆಗ್ಗುರುತು ಸಮಿತಿಗಳು ಅಥವಾ ಶಿಕ್ಷಣದ ಆಯೋಗಗಳು ಎಲ್ಲರಿಗೂ ಶಿಕ್ಷಣದ ಕಲ್ಪನೆಯನ್ನು ನಿಸ್ಸಂದಿಗ್ಧವಾಗಿ ಒತ್ತಿಹೇಳುತ್ತವೆ. ಸಮಕಾಲಿನ ಶಿಕ್ಷಣದ ಅನೇಕ ನಿರ್ಣಾಯಕ ಕಾಳಜಿಗಳು ಹಿಂದಿನ ನೀತಿ ದಾಖಲೆಗಳಲ್ಲೂ ಉಲ್ಲೇಖವನ್ನು ಹೊಂದಿವೆ. ಆದರೂ, ಹಿಂದಿನ ವರದಿಗಳು ಮತ್ತು ನೀತಿಗಳ ಅಧ್ಯಯನವು ನಮ್ಮ ದೇಶದ ಶೈಕ್ಷಣಿಕ ಪ್ರಯಾಣವು ಸಾಕಷ್ಟು ಅಸಮವಾಗಿದೆ ಎಂದು ಸ್ಪಷ್ಟಪಡಿಸುತ್ತದೆ ಮತ್ತು ಏಳು ದಶಕಗಳ ಸ್ವಾತಂತ್ರ್ಯದ ನಂತರವು ಅನೇಕ ನಿಜವಾದ ಆಕಾಂಕ್ಷೆಗಳು ಅವಾಸ್ತವವಾಗಿದೆ.

ನಮ್ಮ ಪೂರ್ವವರ್ತಿಗಳು ಈ ಕಾಳಜಿಯನ್ನು ಸಮಂಜಸವಾದ ಪ್ರಾಮಾಣೀಕತೆಯಿಂದ, ಕನಿಷ್ಠ ಯೋಜನಾ ಮಟ್ಟದಲ್ಲಿ ನಡೆಸಲಿಲ್ಲ ಎಂದು ಹೇಳಿಕೊಳ್ಳುವುದು ಅನ್ಯಾಯವಾಗುತ್ತದೆ. ಆದರೂ ವ್ಯಾಪಕವಾದ ಜನಸಂಖ್ಯೆ ಮತ್ತು ವೈವಿಧ್ಯಮಯ ದೇಶದಲ್ಲಿ ದಿಗ್ಭ್ರಮೆಗೊಳಿಸುವ ಸಮಾಜಿಕ ಆರ್ಥಿಕ ವ್ಯತ್ಯಾಸಗಳಲ್ಲಿ ನೀತಿಯ ಕಾರ್ಯಗತಗೊಳಿಸುವಿಕೆಯು ಯಾವಾಗಲೂ ಒಂದು ಸವಾಲಾಗಿದೆ. 1950 ರ ದಶಕದ ಆರಂಭದಿಂದ ಪ್ರಕಟವಾದ ವರದಿಗಳು ಅಥವಾ ನೀತಿ ದಾಖಲೆಗಳಲ್ಲಿನ ಪ್ರಮುಖ ಶೈಕ್ಷಣಿಕ ಕಾಳಜಿಗಳ ಪುನಾರವರ್ತನೆಯಲ್ಲಿ ಇದು ಸ್ಪಷ್ಟವಾಗಿ ಪ್ರತಿಫಲಿಸುತ್ತದೆ.

ಕೊನೆಯ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 1986 ರಲ್ಲಿ ರಚಿಸಲಾಯಿತು. ಈ 34 ವರ್ಷಗಳಲ್ಲಿ, ಪ್ರಪಂಚವು ಅಭೂತಪೂರ್ವ ರೀತಿಯಲ್ಲಿ ಬದಲಾಗಿದೆ. ತಾಂತ್ರಿಕ ಬೆಳವಣಿಗೆಗಳಿಂದ ಉತ್ತೇಜಿಸಲ್ಪಟ್ಟ ವಿಶ್ವದ ರಾಜಕೀಯ ಆರ್ಥಿಕತೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಲಿಂಗ, ವರ್ಗ ಜಾತಿ, ಸಂಸ್ಕೃತಿ, ಭೌಗೋಳಿಕ ದೂರ ಮತ್ತು ಇನ್ನಿತರ ಅಡೆತಡೆಗಳನ್ನು ಕಿತ್ತು ಹಾಕುವಲ್ಲಿ ಗಮನಾರ್ಹವಾಗಿ ಕೊಡುಗೆ ನೀಡಿವೆ. ಇದೆಲ್ಲವು ಜನರಲ್ಲಿ ಆಕಾಂಕ್ಷೆ ಮತ್ತು ಭರವಸೆಯ ಬಲವಾದ ಪ್ರಜ್ಞೆಯನ್ನು ಸೃಷ್ಟಿಸಿದೆ. 1991ರ ನಂತರ ತ್ವರಿತ ಆರ್ಥಿಕ ಬೆಳವಣಿಗೆಗಳು, ಭಾರತವು ಆರ್ಥಿಕವಾಗಿ ತೆರದ ವರ್ಷ, ಜ್ಞಾನ ಮತ್ತು ವಿಶೇಷ ಕೌಶಲ್ಯಗಳಿಗೆ ಹೆಚ್ಚಿನ ಬೇಡಿಕೆಯನ್ನು ಉಂಟು ಮಾಡಿದೆ. ಆರ್ಥಿಕ ಉದಾರೀಕರಣದ ನಂತರದ ಎರಡೂವರೆ ದಶಕಗಳಲ್ಲಿ, ಮಹತ್ವಾಕಾಂಕ್ಷೆಯ ಮತ್ತು ಪ್ರಕ್ಷುಬ್ಧ ಭಾರತದ ಅವೇಗಕ್ಕೆ ಅಡ್ಡಿಯುಂಟು ಮಾಡುವ ಸಮಗ್ರ ವ್ಯವಸ್ಥಿತ ಅಸಮರ್ಪಕತೆಗಳನ್ನು ಪರಿಹರಿಸಲು ಯಾವುದೇ ಸಮಗ್ರ ರಾಷ್ಟ್ರೀಯ ದೃಷ್ಟಿಕೋನವನ್ನು ಕಲ್ಪಿಸಲಾಗಲಿಲ್ಲ.

ಭಾರತದಲ್ಲಿ 21 ನೇ ಶತಮಾನಕ್ಕೆ ಹೊಂದಿಕೊಳ್ಳುವ ಮತ್ತು ಅಗತ್ಯ ಎನಿಸಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಚಿವ ಸಂಪುಟವು ಅನುಮೋದನೆ ನೀಡಿದೆ. 34 ವರ್ಷಗಳ ಹಿಂದಿನ ಶಿಕ್ಷಣ ನೀತಿಯನ್ನು ಬದಲಾಯಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕ್ರಾಂತಿಕಾರಿ ಹೆಜ್ಜೆ ಇಟ್ಟಿದೆ. 29 ಜುಲೈ 2020 ರಂದು ಬಿಡುಗಡೆಯಾದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) 2020 ಒಂದು ಐತಿಹಾಸಿಕ ಮತ್ತು ಮಹತ್ವಾಕಾಂಕ್ಷೆಯ ದಾಖಲೆಯಾಗಿದೆ. ಭವಿಷ್ಯದ ಮೇಲೆ ಕಣ್ಣಿಟ್ಟು, ಇದು ನಮ್ಮ ಕಾಲದಲ್ಲಿ ಶಿಕ್ಷಣದ ಎಲ್ಲಾ ಅಂಶಗಳನ್ನು ಹೇಳುತ್ತದೆ. ಈ ನೀತಿಯು ಅದರ ಎಲ್ಲಾ ಪೂರ್ವವರ್ತಿಗಳಿಂದ ಆಮೂಲಾಗ್ರವಾಗಿ ಭಿನ್ನವಾಗಿದೆ ಮತ್ತು ಇದು ನಮ್ಮ ಶೈಕ್ಷಣಿಕ ಅವಶ್ಯಕತೆಗಳನ್ನು ಹೊಸ ರೀತಿಯಲ್ಲಿ ನೋಡುತ್ತದೆ.

ಪ್ರತಿಯೊಬ್ಬ ಭಾರತೀಯರಲ್ಲಿ ದೇಶದ ಬಗ್ಗೆ ಆಳವಾದ ಹೆಮ್ಮೆ ಮೂಡಿಸಬೇಕಿದೆ. ಇದರ ಜೊತೆಗೆ ಆಲೋಚನಾ ಶಕ್ತಿ, ಜ್ಞಾನ, ಸ್ಫೂರ್ತಿ, ಚೈತನ್ಯ, ಕೌಶಲ್ಯಾಭಿವೃದ್ಧಿ, ಮೌಲ್ಯ ಮತ್ತು ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸುವ ಉದ್ದೇಶವನ್ನು ಹೊಸ ಶಿಕ್ಷಣ ನೀತಿಯು ಹೊಂದಿದೆ.

ಹೊಸ ನೀತಿಯು ಭಾರತ ಜಾಗತಿಕ ಜ್ಞಾನದ ಮಹಾಶಕ್ತಿಯತ್ತ ಕೊಂಡೊಯ್ಯುವ ಉದ್ದೇಶವನ್ನು ಹೊಂದಿದೆ. ಐಐಟಿ ಸೇರಿದಂತೆ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡುವ ದೃಷ್ಟಿಯಿಂದ ಹೊಸ ಶಿಕ್ಷಣ ನೀತಿಯಲ್ಲಿ ಹಲವು ಬದಲಾವಣೆಗಳನ್ನು ತರಲಾಗಿದೆ. ಮಾನವಸಂಪನ್ಮೂಲ ಸಚಿವಾಲಯವೇ ಇದೀಗ ಶಿಕ್ಷಣ ಸಚಿವಾಲಯ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (Ministry of Human Resource and Development) ದ ಹೆಸರನ್ನು ಶಿಕ್ಷಣ ಸಚಿವಾಲಯ (Ministry of Education) ಎಂದು ಮರುನಾಮಕರಣ ಮಾಡಲಾಗಿದೆ. ಕೇಂದ್ರ ಸಚಿವ ಸಂಪುಟವು ಹೆಚ್‌ಆರ್‌ಡಿ ಮರುನಾಮಕರಣಕ್ಕೆ ಅನುಮೋದನೆ ನೀಡಿದ್ದು, ಅಧಿಕೃತ ಘೋಷಣೆಯೊಂದೇ ಬಾಕಿ ಉಳಿದಿದೆ.

## ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮುಖ್ಯಾಂಶಗಳು

1. ಇನ್ನು ಮುಂದೆ 10+2 ಶಿಕ್ಷಣ ವ್ಯವಸ್ಥೆ ಇರುವುದಿಲ್ಲ. 10+2 ಬೋರ್ಡ್ ರಚನೆಯನ್ನು ಕೈಬಿಡಲಾಗಿದೆ.
2. ಹೊಸ ಶಾಲೆಯ ರಚನೆಯು 5+3+3+4 ಆಗಿರುತ್ತದೆ.
   - ಇದರರ್ಥ ಶಾಲೆಯ ಮೊದಲ 5 ವರ್ಷಗಳು ಅಡಿಪಾಯ ಹಂತ.
   - 3 ರಿಂದ 5 ನೇ ತರಗತಿಯವರೆಗಿನ ಮೂರು ವರ್ಷಗಳನ್ನು ಪೂರ್ವಸಿದ್ಧತಾ ಹಂತವಾಗಿ ವಿಂಗಡಿಸಲಾಗಿದೆ.
   - ನಂತರ ಮೂರು ವರ್ಷಗಳು ಮಧ್ಯಮ ಹಂತವಾಗಿ ವಿಂಗಡಿಸಲಾಗಿದೆ.
   - ನಂತರ ನಾಲ್ಕು ವರ್ಷವನ್ನು ದ್ವಿತೀಯ ಹಂತವನ್ನಾಗಿ ವಿಂಗಡಿಸಲಾಗಿದೆ. ಶಾಲೆಗಳು ಕಲೆ,ವಾಣಿಜ್ಯ, ವಿಜ್ಞಾನದ ಹೊಳೆಗಳ ಯಾವುದೇ ಕಟ್ಟನಿಟ್ಟಿನ ರಚನೆಯನ್ನು ಹೊಂದಿರುವುದಿಲ್ಲ. ವಿದ್ಯಾರ್ಥಿಗಳು ತಾವು ಬಯಸುವ ಯಾವುದೇ ಕೋರ್ಸುಗಳನ್ನು ತೆಗೆದುಕೊಳ್ಳಬಹುದು.
3. ವಿದ್ಯಾರ್ಥಿಗಳಿಗೆ 5 ನೇ ತರಗತಿಯವರೆಗೆ ಮಾತೃ ಭಾಷೆಯಲ್ಲಿ ಶಿಕ್ಷಣ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡಬೇಕು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿದ್ಯಾರ್ಥಿಗಳಿಗೆ 6 ನೇ ತರಗತಿಯಿಂದಲೇ ಕೋಡಿಂಘ್ ಪಾಠವನ್ನು ಹೇಳಿಕೊಡಬೇಕು.

4. ಯಾವುದೇ ಪದವಿ 4 ವರ್ಷಗಳು
5. 6 ನೇ ತರಗತಿಯ ನಂತರ ವೃತ್ತಿಪರ ಶಿಕ್ಷಣ ಲಭ್ಯವಿದೆ.
6. 8 ರಿಂದ 11 ರವರೆಗೆ ವಿದ್ಯಾರ್ಥಿಗಳು ವಿಷಯಗಳನ್ನು ಆಯ್ಕೆ ಮಾಡಬಹುದು.
7. ಎಲ್ಲಾ ಪದವಿ ಕೋರ್ಸ್ ಪ್ರಮುಖ ಮತ್ತು ಚಿಕ್ಕದಾಗಿರುತ್ತದೆ ಉದಾಹರಣೆ : ವಿಜ್ಞಾನ ವಿದ್ಯಾರ್ಥಿಯು ಭೌತಶಾಸ್ತ್ರವನ್ನು ಮೇಜರ್ ಮತ್ತು ಸಂಗೀತವನ್ನು ಚಿಕ್ಕದಾಗಿ ಹೊಂದಬಹುದು. ಅವರು ಆಯ್ಕೆ ಮಾಡಬಹುದಾದ ಯಾವುದೇ ಸಂಯೋಜನೆ.
8. ಎಲ್ಲಾ ಉನ್ನತ ಶಿಕ್ಷಣವನ್ನು ಕೇವಲ ಒಂದು ಪ್ರಾಧಿಕಾರದಿಂದ ನಿಯಂತ್ರಿಸಲಾಗುತ್ತದೆ.
9. ಯುಜಿಸಿ, ಎಐಸಿಟಿಇ ವಿಲೀನಗೊಳ್ಳುತ್ತದೆ.
10. ಎಲ್ಲಾ ವಿಶ್ವವಿದ್ಯಾಲಯ ಸರ್ಕಾರ, ಖಾಸಗಿ, ಮುಕ್ತ, ವೃತ್ತಿಪರ ಇತ್ಯಾದಿಗಳಿಗೆ ಒಂದೇ ಶ್ರೇಣಿ ಮತ್ತು ಇತರ ನಿಯಮಗಳಿವೆ.
11. ದೇಶದ ಎಲ್ಲಾ ರೀತಿಯ ಶಿಕ್ಷಕರಿಗೆ ಹೊಸ ಶಿಕ್ಷಕರ ತರಬೇತಿ ಮಂಡಳಿಯನ್ನು ಸ್ಥಾಪಿಸಲಾಗುವುದು.
12. ಯಾವುದೇ ಕಾಲೇಜ್‌ಗಳು ಮಾನ್ಯತೆ ಮತ್ತು ಅದರ ರೇಟಿಂಗ್ ಆಧರಿಸಿ ಸ್ವಾಯತ್ತ ಹಕ್ಕು ಹಾಗೂ ಅನುದಾನ ಪಡೆಯುತ್ತವೆ.
13. ಪೋಷಕರು ಮನೆಯಲ್ಲಿ 3 ವರ್ಷಗಳವರೆಗೆ ಮತ್ತು ಶಾಲಾಪೂರ್ವ 3 ರಿಂದ 6 ರವರೆಗೆ ಮಕ್ಕಳಿಗೆ ಕಲಿಸಲು ಹೊಸ ಕಲಿಕಾ ಕಾರ್ಯಕ್ರಮ ಸರ್ಕಾರ ರಚಿಸುತ್ತದೆ.
14. ಯಾವುದೇ ಕೋರ್ಸುನಿಂದ ಬಹು ಪ್ರವೇಶ ಮತ್ತು ನಿರ್ಗಮನ
15. ಪ್ರತಿ ವರ್ಷ ಪದವಿ ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯ ನೀಡುವ ವ್ಯವಸ್ಥೆಯಿರುತ್ತದೆ. ವಿದ್ಯಾರ್ಥಿಯು ಕೋರ್ಸ್ ಅರ್ಧಕ್ಕೆ ಬಿಟ್ಟು ಮತ್ತೆ ಮುಂದುವರಿಸಲು ಬಂದಲ್ಲಿ ಅಂಥವರಿಗೆ ಶಿಕ್ಷಣ ಸಾಲ ಸೌಲಭ್ಯವನ್ನು ಒದಗಿಸಲಾಗುತ್ತದೆ.
16. ಎಲ್ಲಾ ಶಾಲೆಗಳಲ್ಲಿ ಪರೀಕ್ಷೆಗಳು ಸೆಮಿಸ್ಟರ್ ಆಧಾರದಲ್ಲಿ ವರ್ಷಕ್ಕೆ ಎರಡು ಬಾರಿ ನಡೆಯುತ್ತವೆ.
17. ಯಾವುದೇ ವಿಷಯದ ಮುಖ್ಯ ಜ್ಞಾನಕ್ಕೆ ಹೋಲಿಸಿದ್ದಲ್ಲಿ ಪಠ್ಯಕ್ರಮ ಕಡಿಮೆಯಾಗಿರುತ್ತದೆ.
18. ವಿದ್ಯಾರ್ಥಿಗಳ ಪ್ರಾಯೋಗಿಕ ಮತ್ತು ತಂತ್ರಜ್ಞಾನದ ಮೇಲೆ ಹೆಚ್ಚಿನ ಗಮನ.
19. ಯಾವುದೇ ಪದವಿ ವಿದ್ಯಾರ್ಥಿ ಒಂದು ವರ್ಷ ವಿದ್ಯಾಭ್ಯಾಸ ಕಡಿತಗೊಳಿಸಿದರೆ ಅಂಥ ವಿದ್ಯಾರ್ಥಿಗೆ ಸಾಮಾನ್ಯ ಪ್ರಮಾಣಪತ್ರ ನೀಡಲಾಗುತ್ತದೆ. ಎರಡು ವರ್ಷ ಪೂರ್ಣಗೊಳಿಸಿದ ವಿದ್ಯಾರ್ಥಿಗೆ ಡಿಪ್ಲೋಮಾ ಪ್ರಮಾಣ ಪತ್ರ ನೀಡಲಾಗುತ್ತದೆ. ಹಾಗೂ ಕೋರ್ಸು ಪೂರ್ಣಗೊಳಿಸಿದ ವಿದ್ಯಾರ್ಥಿಗೆ ಪದವಿ ಪ್ರಮಾಣ ಪತ್ರ ನೀಡಲಾಗುತ್ತದೆ. ಇದರಿಂದ ಮಧ್ಯದಲ್ಲಿ ಕಾಲೇಜ್ ತೊರೆದ ವಿದ್ಯಾರ್ಥಿಯ ಯಾವುದೇ ವರ್ಷವು ವ್ಯರ್ಥವಾಗುವುದಿಲ್ಲ.
20. ಎಲ್ಲಾ ವಿಶ್ವವಿದ್ಯಾಲಯಗಳ ಪದವಿ ಕೋರ್ಸ್ ಫೀಡ್ ಅನ್ನು ಪ್ರತಿ ಕೋರ್ಸ್ ಕ್ಯಾಂಪಿಂಗ್ ಮಾಡುವ ಮೂಲಕ ಒಂದೇ ಪ್ರಾಧಿಕಾರದಿಂದ ನಿಯಂತ್ರಿಸಲಾಗುತ್ತದೆ. ಪದವಿ ಶಿಕ್ಷಣಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ಶಿಸ್ತುಕ್ರಮಗಳು;

1. ಐಐಟಿಯಂತಹ ಎಂಜಿನಿಯರಿಂಗ್ ಸಂಸ್ಥೆಗಳು ಸಹ ಹೆಚ್ಚು ಕಲೆ ಮತ್ತು ಮಾನವೀಯತೆಯೊಂದಿಗೆ ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣದತ್ತ ಸಾಗುತ್ತವೆ. ವಿದ್ಯಾರ್ಥಿಗಳು ಕಲೆ ಮತ್ತು ಮಾನವೀಯತೆ ಜೊತೆ ಹೆಚ್ಚಿನ ವಿಜ್ಞಾನವನ್ನು ಕಲಿಯುವ ಗುರಿ ಹೊಂದಲಿದ್ದಾರೆ.
2. ಭಾಷೆಗಳು, ಸಾಹಿತ್ಯ, ಸಂಗೀತ, ತತ್ವಶಾಸ್ತ್ರ, ಕಲೆ, ನೃತ್ಯ ರಂಗಭೂಮಿ, ಶಿಕ್ಷಣ, ಗಣಿತ, ಅಂಕಿಅಂಶ, ಶುದ್ಧ ಮತ್ತು ಅನ್ವಯಿಕ ವಿಜ್ಞಾನ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಕ್ರೀಡೆ, ಅನುವಾದ ಮತ್ತು ವ್ಯಾಖ್ಯಾನ ಇತ್ಯಾದಿ ವಿಭಾಗಗಳನ್ನು ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಿ ಬಲಪಡಿಸಲಾಗುವುದು.
3. ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ (ಎಬಿಸಿ)ಅನ್ನು ಸ್ಥಾಪಿಸ ಲಾಗುವುದು. ಅದು ಗಳಿಸಿದ ಶೈಕ್ಷಣಿಕ ಸಾಲಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸುತ್ತದೆ.
4. ನಾಲ್ಕು ವರ್ಷಗಳಲ್ಲೇ ಕಠಿಣ ಸಂಶೋಧನಾ ಯೋಜನೆಯನ್ನು ವಿದ್ಯಾರ್ಥಿಗಳು ಪೂರ್ಣಗೊಳಿಸಿದರೆ ಸಂಶೋಧನೆಯ ಜೊತೆಗೆ ಪದವಿಯನ್ನು ಪಡೆದುಕೊಳ್ಳಬಹುದು.
5. ಐಇಟಿಗಳು, ಐಐಎಂಗಳು, ಇತ್ಯಾದಿಗಳಿಗೆ ಸಮನಾಗಿ, ಸಮಗ್ರ ಮತ್ತು ಬಹುಶಿಸ್ತೀಯ ಶಿಕ್ಷಣಕ್ಕಾಗಿ ಮಾದರಿ ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಮೆರುಗಳು(ಬಹುಶಿಸ್ತೀಯ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾಲಯಗಳು ಎಂದು ಕರೆಯಲಾಗುತ್ತದೆ.
6. ಉನ್ನತ ಶಿಕ್ಷಣ ಸಂಸ್ಥೆಗಳು ಉನ್ನತ ಮಟ್ಟದ ಪರೀಕ್ಷೆಗಳಿಂದ ನಿರಂತರ ಮತ್ತು ಸಮಗ್ರ ಮೌಲ್ಯಮಾಪನದತ್ತಸಾಗುತ್ತಿವೆ.
7. ಕೈಗೆಟುಕುವ ವೆಚ್ಚದಲ್ಲಿ ಪ್ರೀಮಿಯಂ ಶಿಕ್ಷಣವನ್ನು ಒದಗಿಸುವ ಜಾಗತಿಕ ಅಧ್ಯಯನ ತಾಣವಾಗಿ ಭಾರತವನ್ನು ಉತ್ತೇಜಿಸ ಲಾಗುವುದು. ವಿದೇಶ ವಿದ್ಯಾರ್ಥಿಗಳಿಗೆ ಅತಿಥ್ಯ ವಹಿಸುವ ಪ್ರತಿ ಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿ ಕಛೇರಿ ಸ್ಥಾಪಿಸಲಾಗುವುದು.
8. ಹೆಚ್ಚಿನ ಕಾರ್ಯಕ್ಷಮತೆ ಹೊಂದಿರುವ ಭಾರತೀಯ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳನ್ನು ವಿದೇಶಗಳಲ್ಲಿ ಸ್ಥಾಪಿಸಲು ಪ್ರೋತ್ಸಾಹಿಸಲಾಗುತ್ತದೆ. ವಿಶ್ವದ ಅಗ್ರ 100 ವಿಶ್ವವಿದ್ಯಾಲಯ ಗಳಂತಹ ಆಯ್ದ ವಿಶ್ವವಿದ್ಯಾಲಯಗಳಿಗೆ ಭಾರತದಲ್ಲಿ ಕಾರ್ಯನಿರ್ವಹಿಸಲು ಅನುಕೂಲವಾಗಲಿದೆ.
9. ಪ್ರತಿ ಶಿಕ್ಷಣ ಸಂಸ್ಥೆಯಲ್ಲಿ ಒತ್ತಡ ಮತ್ತು ಭಾವನಾತ್ಮಕ ಹೊಂದಾಣಿಕೆಗಳನ್ನು ನಿರ್ವಹಿಸಲು ಸಮಾಲೋಚನಾ ವ್ಯವಸ್ಥೆಗಳಿರಬೇಕು.
10. ಎಸ್‌ಸಿ, ಎಸ್‌ಟಿ, ಓಬಿಸಿ ಮತ್ತು ಇತರ ಎಸ್‌ಇಡಿಜಿಗಳಿಗೆ ಸೇರಿದ ವಿದ್ಯಾರ್ಥಿಗಳ ಅರ್ಹತೆ ಉತ್ತೇಜಿಸಲು ಪ್ರಯತ್ನಿಸಲಾಗುವುದು.
11. ಮುಂದಿನ ದಶಕದಲ್ಲಿ ವೃತ್ತಿಪರ ಶಿಕ್ಷಣವನ್ನು ಎಲ್ಲಾ ಶಾಲಾ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹಂತ ಹಂತವಾಗಿ ಸಂಯೋಜಿಸಲಾಗುವುದು.
12. 2025 ರ ಹೊತ್ತಿಗೆ ಶಾಲೆ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯ ಮೂಲಕ ಕನಿಷ್ಠ 50% ಕಲಿಯುವರು ವೃತ್ತಿಪರ ಶಿಕ್ಷಣಕ್ಕೆ ಹೊಂದಿಕೊಳ್ಳುತ್ತಾರೆ.
13. 2013ರಲ್ಲಿ ಪರಿಚಯಿಸಲಾದ ಪದವಿಗಳು ಅಸ್ತಿತ್ವದಲ್ಲಿರುತ್ತವೆ. ಆದರೆ 4 ವರ್ಷದ ಮಲ್ಟಿಡಿಸಿಪ್ಲೇನರಿ ಬ್ಯಾಚುಲರ್ ಪ್ರೋಗ್ರಾಂಗಳು ಸೇರಿದಂತೆ ಎಲ್ಲಾ ಇತರ ಪದವಿಪೂರ್ವ ಕಾರ್ಯಕ್ರಮಗಳಿಗೆ ದಾಖಲಾದ ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣಗಳು ಲಭ್ಯವಿರುತ್ತವೆ.
14. ಲೋಕ ವಿದ್ಯಾ ಅಂದರೆ ಭಾರತದಲ್ಲಿ ಅಭಿವೃದ್ಧಿಪಡಿಸಿದ ಪ್ರಮುಖ ವೃತ್ತಿಪರ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಪ್ರವೇಶಿಸಲಾಗುವುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಶಿಕ್ಷಣ ಸಚಿವಾಲಯ ಎಂದು ಮರುನಾಮಕರಣ ಮಾಡಬಹುದಾದ ಮಾನವ ಸಂಪನ್ಮೂಲ ಸಚಿವಾಲಯವು ವೃತ್ತಿಪರ ಶಿಕ್ಷಣದ ಏಕೀಕರಣಕ್ಕಾಗಿ ರಾಷ್ಟ್ರೀಯ ಸಮಿತಿಯನ್ನು ರಚಿಸುತ್ತದೆ.

15. ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವನ್ನು (ಎನ್‌ಆರ್‌ಎಫ್) ರಚಿಸುವ ಬಗ್ಗೆ ನೀತಿಯಲ್ಲಿ ಉಲ್ಲೇಖಿಸಲಾಗಿದೆ.
16. ಭಾರತದ ಉನ್ನತ ಶಿಕ್ಷಣ ಆಯೋಗದ(ಎಚ್‌ಇಸಿಐ) ರಚನೆಯ ಬಗ್ಗೆಯೂ ನೀತಿಯಲ್ಲಿ ಉಲ್ಲೇಖವಿದೆ.

ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಸೂಕ್ಷ್ಮ ವ್ಯತ್ಯಾಸಗಳನ್ನು ನೋಡುವಾಗ, ನಮ್ಮ ಅಪಾರ ಜನಸಂಖ್ಯೆ ಮತ್ತು ರಾಷ್ಟ್ರೀಯ ಆರ್ಥಿಕತೆಯ ಅಗತ್ಯತೆಗಳಿಗೆ ನೀತಿ ನಿರೂಪಕರು ಸೂಕ್ಷ್ಮವಾಗಿ ಗಮನಹರಿಸಿದ್ದಾರೆ. ದೊಡ್ಡ ಪ್ರಮಾಣದ ಉದ್ಯೋಗ ಸೃಷ್ಟಿಯ ಜೊತೆಗೆ ಉನ್ನತ ಜ್ಞಾನವನ್ನು ಸೃಷ್ಟಿಸುವುದು ನಮ್ಮ ಅವಶ್ಯಕತೆಯಾಗಿದೆ. ನಮ್ಮ ಸದಾ ವಿಸ್ತರಿಸುತ್ತಿರುವ ಮತ್ತು ಸದಾ ವಿಕಸಿಸುತ್ತಿರುವ ಆರ್ಥಿಕತೆಗೆ ವೈವಿಧ್ಯಮಯ ಮತ್ತು ವಿಶೇಷ ಕೌಶಲ್ಯ ಹೊಂದಿರುವ ಕಾರ್ಮಿಕರು ಮತ್ತು ವೃತ್ತಿಪರರು ಬೇಕಾಗಿದ್ದಾರೆ. ಮಹಾತ್ಮ ಗಾಂಧಿಯವರು ವೃತ್ತಿಪರ ಶಿಕ್ಷಣದ ಒತ್ತಿಹೇಳುವಿಕೆಯ ಹೊರತಾಗಿಯೂ ವೃತ್ತಿಪರ ಶಿಕ್ಷಣ ಮತ್ತು ಮುಖ್ಯವಾಹಿನಿಯ ಶಿಕ್ಷಣದ ಯಾವುದೇ ಪರಿಣಾಮಕಾರಿ ಸಿಂಕ್ರೊನೈಸೇಶನ್ ಅನ್ನು ರಚಿಸಲು ನಮಗೆ ಸಾಧ್ಯವಾಗಲಿಲ್ಲ.

ನೀತಿಯು ಈ ಸ್ಥಿತಿ ಶ್ರೇಣಿಯನ್ನು ತೆಗೆದುಹಾಕ ಬಯಸುತ್ತದೆ ಮತ್ತು ವೃತ್ತಿಪರ ಶಿಕ್ಷಣವನ್ನು ಮುಖ್ಯವಾಹಿನಿಯ ಶಿಕ್ಷಣದೊಂದಿಗೆ ಸಂಯೋಜಿಸುವ ಗುರಿಯನ್ನು ಹೊಂದಿದೆ. ಮಧ್ಯಮ ಮತ್ತು ಮಾಧ್ಯಮಿಕ ವರ್ಗಗಳಲ್ಲಿ ವೃತ್ತಿಪರ ಮಾನ್ಯತೆಯಿಂದ ಪ್ರಾರಂಭಿಸಿ, ಗುಣಮಟ್ಟದ ವೃತ್ತಿಪರ ಶಿಕ್ಷಣವನ್ನು ಉನ್ನತ ಶಿಕ್ಷಣಕ್ಕೆ ಸರಾಗವಾಗಿ ಸಂಯೋಜಿಸಲಾಗುವುದು. ಪ್ರತಿಯೊಬ್ಬ ವ್ಯಕ್ತಿಯು ಕನಿಷ್ಠ ಒಂದು ವೃತ್ತಿಯನ್ನು ಕಲಿಯುತ್ತಾನೆ ಮತ್ತು ಶ್ರಮದ ಘನತೆ ಮತ್ತು ವಿವಿಧ ವೃತ್ತಿಗಳಿಗೆ ಗೌರವವನ್ನು ಬೆಳೆಸಲು ಸಾಧ್ಯವಾಗುತ್ತದೆ ಎಂದು ಇದು ಖಚಿತಪಡಿಸುತ್ತದೆ. ಇದು ನಮ್ಮ ಜನಸಂಖ್ಯಾ ಲಾಭಾಂಶವನ್ನು ಸ್ಪರ್ಶಿಸಲು ಮತ್ತು ಆರ್ಥಿಕತೆಯ ಕೌಶಲ್ಯ-ಕೊರತೆಗಳನ್ನು ಪರಿಹರಿಸಲು ಸಹ ನಮಗೆ ಸಹಾಯ ಮಾಡುತ್ತದೆ. ವೃತ್ತಿಪರ ಸಾಮರ್ಥ್ಯವು ಶೈಕ್ಷಣಿಕ ಅಥವಾ ಇತರ ಸಾಮರ್ಥ್ಯಗಳ ಅಭಿವೃದ್ಧಿಯೊಂದಿಗೆ ಕೈಜೋಡಿಸುತ್ತದೆ ಎಂದು ನೀತಿ ರೂಪಿಸಿದೆ.

## ನೂತನ ಶಿಕ್ಷಣ ನೀತಿಯಲ್ಲಿರುವ ಇತರೆ ಪ್ರಮುಖಾಂಶಗಳು

- ಸಂಶೋಧನೆ ಸಂಬಂಧ ಇನ್ನು ಮುಂದೆ ಯಾವುದೇ ಎಂಪಿಎಲ್ ಇರುವುದಿಲ್ಲ.
- ಬೋರ್ಡ್ ಪರೀಕ್ಷೆಗಳ ಮಹತ್ವ ಕಡಿಮೆ ಮಾಡುವುದು, ಪರೀಕ್ಷೆಗಳನ್ನು ವರ್ಷಕ್ಕೆ ಎರಡು ಬಾರಿ ನಡೆಸಲಾಗುವುದು.
- ಮಾರ್ಕ್ಸ್ ಕಾರ್ಡಗಳು ಕೇವಲ ಅಂಕಗಳು ಮತ್ತು ಹೇಳಿಕೆಗಳಿಗೆ ಬದಲಾಗಿ ಕೌಶಲ್ಯ ಮತ್ತು ಸಾಮರ್ಥ್ಯಗಳ ಕುರಿತು ಸಮಗ್ರ ವರದಿ ನೀಡುವುದು.
- ಪ್ರತಿ ವಿದ್ಯಾರ್ಥಿ ಒಂದು ಕೌಶಲ್ಯವನ್ನು ಕಲಿಯಲೇಬೇಕು.
- ವಯಸ್ಕರಿಗೆ ಆ್ಯಪ್, ಆನ್‌ಲೈನ್, ಟಿವಿ, ಆನ್‌ಲೈನ್ ಬುಕ್‌ಗಳ ಮೂಲಕ ಕಲಿಕೆಗೆ ಅವಕಾಶ ನೀಡುವುದು.
- ಮಧ್ಯದಲ್ಲಿ ಕೋರ್ಸ್ ಬಿಡಲು ಬಯಸುವವರಿಗೆ ಪ್ರವೇಶ ಮತ್ತು ನಿರ್ಗಮನ ಆಯ್ಕೆ ನೀಡಿದೆ.
- ಉನ್ನತ ಶಿಕ್ಷಣ ಮತ್ತು ವಿಶ್ವವಿದ್ಯಾಲಯಗಳ ಪ್ರವೇಶಕ್ಕೆ ಏಕರೂಪದ ಪರೀಕ್ಷೆ ನಡೆಸಲಾಗುವುದು.
- ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಸರ್ಕಾರದಿಂದಲೇ ಶುಲ್ಕ ನಿಗದಿ ಮಾಡಲಾಗುವುದು.

## ಬಾಲ್ಯದ ಆರೈಕೆ ಮತ್ತು ಶಿಕ್ಷಣ
## Early Childhood Care and Education

ಈಗ ಗಮನಹರಿಸದೆ ಉಳಿದಿರುವ ಅಗತ್ಯ ಮತ್ತು ಮೂಲಭೂತ ವಿಷಯವೆಂದರೆ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ(ಇಸಿಸಿಇ). ಯಾವುದೇ ವ್ಯಕ್ತಿಯ ಸಮಗ್ರ ಬೆಳವಣಿಗೆಯು ಆರಂಭಿಕ ವರ್ಷಗಳಲ್ಲಿ ಅವನ ಅಥವಾ ಅವಳ ಪೋಷಣೆ ಮತ್ತು ಪೋಷಣೆಯೊಂದಿಗೆ ಪ್ರಾರಂಭವಾಗುತ್ತದೆ. ನೀತಿ ಹೇಳುತ್ತದೆ. ಮಗುವಿನ ಸಂಚಿತ ಮೆದುಳಿನ ಬೆಳವಣಿಗೆಯ 85% ಕ್ಕಿಂತ ಹೆಚ್ಚು 6 ವರ್ಷಕ್ಕಿಂತ ಮುಂಚೆಯೇ ಸಂಭವಿಸುತ್ತದೆ. ಇದು ಆರಂಭಿಕ ವರ್ಷಗಳಲ್ಲಿ ಮೆದುಳಿನ ಸೂಕ್ತ ಆರೈಕೆ ಮತ್ತು ಪ್ರಚೋದನೆಯ ನಿರ್ಣಾಯಕ ಮಹತ್ವವನ್ನು ಸೂಚಿಸುತ್ತದೆ. ಈ ಕಲ್ಪನೆಯು ನರವಿಜ್ಞಾನ ಮತ್ತು ಮೆದುಳಿನ ಬೆಳವಣಿಗೆಯ ಕ್ಷೇತ್ರದಲ್ಲಿ ಇತ್ತೀಚಿನ ಸಂಶೋಧನೆಗಳು ತಯಾರಿಸಿದ ದೃಢವಾದ ಸಾಕ್ಷ್ಯಗಳನ್ನು ಆಧರಿಸಿದೆ. ಆರಂಭಿಕ ವರ್ಷಗಳು ಮೆದುಳಿನ ಬೆಳವಣಿಗೆಗೆ ಅತ್ಯಂತ ನಿರ್ಣಾಯಿಕವಾಗಿವೆ. ನಂತರದ ಅರಿವಿನ, ಬೌದ್ಧಿಕ ಮತ್ತು ಕೌಶಲ್ಯ ಪ್ರಗತಿಗಳು ಈ ಸಮಯದಲ್ಲಿ ಬಿಚ್ಚಿದ ಸಾಮರ್ಥ್ಯಗಳ ಮೇಲೆ ನಿರ್ಮಿಸಲ್ಪಟ್ಟಿವೆ ನಿರ್ಣಾಯಕ ಬಾಲ್ಯದ ವರ್ಷಗಳು ದುರದೃಷ್ಟವಶಾತ್ ಅವರ ಕುಟುಂಬಗಳು ಎದುರಿಸುತ್ತಿರುವ ವಿವಿಧ ಸಾಮಾಜಿಕ – ಆರ್ಥಿಕ ಅನಾನುಕೂಲತೆಗಳಿಂದಾಗಿ ಕೋಟ್ಯಾಂತರ ಮಕ್ಕಳು ಇನ್ನು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಈ ದೃಷ್ಟಿಕೋನವನ್ನು ಗಮನದಲ್ಲಿಟ್ಟುಕೊಂಡು ನೀತಿ ನಿರೂಪಕರು, ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಮರುರೂಪಿಸಿದ್ದಾರೆ ಮತ್ತು ಮಗುವಿನ ದೈಹಿಕ, ಮಾನಸಿಕ ಮತ್ತು ಅರಿವಿನ ಬೆಳವಣಿಗೆಯ ಈ ಹಂತವನ್ನು ಅಸ್ತಿತ್ವದಲ್ಲಿರುವ ಔಪಚಾರಿಕ ಶಾಲಾ ಮಾದರಿಯೊಂದಿಗೆ ಸಂಯೋಜಿಸಲು ಯೋಜಿಸಿದ್ದಾರೆ.

ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಮತ್ತು ಶಿಕ್ಷಣ ಚೌಕಟ್ಟು (ಎನ್‌ಸಿಪಿಎಫ್ – ಇಸಿಸಿಇ) ಯನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್ ಸಿಇಆರ್‌ಟಿ) ಅಭಿವೃದ್ಧಿಪಡಿಸುತ್ತದೆ. ಇದು ಉತ್ತಮ ಗುಣಮಟ್ಟದ ಇಸಿಸಿಇ ಶಿಕ್ಷಕರ ಪೂರ್ವಸಿದ್ಧತೆ ಸೇರಿದಂತೆ ಇಸಿಸಿಇಯ ಹಲವಾರು ಪ್ರಮುಖ ಅಂಶಗಳನ್ನು ಕೇಂದ್ರೀಕರಿಸುತ್ತದೆ.

ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಶಾಲಾ ಶಿಕ್ಷಣಕ್ಕೆ ಸುಗಮವಾಗಿ ಸಂಯೋಜಿಸಲು ನಾಲ್ಕು ನಿರ್ಣಾಯಕ ಕೇಂದ್ರ ಸಚಿವಾಲಯಗಳನ್ನು ಒಟ್ಟುಗೂಡಿಸುವ ಯೋಜನೆಯಿಂದ ಇಸಿಸಿಇಗೆ ನೀತಿ ಒತ್ತು ನೀಡುವುದು. ಈ ಸಚಿವಾಲಯಗಳೆಂದರೆ: ಮಾನವ ಸಂಪನ್ಮೂಲ ಅಭಿವೃದ್ಧಿ (ಅಂದರೆ ಶಿಕ್ಷಣ ಸಚಿವಾಲಯ), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (ಡಬ್ಲ್ಯುಸಿಡಿ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ( ಎಚ್‌ಎಫ್‌ಡಬ್ಲ್ಯೂ) ಮತ್ತು ಬುಡಕಟ್ಟು ವ್ಯವಹಾರ ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಿದ ನಂತರ NEP-2020 ರ ಚೌಕಟ್ಟುಗಳು ಊಹಿಸಿದಂತೆ ಇಸಿಸಿಇ ಶಿಕ್ಷಣದಲ್ಲಿ ಅತಿದೊಡ್ಡ Game Changer ಆಗಲಿದೆ ಎಂದು ನನ್ನ ಅಭಿಮತ. ಹೊಸ ಶಿಕ್ಷಣ ನೀತಿ, 2020 ನಿಜವಾದ ದೂರದೃಷ್ಟಿ ಮತ್ತು ಸಮಗ್ರವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಆದಾಗ್ಯೂ ಅದರ ಯಶಸ್ಸು ಅದರ ಪರಿಣಾಮಕಾರಿ ಅನುಷ್ಠಾನದಲ್ಲಿದೆ.

## ಆಕರ ಗ್ರಂಥಗಳು


- NPE-2020 Document.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಭಾರತ ಸಂವಿಧಾನದ ಪ್ರಸ್ತಾವನೆಯ ಮಹತ್ವ

✍ **ಡಾ. ಗಿರೀಶ ಮೂಗ್ತಿಹಳ್ಳಿ,** ಸಂಶೋಧಕರು, ಚಿಕ್ಕಮಗಳೂರು-577133,

**ಅ**ಖಂಡ ಭಾರತದ ಯೋಗಕ್ಷೇಮಕ್ಕಾಗಿ, ಪರಸ್ಪರ ನಮಗೆ ನಾವೇ ಬರೆದುಕೊಂಡ ಪುಟ್ಟ ಪತ್ರದಂತೆ ರೂಪುಗೊಂಡಿರುವ ಸಂವಿಧಾನದ ಪ್ರಸ್ತಾವನೆಯು, ಭಾರತದ ಪ್ರತಿಯೊಬ್ಬ ಪ್ರಜೆಯ ಅಂತರಂಗ ಮತ್ತು ಬಹಿರಂಗದ ಸಮತೋಲನ ಜೀವನಕ್ಕಾಗಿ ಆವಶ್ಯವಿರುವ ಜೀವದ್ಧ್ವನಿಯುಕ್ತ ಪ್ರತಿಜ್ಞಾ ವಿಧಿಯಾಗಿದೆ. ಜೊತೆಗೆ ದೃಢನಿರ್ಧಾರದಿಂದ ಕೂಡಿದ ಒಂದು ವಾಗ್ದಾನವಾಗಿದೆ. ಇದರ ರಚನೆಯ ಒಟ್ಟಂದವು, ಸಮಾನತೆಯ ಸತ್ತ್ವವನ್ನು ತನ್ನ ಉಡಿಯಲ್ಲಿ ಇಟ್ಟುಕೊಂಡು ಎಲ್ಲರನ್ನು ಸಲಹುತ್ತಿರುವ ನಮ್ಮ ಸಂವಿಧಾನಕ್ಕೆ ಕಿರೀಟವಿಟ್ಟಂತೆ ಇದೆ. ಈ ಸಮಾಜದ ತುದಿ-ಮೊದಲ ವರ್ಗಕ್ಕೆ 'ನ್ಯಾಯ'ದ ಉಳಿವನ್ನು, 'ಸ್ವಾತಂತ್ರ್ಯ'ದ ಬಯಲನ್ನು, 'ಸಮಾನತೆ'ಯ ಸೇತುವೆಯನ್ನು, 'ಭ್ರಾತೃತ್ವ'ದ ಭಾವನೆಯನ್ನು ನಿರೂಪಿಸಿರುವ ಪ್ರಸ್ತಾವನೆಯು ಸಂವಿಧಾನದ ಗುರಿಗಳನ್ನು ಸ್ಪಷ್ಟವಾಗಿ ಒಳಗೊಂಡಿದೆ.

ಸಂವಿಧಾನಕ್ಕೆ ಸಂಬಂಧಪಟ್ಟಂತೆ, ಸಂವಿಧಾನ ರಚನಾ ಸಭೆಯು ಅಳವಡಿಸಿಕೊಂಡ ಕಾರ್ಯವಿಧಾನ* ವೆಂದರೆ, ಪಂಡಿತ್ ಜವಾಹರಲಾಲ್ ನೆಹರೂ ಅವರು ತಮ್ಮ ಸ್ಫೂರ್ತಿದಾಯಕ ಭಾಷಣದಲ್ಲಿ ಮೊದಲು ಧ್ಯೇಯೋದ್ದೇಶಗಳ ನಿರ್ಣಯದ ಹೆಸರಿನಲ್ಲಿ ಮಂಡಿಸಿದ ಪರಿಶೀಲನಾಂಶಗಳನ್ನು ರೂಪಿಸಲಾಯಿತು. ಅದು ಈಗ ನಮ್ಮ ಸಂವಿಧಾನದ ಪೀಠಿಕಾ ಭಾಗವಾಗಿದೆ.[1] ನೆಹರೂ ಅವರ ಈ ಪ್ರಸ್ತಾವವು, ಸಂವಿಧಾನದ ಅಡಿಗಲ್ಲು ಇದ್ದಂತೆ. ಇಲ್ಲಿಯ ವಾಕ್ಯಗಳೆಲ್ಲವೂ ಸಂವಿಧಾನದ ಸಾರಾಂಶವಾಗಿದೆ.

ಎಚ್. ವಿ. ಪಾಟಸ್ಕರ್ (ಬಾಂಬೆ: ಸಾಮಾನ್ಯ) ಅವರು ಹೇಳುವಂತೆ, 'ಧ್ಯೇಯೋದ್ದೇಶಗಳ ನಿರ್ಣಯ' ಎಂಬುದನ್ನು ಭಾರತದ ಸ್ವಾತಂತ್ರ್ಯದ ಚಾರ್ಟರ್ ಎಂದು ಸರಿಯಾಗಿಯೇ ವಿವರಿಸಿ ಮಂಡಿಸಲಾಗಿತ್ತು. ಆ ನಿರ್ಣಯವನ್ನು ದಿನಾಂಕ: 13ನೇ ಡಿಸೆಂಬರ್, 1946ರಂದು ಮಂಡಿಸಲಾಗಿತ್ತು.* ಅದನ್ನು 22ನೇ ಜನವರಿ, 1947ರಂದು ಸರ್ವಾನುಮತದಿಂದ ಅಂಗೀಕರಿಸಲಾಯಿತು.[2] ಈ ದಾಖಲೆಯು ಸಂವಿಧಾನದ ರಚನಾ ಸಭೆಯ ಘನವೆತ್ತ ಕಾರ್ಯವಾಗಿದ್ದರೂ, ಸಂವಿಧಾನ ಕರಡು ಸಮಿತಿಯು ಸೋಮವಾರ, 17ನೇ ಅಕ್ಟೋಬರ್, 1949ರಂದು ಪ್ರಸ್ತಾವವನ್ನು ಮತ್ತೆ ಚರ್ಚಿಸಿ,* ಮಾನ್ಯ ಸಭಾಧ್ಯಕ್ಷರ ಮೂಲಕ ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಪ್ರಸ್ತಾವನೆಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.[3] ತಿದ್ದುಪಡಿ ಮಾಡಿದ ಪೀಠಿಕೆಯ ಪೂರ್ಣರೂಪದ ಪಠ್ಯ ಹೀಗಿದೆ;[4]

**"ಭಾರತದ ಪ್ರಜೆಗಳಾದ ನಾವು,**
**ಭಾರತವನ್ನು ಒಂದು ಸಾರ್ವಭೌಮ, (ಸಮಾಜವಾದಿ, ಧರ್ಮನಿರಪೇಕ್ಷ),[5]**
**ಪ್ರಜಾತಾಂತ್ರಿಕ ಗಣರಾಜ್ಯವನ್ನಾಗಿ ರಚಿಸುವುದೆಂದು ತೀರ್ಮಾನಿಸಿ ಮತ್ತು**
**ಅದರ ಎಲ್ಲ ಪ್ರಜೆಗಳಿಗೂ,**
**ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ *ನ್ಯಾಯ;***
**ಚಿಂತನೆ, ಅಭಿವ್ಯಕ್ತಿ, ನಂಬಿಕೆ, ಧಾರ್ಮಿಕ ಹಾಗೂ ಪೂಜಾ *ಸ್ವಾತಂತ್ರ್ಯ;***
**ಸ್ಥಾನಮಾನ ಮತ್ತು ಅವಕಾಶಗಳಲ್ಲಿ *ಸಮಾನತೆ,***
**ವ್ಯಕ್ತಿಯೊಬ್ಬನ ಮರ್ಯಾದೆ ಮತ್ತು ದೇಶದ (ಐಕ್ಯಮತ್ಯ ಮತ್ತು ಅಖಂಡತೆ)[6]**
**ಯನ್ನು ಖಾತರಿಮಾಡುವ *ಭ್ರಾತೃತ್ವ;***
**ಇವೆಲ್ಲವನ್ನು ದೊರಕಿಸಿಕೊಳ್ಳಲು,**
**ಈ ಇಪ್ಪತ್ತಾರನೇ ನವೆಂಬರ್ 1949 ರಂದು,**
**ನಮ್ಮ ಸಂವಿಧಾನ ಸಭೆಯಲ್ಲಿ ಈ ಮೂಲಕ ಅಳವಡಿಸಿಕೊಂಡು,**
**ಅಧಿನಿಯಮಿಸಿ,**
**ನಮಗೆ ನಾವೇ ಈ ಸಂವಿಧಾನವನ್ನು ಕೊಟ್ಟುಕೊಂಡಿದ್ದೇವೆ."**

ನ್ಯಾಯಶಾಸ್ತ್ರ ಪರಂಪರೆ*ಯ ಅನುಗುಣವಾಗಿ ರೂಪು ಗೊಂಡಿರುವ ಸಂವಿಧಾನದ ಪ್ರಸ್ತಾವನೆಯು ಭಾರತ ರಾಜ್ಯಾಂಗದ ಚೇತನವಾಗಿದೆ. ಅಷ್ಟೇ ಅಲ್ಲದೆ, ಇಲ್ಲಿ ಪರಿಪಕ್ವವಾದ ಸಮಾಲೋಚನೆ ಇದೆ. ಇಲ್ಲಿ ಯಾವುದೇ ವಿವರಣೆಗಳಿಲ್ಲ. ನಿರೂಪಿಸಿರುವ ವಿಷಯದ ಉದ್ದೇಶಗಳನ್ನು ಸಾಧಿಸಿಕೊಳ್ಳಲು, ಇಲ್ಲಿಯ ಜನ ಭಾರತವನ್ನು ಹೇಗೆ ಮುನ್ನಡೆಸಬೇಕು ಎಂಬುದನ್ನು ಸೂಚಿಸಲಷ್ಟೇ ಪೀಠಿಕೆ ಬಯಸುತ್ತದೆ. ಆದುದರಿಂದ ಭಾರತ ರಾಜ್ಯಾಂಗದ ಚೇತನವಾದ ಪ್ರಸ್ತಾವನೆಯ ಮಹತ್ವವನ್ನು ಅನಾವರಣ ಮಾಡುವ ಸಣ್ಣ ಪ್ರಯತ್ನ ಇಲ್ಲಿದೆ.

'ನಾವು'(WE)ಎಂಬ ಉತ್ತಮಪುರುಷ ಬಹುವಚನದಿಂದ ಪ್ರಾರಂಭವಾಗಿ 'ಈ ಸಂವಿಧಾನವನ್ನು ನಮಗೆ ನಾವೇ ಕೊಟ್ಟುಕೊಂಡಿದ್ದೇವೆ' (GIVE TO OURSELVES THIS CONSTITUTION) ಎಂಬ ಉತ್ತಮಪುರುಷ ಬಹುವಚನ ಕ್ರಿಯಾವಾಚಕ ರೂಪದ ತನಕ ಸ್ವಗತದಲ್ಲಿ ಹೇಳಿಕೊಂಡಿದ್ದೇವೆ. ನೀರಿನಂಥ ಚಲನಶೀಲ ಗುಣ ಹೊಂದಿರುವ ಸಂವಿಧಾನದ ಪ್ರಸ್ತಾವನೆಯು ಪ್ರತಿಯೊಬ್ಬರಿಗೂ ತಲುಪುವಂತೆ ನಿರೂಪಿತಗೊಂಡಿರುವುದು ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ ಮಾದರಿ ಸಂವಿಧಾನಕ್ಕೆ ಅಡಿಪಾಯವಾಗಿದೆ. 'ಸಂವಿಧಾನದಲ್ಲಿ ಅಧಿನಿಯಮಿಸುವ ಪದಗಳು ಸ್ಪಷ್ಟ ಹಾಗೂ ಅಸಂದಿಗ್ಧವಾಗಿದ್ದರೆ, ಪ್ರಸ್ತಾವನೆ ಅವುಗಳ ಅರ್ಥದ ಮೇಲೆ ಯಾವ ಪರಿಣಾಮವನ್ನು ಬೀರದು. ಆದರೆ ಅಧಿನಿಯಮಿಸುವ ಪದಗಳ ಅರ್ಥದ ಬಗೆಗೆ ಏನಾದರೂ ಸಂದೇಹ ಉಂಟಾದಾಗ ಪ್ರಸ್ತಾವನೆಯು ಸಂವಿಧಾನದ ಉದ್ದೇಶಗಳನ್ನು ತೋರಿಸುವುದರ ಮೂಲಕ ಸರಿಯಾದ ಅರ್ಥವನ್ನು ಹುಡುಕಲು ಸಹಾಯ ಮಾಡುತ್ತದೆ.'[7]

ಸಂವಿಧಾನದ ಪೀಠಿಕೆಯಲ್ಲಿ ಗಮನಾರ್ಹವಾದ ಪದಗಳಿವೆ. ಈ ಪದಗಳು ಸ್ವಯಂಭುವಲ್ಲ. ದೇಶವನ್ನು ಗಮನದಲ್ಲಿಟ್ಟುಕೊಂಡು ಹಲವು ಚರ್ಚೆಗಳ ನಡುವೆ ತಿದ್ದುಪಡಿ ಮಾಡಿ ಅಂಗೀಕರಿಸಿದ ಪದಗಳು. ಇಂತಹ ಪದಗಳ ಬಗ್ಗೆ ಜವಾಹರಲಾಲ್ ನೆಹರೂ ಹೀಗೆ ಹೇಳುತ್ತಾರೆ; **"**ಕಾನೂನುಗಳನ್ನು ಶಬ್ದಗಳಿಂದ ಮಾಡಲಾಗುತ್ತದೆ. ಆದರೆ ಈ ನಿರ್ಣಯವು ಕಾನೂನಿಗಿಂತ ಉನ್ನತವಾಗಿರುವ ಒಂದು ಸಂಗತಿಯಾಗಿದೆ. ವಕೀಲರ ಹಾಗೆ ಅದರ ಶಬ್ದವನ್ನು ನೀವು ಪರೀಕ್ಷಿಸಿದರೆ ನಿಮಗೆ ನಿರ್ಜೀವವಾದ ಸಂಗತಿ ಸಿಗುತ್ತದೆ. ಪ್ರಸ್ತುತ ನಾವು ಎರಡು ಯುಗಗಳ ನಡುವೆ ನಿಂತಿದ್ದೇವೆ; ಹಳೆಯ ವ್ಯವಸ್ಥೆ ಕ್ಷಿಪ್ರವಾಗಿ ಬದಲಾಗುತ್ತಿದೆ, ಹೊಸದಕ್ಕೆ ಸ್ಥಳಾವಕಾಶ ಮಾಡಿಕೊಡುತ್ತಿದ್ದೇವೆ. ಅಂತಹ ಸಂಧಿಕಾಲದಲ್ಲಿ ನಾವು ಭಾರತಕ್ಕೆ ಮತ್ತು ಸಮಸ್ತ ಜಗತ್ತಿಗೆ ಒಂದು ಜ್ವಲಂತವಾದ ಸಂದೇಶವನ್ನು ನೀಡಬೇಕಾಗಿದೆ. ಪ್ರಸ್ತುತ ಅದನ್ನು ಪ್ರಯತ್ನ ಮಾಡುವ ನಿರ್ಧಾರ ತೆಗೆದುಕೊಂಡಿದ್ದೇವೆ ಎಂಬುದನ್ನು ತೋರಿಸುವ ಸಂದೇಶವನ್ನು ನಾವು ಕಳುಹಿಸಬೇಕಾಗಿದೆ.**"**[8] - ಹೀಗೆ ಉನ್ನತವಾದ ತಾತ್ತ್ವಿಕ ಚಿಂತನೆಯೊಂದಿಗೆ ನೆಯ್ದಿರುವ ಪ್ರಸ್ತಾವನೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರು ತಿಳಿಸುವಂತೆ ಮೂರು ಭಾಗಗಳಿವೆ. 'ಒಂದು ಭಾಗ ಘೋಷಣಾತ್ಮಕ ರೀತಿಯದು. ಎರಡನೆಯದು ವರ್ಣನಾತ್ಮಕ, ಮೂರನೆಯದು ಧ್ಯೇಯೋದ್ದೇಶದ ಮತ್ತು ನಿರ್ಬಂಧಕವಾದುದು.'[9]

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮೊದಲ ಭಾಗವು ಅರ್ಥಗರ್ಭಿತ ಪದಗಳೊಂದಿಗೆ ಪ್ರಾರಂಭವಾಗುತ್ತದೆ. 'ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷಿತ, ಪ್ರಜಾತಾಂತ್ರಿಕ ಗಣರಾಜ್ಯವನ್ನಾಗಿ ರಚಿಸುವುದೆಂದು ತೀರ್ಮಾನಿಸಿ' – ಇಲ್ಲಿ ದೇಶದ ಹಿತಕ್ಕಾಗಿ ಬಹುದೊಡ್ಡ ಆಶಯವು ಮಡುಗಟ್ಟಿದೆ. 'ಭಾರತದ ಪ್ರಜೆಗಳಾದ ನಾವು' ಎಂಬ ವಾಕ್ಯದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ 'ಉಫೇ' ಹೇಳುವ ಉದ್ಗಾರವನ್ನು ಕಾಣುತ್ತೇವೆ. ಜಾತಿ–ಧರ್ಮ, ವೇಷ–ಭಾಷೆ, ಲಿಂಗ–ವಂಗಗಳನ್ನು ಪರಿಗಣಿಸದೆ ಎಲ್ಲವನ್ನು ಐಕ್ಯತೆಯ ದೃಷ್ಟಿಯಿಂದ ಸಮನಾಗಿಸುವ ಸುಂದರ ಹೇಳಿಕೆ ಇದು. ಈ ಮೂಲಕ ಪ್ರಜೆಗಳಿಗೆ ಪರಮಾಧಿಕಾರವನ್ನು ನೀಡಿದಂತಾಗಿದೆ. 'ಇಲ್ಲಿ ಯೋಚಿಸಬಲ್ಲ ಪ್ರತಿಯೊಬ್ಬ ವ್ಯಕ್ತಿಯೂ ಮತ ಚಲಾಯಿಸುವ ಹಕ್ಕನ್ನು ಹೊಂದಿದ್ದಾನೆ ಮತ್ತು ಈ ಮಹಾನ್ ದೇಶದ ಬೆಳವಣಿಗೆಗೆ ತನ್ನ ಪಾಲಿನ ಕೊಡುಗೆಯನ್ನು ನೀಡುತ್ತಾನೆ ಎಂಬ ಭರವಸೆ ಇರುವುದನ್ನು ಕಾಣುತ್ತೇವೆ.'[10]

'ಸಾರ್ವಭೌಮ' ಎಂಬ ಸುಂದರ ಪರಿಕಲ್ಪನೆಯು ಅಖಂಡ ಭಾರತದ ಪರಮೋಚ್ಚ ಅಧಿಕಾರವನ್ನು ಮತ್ತು ಅದರಾಚೆಗಿನ ಸಹಕಾರ ತತ್ತ್ವವನ್ನು ಎತ್ತಿ ಹಿಡಿಯುತ್ತದೆ. ಇದು 'ದೇಶದ ಸ್ಥಾನಮಾನವನ್ನು ಪೂರ್ವಪಶ್ಚಿಮಗಳ ಸ್ವತಂತ್ರ ದೇಶಗಳ ಮಟ್ಟಕ್ಕೆ ಎತ್ತರಿಸಿದೆ.'[11] ನವಭಾರತಕ್ಕಾಗಿ ರೂಪಿಸಿರುವ ಸಾರ್ವಭೌಮತ್ವ ಪರಿಕಲ್ಪನೆ ಪ್ರಶ್ನಾತೀತವಾದದ್ದು. ಎಲ್ಲಿ ಬಾಹ್ಯ ಮತ್ತು ಆಂತರಿಕ ವ್ಯವಹಾರಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಮತ್ತು ಯಾವುದೇ ಒಪ್ಪಂದಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ರಾಷ್ಟ್ರ ಹೊಂದಿದೆ.'[12] ದೇಶ ಆಂತರಿಕವಾಗಿ ಶಾಂತಿ ಮತ್ತು ಭದ್ರತೆಗೆ ಆದ್ಯತೆ ಕೊಟ್ಟಂತೆ, 'ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ವೃದ್ಧಿಗೊಳಿಸುವುದು' (ಅನುಚ್ಛೇದ–51) ಭಾರತ ರಾಜ್ಯಾಂಗದಲ್ಲಿನ ರಾಜ್ಯನೀತಿಯ ಒಂದು ನಿರ್ದೇಶಕ ತತ್ತ್ವವಾಗಿ ಕಂಡುಬರುತ್ತದೆ.

'ಸಮಾಜವಾದಿ' – ಬೋಲ್ಶೆವಿಕ್ ಕ್ರಾಂತಿಯ ನಂತರ ಸೋವಿಯತ್ ರಷ್ಯಾದ ರಾಜ್ಯಾಂಗದಲ್ಲಿ ಮೊದಲು ಬಳಕೆಗೆ ಬಂದ ಈ ಪದ, ನಮಗೆ ನಮ್ಮ ಸಂವಿಧಾನವು ಇಪ್ಪತ್ತಾರನೇ ವಸಂತಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಪ್ರಸ್ತಾವನೆಯನ್ನು ಅಲಂಕರಿಸಿದ ಬಹುವಿಶೇಷವಾದ ಪರಿಕಲ್ಪನೆ. ಆದರೆ ಈ ಹಿಂದೆ ಸಂವಿಧಾನದ ರಚನಾಸಭೆಯಲ್ಲಿ ಸಯ್ಯದ್ ಹಸ್ರತ್ ಮೊಹಾನಿ ಅವರು 'ಸಮಾಜವಾದಿ' ಪದವನ್ನು ಪ್ರಸ್ತಾವನೆಯಲ್ಲಿ ಸೇರಿಸಬೇಕು ಎಂಬ ಅಭಿಪ್ರಾಯ ಮಂಡಿಸಿದ್ದರು.[13] ಆದರೆ, 'ಕರಡು ಸಮಿತಿ ಸಮಾಜವಾದಕ್ಕೆ ಸಂಬಂಧಪಟ್ಟ ಪ್ರಸ್ತಾವನೆಯನ್ನು ತಿರಸ್ಕರಿಸಿತು. ಕಾರಣವೇನೆಂದರೆ, ರಾಜ್ಯಾಂಗವು ಒಂದು ರಾಜಕೀಯ ದಸ್ತಾವೇಜು ಆಗಿರುವುದರಿಂದ ಅದರಲ್ಲಿ ಅದು ಯಾವುದೇ ಸಮಾಜವಾದದ ಆದರ್ಶವನ್ನು ಸೇರ್ಪಡೆಗೊಳಿಸಿಲ್ಲ.'[14]

'ಸಮಾಜವಾದಿ' ಪ್ರಮುಖವಾಗಿ ಜೀವನಾವಶ್ಯಕ ಸೌಲಭ್ಯಗಳನ್ನು ಆರ್ಥಿಕ ಅಸಮಾನತೆಯನ್ನು ಸರಿದೂಗಿಸಿಕೊಳ್ಳುವಂತೆ ಎಚ್ಚರಿಸುವ ಮಂತ್ರಶಕ್ತಿ. ಸಮಾಜದಲ್ಲಿ ಬಡತನ–ಸಿರಿತನದ ನಡುವಿನ ಅತಿ ಅಂತರದ ಕಂದರದಿಂದಾಗಿ ಅಸಮಾನತೆ ಹೆಚ್ಚಾಗಿದೆ. ಇದನ್ನು ಹೋಗಲಾಡಿಸ ಬೇಕೆಂದು ಪ್ರಸ್ತಾವನೆಯ ಆಶಯ ಕೂಡ ಹೌದು. ಈ ಆಶಯವನ್ನು ಈಡೇರಿಸುವಂಥ ಪರಿಹಾರೋಪಾಯ ಮಾರ್ಗಗಳು 'ರಾಜ್ಯ ನಿರ್ದೇಶಕ ತತ್ತ್ವ'ಗಳಲ್ಲಿವೆ. ಇಲ್ಲಿ ವ್ಯಕ್ತಿಯೊಬ್ಬನ ಹಿತಕ್ಕಿಂತ, ಸಮಾಜದ ಒಳಿತು ಪ್ರಧಾನವಾಗಿರುವುದನ್ನು ಗಮನಿಸಬಹುದು. 'ಪ್ರಜಾಸತ್ತಾತ್ಮಕ ಸಮಾಜವಾದದ ಗುರಿ ಬಡತನ ಮತ್ತು ಅಜ್ಞಾನಗಳ ಅಂತ್ಯ. ಈ ಸಮಾಜವಾದದ ಪರಿಕಲ್ಪನೆಯನ್ನು ಸಂವಿಧಾನದ ನಿಜವಾದ ಭಾವದಲ್ಲಿ ಕಾರ್ಯಗತಗೊಳಿಸುವಂತೆ ಪ್ರಸ್ತಾವನೆ ಪ್ರೇರೇಪಿಸುತ್ತದೆ.'[15] ಒಟ್ಟಾರೆ ಭಾರತ ರಾಜ್ಯಾಂಗದ ಪ್ರತಿ ಹಂತದಲ್ಲೂ ಕಲ್ಯಾಣ ಸಿದ್ಧಾಂತದ ತತ್ತ್ವ ಮುಖ್ಯವಾಗಿದೆ.

'ಧರ್ಮನಿರಪೇಕ್ಷ' (ಸೆಕ್ಯುಲರಿಸಂ) ಪದವು ಸಂವಿಧಾನದ 42ನೇ ತಿದ್ದುಪಡಿಯಿಂದಾಗಿ ಪ್ರಸ್ತಾವನೆಯಲ್ಲಿ ದಾಖಲಿಸಿತು. ಧರ್ಮನಿರಪೇಕ್ಷ ಪದದ ಅರ್ಥ, 'ಜೀವನದ ಧಾರ್ಮಿಕವಲ್ಲದ ವ್ಯವಹಾರಗಳಿಗೆ ನಿಕಟತೆಯನ್ನು ಹೊಂದಿರುವುದು. ಹಾಗೆಂದರೆ, ಮಾನವನ ಚಟುವಟಿಕೆಗಳಲ್ಲಿ ಪವಿತ್ರವಾದ, ಆಧ್ಯಾತ್ಮಿಕವಾದ ಮಗ್ಗಲನ್ನು ನಿರಾಕರಿಸುವುದು ಎಂದೇನೂ ಅಲ್ಲ. ಈ ಪ್ರಪಂಚದಲ್ಲಿ ಬಹಳ ಕಡಿಮೆ ನಾಸ್ತಿಕರಿದ್ದಾರೆ. ಆದ್ದರಿಂದ ಸಮಾಜ ಧಾರ್ಮಿಕವಲ್ಲದ ಮತ್ತು ಪವಿತ್ರವಾದ ಅಂಶಗಳನ್ನು ಒಳಗೊಂಡಿರುತ್ತದೆ.'[16] ಈ ಎರಡೂ ಅಂಶಗಳನ್ನು ಸರಿದೂಗಿಸಲು ನಮ್ಮ ಸಂವಿಧಾನದಲ್ಲಿ ಅವಕಾಶವಿದೆ. (ನೋಡಿ. ಅನುಚ್ಛೇದ 25) ಈ ನೆಲದಲ್ಲಿ ಎಲ್ಲಾ ಧರ್ಮಗಳಿಗೆ ಸಮಾನವಾದ ಗೌರವ ತೋರಿಸುವುದನ್ನು ಧರ್ಮನಿರಪೇಕ್ಷ ತತ್ತ್ವ ಎಂದು ಅರ್ಥೈಸಲಾಗಿದೆ. ಭಾರತದ ತತ್ತ್ವಜ್ಞಾನಿ ಡಾ. ಎಸ್. ರಾಧಾಕೃಷ್ಣನ್ ಅವರು ಧರ್ಮನಿರಪೇಕ್ಷೆಯ ಸಮನ್ವಯದ ದೃಷ್ಟಿಯನ್ನು ಹೀಗೆ ಗುರುತಿಸಿದ್ದಾರೆ; "ಭಾರತವನ್ನು ಧರ್ಮನಿರಪೇಕ್ಷೆಯ ರಾಷ್ಟ್ರವೆಂದು ಹೇಳುವಾಗ, ಕಣ್ಣಿಗೆ ಗೋಚರಿಸದ ಆತ್ಮಶಕ್ತಿಯ ನೈಜತೆಯನ್ನಾಗಲೀ, ಅಥವಾ ಜೀವನಕ್ಕೆ ಧರ್ಮದ ಪ್ರಸ್ತುತತೆಯನ್ನಾಗಲೀ, ನಿರಾಕರಿಸುತ್ತೇವೆ ಎಂದಾಗಲೀ ಅಥವಾ ನಾಸ್ತಿಕತೆಯನ್ನು ಎತ್ತರಕ್ಕೆ ಹಿಡಿಯುತ್ತೇವೆ ಎಂದಾಗಲಿ ಅರ್ಥವಲ್ಲ. ಧರ್ಮನಿರಪೇಕ್ಷತೆ ತಾನೇ ಒಂದು ಧನಾತ್ಮಕ ಧರ್ಮವಾಗುವುದೆಂದಾಗಲೀ ಅಥವಾ ರಾಷ್ಟ್ರವು ದೈವಿಕ ವಿಶೇಷಾಧಿಕಾರ ತನಗೆ ಇದೆಯೆಂದು ಭಾವಿಸುತ್ತದೆಯೆಂದು ಅರ್ಥವಲ್ಲ. ಒಂದೇ ಧರ್ಮಕ್ಕೆ ಪ್ರಾಶಸ್ತ್ಯ ಕೊಡಲಾಗದೆಂದು ನಮ್ಮ ನಿಲುವು. ಈ ಧಾರ್ಮಿಕ ನಿಷ್ಪಕ್ಷಪಾತ, ತಿಳಿವಳಿಕೆ, ಸಹಿಷ್ಣುತೆಯ ದೃಷ್ಟಿ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಜೀವನದಲ್ಲಿ ಒಂದು ಪ್ರವಾದಿ ಸದೃಶ ಪಾತ್ರವನ್ನು ವಹಿಸಲಿದೆ."[17] ಹೀಗೆ ಧರ್ಮನಿರಪೇಕ್ಷವನ್ನು ಕುರಿತು ಮಾತನಾಡುವಾಗ ಭಾರತ ಸಂವಿಧಾನದ ಪ್ರಸ್ತಾವನೆಯು ಸರ್ವಧರ್ಮ ಸಮನ್ವಯದಲ್ಲಿ ಜಾತ್ಯತೀತ ಪರಿಕಲ್ಪನೆಯನ್ನು ದರ್ಶನ ಮಾಡಿಸುತ್ತದೆ. ಎಲ್ಲಿಯೂ ನಿಲ್ಲದ ಎಲ್ಲರಿಗೂ ಸಲ್ಲುವ ಉದ್ದೇಶವನ್ನು ಒಳಗೊಂಡಿದೆ.

'ಪ್ರಜಾತಾಂತ್ರಿಕ ಗಣರಾಜ್ಯ' (Democratic Republic) ವ್ಯವಸ್ಥೆ ಉದಾರ ಪ್ರಜಾಸತ್ತೆಗೆ ಸಂಬಂಧಿಸಿದ್ದು. ಈ ಸುಂದರ ಪರಿಕಲ್ಪನೆಯ ಹಿಂದೆ, ಕಾರ್ಯಾಂಗದ ಅಧಿಕಾರಿಗೆ ಸಂಬಂಧಿಸಿದ ಹಾಗೆ ರಾಜ್ಯಾಂಗದಲ್ಲಿ ಬಳಸಿರುವ ಎರಡು ಪದಗಳು ಬಹಳ ಮುಖ್ಯವಾಗಿವೆ. ಅವುಗಳೆಂದರೆ 'ಸಲಹೆ' (ಅಡ್ವೈಸ್) ಮತ್ತು 'ವಿವೇಚನೆ' (ಡಿಸ್ಕ್ರೀಷನ್). ಇವು ಬಹು ನಿರ್ಣಾಯಕವಾದ ಪದಗಳು. ಬ್ರಿಟೀಷ್ ಸಂವಿಧಾನಾತ್ಮಕ ಆಚರಣೆಯಿಂದ ಅಳವಡಿಸಿಕೊಂಡಿರುವ 'ಸಲಹೆ' ಪದ ಗಂಭೀರವಾದ ಮಹತ್ವ ಪಡೆದುಕೊಂಡಿದೆ. ಇದಕ್ಕೆ ಸಂಬಂಧಿಸಿದ ನಿರೂಪಿತ ಘಟ್ಟವೆಂದರೆ; "ರಾಷ್ಟ್ರಾಧ್ಯಕ್ಷರು ಮತ್ತು ಗವರ್ನರ್‌ಗಳು ತಮ್ಮ ಮಂತ್ರಿಮಂಡಲಗಳ ಸಲಹೆ ಮೇರೆಗೆ ಕೆಲಸ ನಿರ್ವಹಿಸುತ್ತಾರೆ. ಅದರ ಅರ್ಥ ರಾಷ್ಟ್ರಾಧ್ಯಕ್ಷರು ಮತ್ತು ಗವರ್ನರ್‌ಗಳು ತಮ್ಮ ಮಂತ್ರಿಮಂಡಲಗಳು ನಿಶ್ಚಯಿಸಿದ ಹಾಗೆ ತಮ್ಮ ಅಧಿಕಾರವನ್ನು ಚಲಾಯಿಸುತ್ತಾರೆ."[18] 'ವಿವೇಚನೆ' – "ಈ ಪದವನ್ನು ಭಾರತ ಸರ್ಕಾರದ ಅಧಿನಿಯಮ 1935ರಿಂದ ಅಳವಡಿಸಿಕೊಳ್ಳಲಾಗಿದೆ. ಮಂತ್ರಿಗಳ 'ಸಲಹೆ'ಯಿಂದ ಹೊರಗೆ ನಡೆಸಬಹುದಾದ ಚಟುವಟಿಕೆಗಳಿಗೆ ಇದು ಸಂಬಂಧಿಸಿದೆ. ಈ ಅಧಿಕಾರ ಗವರ್ನರ್‌ಗಳಿಗೆ ಇದೆ. ಆದರೆ ರಾಷ್ಟ್ರಾಧ್ಯಕ್ಷರಿಗೆ ಈ ಅಧಿಕಾರ ಇಲ್ಲ. ಇವರ ಒಕ್ಕಣೆ ಏನೆಂದರೆ, ರಾಷ್ಟ್ರಾಧ್ಯಕ್ಷರ ಅಧಿಕಾರಗಳನ್ನು ವಾಸ್ತವವಾಗಿ ಮಂತ್ರಿಗಳು ಚಲಾಯಿಸುತ್ತಾರೆ. ಆದರೆ ಗವರ್ನರ್‌ಗಳು ಮಾಮೂಲಿಯಾಗಿ ಮಂತ್ರಿಗಳ ಸಲಹೆ ಮೇರೆಗೆ ತಮ್ಮ ಕಾರ್ಯವನ್ನು ನಿಭಾಯಿಸಿದರೂ ಅಸಾಧಾರಣ ಸಂದರ್ಭದಲ್ಲಿ ಅವರ ಸಲಹೆ ಇಲ್ಲದೆ ತಮ್ಮ ಕಾರ್ಯ ನಿರ್ವಹಿಸುತ್ತಾರೆ. ... ಇದರ ಅರ್ಥ ಸಾಮಾನ್ಯವಾಗಿ ಅವರುಗಳು ಮಂತ್ರಿಗಳ ಸಲಹೆಯ ಮೇರೆಗೆ ಕೆಲಸ ಮಾಡುತ್ತಾರೆ. ಆದರೆ ಮಂತ್ರಿಗಳ ಅಭಿಪ್ರಾಯಕ್ಕೆ ಬದ್ಧರಲ್ಲ."[19]

ಹೀಗೆ ಈ ಎರಡು ಪದಗಳು ಗಣತಂತ್ರ ವ್ಯವಸ್ಥೆಯನ್ನು ಚಲಾಯಿಸಲು ಮತ್ತು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಆಡಳಿತ ರೂಪಿಸಲು ಸಹಕಾರಿಯಾಗಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಿಲ್ಲುತ್ತವೆ. "ಪ್ರಜಾ ಸರ್ಕಾರದಲ್ಲಿ ಮಂತ್ರಿಮಂಡಲವು ಪ್ರಜೆಗಳಿಂದ ಚುನಾಯಿತವಾದ ಶಾಸನ ಸಭೆಗೆ ಜವಾಬ್ದಾರಿಯಾಗಿರುತ್ತದೆ. ಅವರ ಸಲಹೆಗೆ ಬದ್ಧರಾಗಿರುವುದೆಂದರೆ, ರಾಜ್ಯಪಾಲರು ಜನರ ಇಚ್ಛೆಗೆ ತಲೆಬಾಗಿದಂತೆ ಎಂದರ್ಥ. ಏನೇ ಆಗಲಿ, ಯಾರೊಬ್ಬರೂ ಒಂದು ಅಂತರ್ನಿಹಿತವಾದ ವಿಶೇಷಾಧಿಕಾರವನ್ನು ಹೊಂದಿರುವುದಿಲ್ಲ. ಒಂದು ಗಣತಂತ್ರೀಯ ಪ್ರಜಾಪ್ರಭುತ್ವದಲ್ಲಿ ಜನಗಳಿಂದ ಅನುಮೋದಿಸಲಾದ ಸಂವಿಧಾನದಿಂದ ಮಾತ್ರ ವಿವೇಚನೆಯನ್ನು ನೀಡಬಹುದು."[20] ಹೀಗೆ ದೇಶದ ಆಡಳಿತವೆಂದರೆ, ಅದು ಜನರ ಪರಮಾಧಿಕಾರ. ಚುನಾಯಿತ ಪ್ರತಿನಿಧಿಗಳಿಂದ ಜನತಂತ್ರವನ್ನು ಅನುಷ್ಠಾನಗೊಳಿಸುವ ಇಚ್ಛೆ, ಶಿಫಾರಸು, ಸಲಹೆ, ಮತ್ತು ಅಭಿಪ್ರಾಯ ಈ ನಾಲ್ಕು ಅಂಶಗಳು ಗಣತಂತ್ರ ಪ್ರಜಾಸತ್ತೆಯ ಅರ್ಥವನ್ನು ನಿಭಾಯಿಸಿ ಸಂವಿಧಾನದ ಆಶಯವನ್ನು, ಪ್ರಸ್ತಾವನೆಯ ತತ್ತ್ವ ಚಿಂತನೆಯನ್ನು ಗರ್ಭೀಕರಿಸಿಕೊಂಡಿದೆ.

ಪ್ರಸ್ತಾವನೆಯ ಎರಡನೇ ಭಾಗ, ವರ್ಣನಾತ್ಮಕವಾದದ್ದು. ಇಲ್ಲಿ ಮೊದಲ ಭಾಗದ ಮುಂದುವರಿಕೆಯಾಗಿ ಸಂವಿಧಾನದ ಗುರಿಗಳನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ಫ್ರೆಂಚ್ ಕ್ರಾಂತಿಯಿಂದ ಎತ್ತಿಕೊಂಡ ಸಮಾನತೆ, ಸ್ವಾತಂತ್ರ್ಯ, ಮತ್ತು ಭ್ರಾತೃತ್ವ ಪದಗಳು ಎಲ್ಲಾ ಕಾಲಕ್ಕೂ ಸಾಮಾನ್ಯ ನಾಗರಿಕನ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತವೆ; ಜೊತೆಗೆ ಇವು ಮಾನವ ಜನಾಂಗದ ನಿರಂತರ ಗುರಿಯಾಗಿದೆ.

ಕರಡು ಸಂವಿಧಾನದ ಅಂತಿಮ ಪರಿಶೀಲನೆ ಸಭೆಯಲ್ಲಿ ಸೇಠ್ ಗೋವಿಂದದಾಸ್ (ಸಂಯುಕ್ತ ಪ್ರಾಂತಗಳು ಮತ್ತು ಬೇರಾರ್: ಸಾಮಾನ್ಯ) ಅವರು ಪ್ರಸ್ತಾವನೆಯ 'ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಸಹೋದರತೆ' ಈ ನಾಲ್ಕು ಅಂಶಗಳ ಬಗ್ಗೆ ವಿಶೇಷ ಗಮನ ಸೆಳೆಯುತ್ತಾರೆ. ಅವರ ಅಭಿಪ್ರಾಯದ ಆಯ್ದ ಭಾಗಗಳು ಹೀಗಿವೆ; "ನಮ್ಮ ದೇಶದಲ್ಲಿ ಯಾವಾಗಲೂ ನ್ಯಾಯಕ್ಕೆ ಮೊದಲ ಸ್ಥಾನವನ್ನು ನೀಡಲಾಗಿದೆ. ಆದ್ದರಿಂದ ಪ್ರಜಾಪ್ರಭುತ್ವದ ಘೋಷಣೆ ಅನಂತರ, ಪ್ರಸ್ತಾವನೆಯಲ್ಲಿ, ನ್ಯಾಯಕ್ಕೆ ಮೊದಲ ಸ್ಥಾನವನ್ನು ನೀಡಿರುವುದು ಸೂಕ್ತವಾಗಿದೆ.

ಸ್ವತಂತ್ರವಿಲ್ಲದೆ ಯಾವುದರಿಂದಲೂ ಉಪಯೋಗವಿಲ್ಲ. 'ಪರಾವಲಂಬಿಗಳು ಕನಸಿನಲ್ಲೂ ಸಹ ಸುಖವಾಗಿರಲು ಸಾಧ್ಯವಿಲ್ಲ' (ಗೋಸ್ವಾಮಿ ತುಳಸೀದಾಸ್ ಅವರ ಮಾತು). ಆದುದರಿಂದ ಸ್ವಾತಂತ್ರ್ಯಕ್ಕೆ ಪ್ರಸ್ತಾವನೆಯಲ್ಲಿ ಎರಡನೇ ಸ್ಥಾನ ನೀಡಿರುವುದು ಸರಿಯಾಗಿದೆ.

ಯಾವ ದೇಶದಲ್ಲಿ ಒಂದೆಡೆ ಶೇಕಡಾ ಒಂದರಷ್ಟು ಜನ ದೊಡ್ಡ ಅರಮನೆಗಳಲ್ಲಿ ಹಲವಾರು ಬಗೆಯ ಭಕ್ಷ್ಯಭೋಜನ ಸೇವಿಸುತ್ತಾ ಚಳಿಗಾಲದಲ್ಲಿ ಪಾಶ್ಮಿರಾವಸ್ತ್ರವನ್ನು ಮತ್ತು ಬೇಸಿಗೆಯಲ್ಲಿ ಶುಭ್ರವಾದ ಉಡುಪುಗಳನ್ನು ಧರಿಸುತ್ತಿರುವಾಗ ಇನ್ನೊಂದೆಡೆ, ಇತರ ಶೇ. 99 ಜನರು ವಾಸ ಮಾಡಲು ಗುಡಿಸಲು ಇಲ್ಲದೆ, ತಿನ್ನಲು ಒಣಗಿದ ರೊಟ್ಟಿ ಸಹ ಸಿಗದೆ, ಧರಿಸಲು ಬಟ್ಟೆ ಸಿಗದೆ, ಎಷ್ಟರ ಮಟ್ಟಿಗೆ ಎಂದರೆ ಅವರ ಹೆಂಗಸರಿಗೆ ತಮ್ಮ ದೇಹವನ್ನು ಮುಚ್ಚಲು ತುಂಡು ಬಟ್ಟೆ ಸಿಗುವುದಿಲ್ಲವೋ ಆ ದೇಶವು ಅನಿವಾರ್ಯವಾಗಿ ಕ್ರಾಂತಿಯನ್ನು ಎದುರಿಸಬೇಕಾದೀತು. ಆದುದರಿಂದ ಸಮಾನತೆಗೆ ಪ್ರಸ್ತಾವನೆಯಲ್ಲಿ ಸರಿಯಾದ ಸ್ಥಾನ ದೊರಕಲೇಬೇಕು.

ಭ್ರಾತೃತ್ವಕ್ಕೆ ನಾಲ್ಕನೇ ಸ್ಥಾನ ದೊರಕಿದೆ. ಪರಸ್ಪರ ಪ್ರೀತಿ ಇಲ್ಲದೆ ಯಾವುದೇ ಸಾಮಾಜಿಕ ವ್ಯವಸ್ಥೆಯೂ ಹುಟ್ಟುವುದಿಲ್ಲ. ಆದುದರಿಂದ ಈ ಸಂವಿಧಾನದಲ್ಲಿನ ಪ್ರಸ್ತಾವನೆಯಂತೆ ನಮ್ಮ ದೇಶ ಆಡಳಿತ ನಡೆಸುತ್ತದೆ ಎಂದು ನಾನು ಆಶಿಸುತ್ತೇನೆ."[21]

ಸೇಠ್ ಅವರ ಆಶಯ ಪ್ರಸ್ತಾವನೆಯ ಮಹತ್ವವನ್ನು ಹಿಡಿದಿಟ್ಟಿದೆ. ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಪರಿಕಲ್ಪನೆಗಳು ಒಂದಕ್ಕೊಂದು ಸಂಬಂಧವನ್ನು ಹೊಂದಿವೆ. ಪ್ರಜಾಸತ್ತಾತ್ಮಕ ಗಣರಾಜ್ಯದಲ್ಲಿ ಭಾರತದ ಎಲ್ಲಾ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು, ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಉಪಾಸನೆಯಲ್ಲಿ ಸ್ವಾತಂತ್ರ್ಯ, ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆ, ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಭ್ರಾತೃತ್ವ* ಭಾವ ಸಂಬಂಧಿಸಿವೆ. "ಇವುಗಳಿಗೆ ರಾಜ್ಯಾಂಗದ ಮೂರನೇ ಮತ್ತು ನಾಲ್ಕನೇ ಭಾಗಗಳಲ್ಲಿ ಅನುಕ್ರಮವಾಗಿ ಮೂಲಭೂತ ಹಕ್ಕುಗಳು, ಕರ್ತವ್ಯಗಳು, ರಾಜ್ಯನೀತಿಯ ನಿರ್ದೇಶಕ ತತ್ತ್ವಗಳು ಈ ರೂಪದಲ್ಲಿ ಒಂದು ಆಕಾರವನ್ನು ಕೊಡಲಾಗಿದೆ."[22]

ಪ್ರಸ್ತಾವನೆಯ ಮೂರನೇ ಭಾಗ, ಧ್ಯೇಯೋದ್ದೇಶದ ಮತ್ತು ನಿರ್ಬಂಧಕವಾದುದು. ಜನತೆಯಿಂದ ಉದ್ಭವಿಸಿದ*, 'ಭಾರತ ಸಂವಿಧಾನವನ್ನು ಭಾರತದ ಪ್ರಜೆಗಳು ಅಳವಡಿಸಿಕೊಂಡು, ಅಧಿನಿಯಮಿಸಿಕೊಂಡು ತಮಗೆ ತಾವೇ ಕೊಟ್ಟುಕೊಂಡಿದ್ದಾರೆ. ಅದನ್ನು ಯಾವುದೇ ಉದಾರಿಯಾದ ಸ್ಥಳೀಯನೊ, ಪರಕೀಯನೊ, ದೊರೆ ಅಥವಾ ಸರ್ವಾಧಿಕಾರಿ ದಯಪಾಲಿಸಿದುದು ಅಲ್ಲ. ಈ ಪ್ರಕಟಣೆ ಬ್ರಿಟನ್ನಿನ ಡೊಮಿನಿಯನ್‌ಗಳಾದ ಕೆನಡ ಅಥವಾ ಆಸ್ಟ್ರೇಲಿಯಾ ಮತ್ತು ತೃತೀಯ ಪ್ರಪಂಚದ ಎಲ್ಲೆಡೆ ಹರಡಿರುವ ಕೈಹಿಡಿದು ನಡೆಸಲ್ಪಡುತ್ತಿರುವ ಪ್ರಜಾಸತ್ತೆಗಳ ರಾಜ್ಯಾಂಗಗಳಿಗಿಂತ ಭಾರತ ಸಂವಿಧಾನವನ್ನು ವಿಶಿಷ್ಟವಾಗಿಸುತ್ತದೆ.'[23]

ಭಾರತ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಳ್ಳುವ, ಅಂಗೀಕರಿಸುವ ಮತ್ತು ಕಾನೂನಾಗಿ ವಿಧಿಸಿಕೊಳ್ಳುವ ಬಹುದೊಡ್ಡ ವಿವೇಕಯುತ ಜವಾಬ್ದಾರಿಯು ಮಾನವ ಸಂಕುಲದ ಮಹತ್ತ್ವದ ನಡೆಯಾಗಿದೆ. ಇಲ್ಲಿ ಪ್ರಜಾಪ್ರಭುತ್ವವೇ ಮೊದಲು. "ಇದು ಮಾನವ ಸಮಾನತೆಯನ್ನು ಸೂಚಿಸುತ್ತದೆ; ಭ್ರಾತೃತ್ವವನ್ನು ಸೂಚಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು 'ಅಹಿಂಸೆ' ಎಂಬ ದೊಡ್ಡ ತತ್ತ್ವವನ್ನು ತಿಳಿಸುತ್ತದೆ."[24] ಈ ಮೂಲಕ ಸಂವಿಧಾನವು ತನ್ನ ಮೂಲ; ತನ್ನ ಅಧಿಕಾರವನ್ನು ಮತ್ತು ತನ್ನ ಸಾರ್ವಭೌಮತ್ವವನ್ನು ಜನರಿಂದ ಹೊಂದಿ, ಸಮಾನತೆಯ ಆದರ್ಶವನ್ನು ಎತ್ತಿ ಹಿಡಿದಿದೆ.

ಭಾರತದ ಸಂವಿಧಾನ ಅಂಗೀಕಾರವಾಗಿ ಜಾರಿಗೆ ಬಂದ ಮೇಲೆ ಪ್ರಸ್ತಾವನೆಯು ಮತ್ತಷ್ಟು ಚರ್ಚೆಗೆ ಒಳಗಾಯಿತು. 1960ರಲ್ಲಿ ಬೆರುಬಾರಿ ಒಕ್ಕೂಟ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು 'ಸಂವಿಧಾನದ ಯಾವುದೋ ವಿಧಿಯಲ್ಲಿ ಬಳಸಲಾಗಿರುವ ಪದಗಳು ಗೊಂದಲಮಯ ವಾಗಿದ್ದರೆ ಅಥವಾ ಒಂದಕ್ಕಿಂತ ಹೆಚ್ಚು ಅರ್ಥವನ್ನು ನೀಡುವಂತಿದ್ದರೆ ಅಂತಹ ಪದಗಳನ್ನು ಅರ್ಥೈಸಲು ಪ್ರಸ್ತಾವನೆಯಲ್ಲಿ ವ್ಯಕ್ತವಾಗಿರುವ ಉದ್ದೇಶಗಳ ನೆರವನ್ನು ಪಡೆಯಬಹುದು'[25] ಎಂದು ತಿಳಿಸಿದರೂ ಪ್ರಸ್ತಾವನೆಯು ಸಂವಿಧಾನದ ಒಂದು ಭಾಗ ಅಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಆದರೆ, 1973ರಲ್ಲಿ ಕೇಶವಾನಂದ ಭಾರತಿ v/s ಸ್ಟೇಟ್ ಆಫ್ ಕೇರಳ ಮತ್ತು 1995ರಲ್ಲಿ ಎಲ್.ಐ.ಸಿ. ಆಫ್ ಇಂಡಿಯಾ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಪ್ರಸ್ತಾವನೆ ಸಂವಿಧಾನದ ಅವಿಭಾಜ್ಯ ಅಂಗವೆಂದು ಹೇಳಿತು.

'ಕೇಶವಾನಂದ ಭಾರತಿ v/s ಸ್ಟೇಟ್ ಆಫ್ ಕೇರಳ ಪ್ರಕರಣದಲ್ಲಿ ಸಂವಿಧಾನದ 368ನೇ ವಿಧಿ ಅಡಿಯಲ್ಲಿ ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಲು ಸಾಧ್ಯವೆ? ಎಂಬ ಪ್ರಶ್ನೆಗೆ, ಸರ್ವೋಚ್ಚ ನ್ಯಾಯಾಲಯವು, ಪ್ರಸ್ತಾವನೆಯಲ್ಲಿ ಅಡಕವಾಗಿರುವ ಸಂವಿಧಾನದ ಮೂಲಭೂತ ಲಕ್ಷಣ(**ಮೂಲ ಸಂರಚನೆ**)ಗಳಿಗೆ ಧಕ್ಕೆಯಾಗದಂತೆ 368ನೇ ವಿಧಿಯಡಿಯಲ್ಲಿ ಪ್ರಸ್ತಾವನೆ ತಿದ್ದುಪಡಿ ಮಾಡಬಹುದು ಎಂದು ತೀರ್ಪು ನೀಡಿತು.'[26] ಇದರ ಹಿನ್ನೆಲೆಯಲ್ಲಿ 1976ರಲ್ಲಿ 42ನೇ ತಿದ್ದುಪಡಿಯಿಂದ '**ಸಮಾಜವಾದಿ**', '**ಜಾತ್ಯತೀತ**' (ಐಕ್ಯಮತ್ಯ) ಮತ್ತು '**ಅಖಂಡತೆ**' (ಸಮಗ್ರತೆ) ಎಂಬ ಮೂರು ಪದಗಳನ್ನು ಸೇರಿಸಿ ಅಧಿಕೃತಗೊಳಿಸಲಾಯಿತು.

ಇಷ್ಟೆಲ್ಲಾ ಚಾರಿತ್ರಿಕ ದಾಖಲೆಗಳನ್ನು ಹೊಂದಿರುವ ಪ್ರಸ್ತಾವನೆಯು ಪ್ರಜೆಗಳಿಗೆ ಪರಮಾಧಿಕಾರವನ್ನು ನೀಡಿದೆ. ರಾಜ್ಯಾಂಗದ ಮೂಲತತ್ತ್ವಗಳನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪೀಠಿಕೆ ಸಾರಿದರೂ ನೇರ ಕಾನೂನಿನ ಮೌಲ್ಯ ಇಲ್ಲ. ಆದರೂ ಇದು ಮಾನವರ ಮನಸುಗಳಲ್ಲಿ ಜೀವಸಂಚಾರ ಮಾಡುವಂತಹ ಸಂಗತಿಯಾಗಿದೆ. ಜೊತೆಗೆ ಸಂವಿಧಾನಾತ್ಮಕ ಬಿಕ್ಕಟ್ಟು ಸಂಭವಿಸಿದಾಗ ಸಂವಿಧಾನವನ್ನು ಅರ್ಥೈಸಿಕೊಳ್ಳಲು ಪ್ರಸ್ತಾವನೆಯು ಆಧಾರವಾಗುತ್ತದೆ.* ಆದರೆ ಸಂವಿಧಾನದ ಆಶಯಗಳು ಎಪ್ಪತ್ತು ವರ್ಷಗಳ ಈ ಅವಧಿಯಲ್ಲಿ ಎಷ್ಟರಮಟ್ಟಿಗೆ ಕಟ್ಟಕಡೆಯ ಮನುಷ್ಯರನ್ನು ತಲುಪಿದೆ ಎಂಬುದು ಮೂಲಪ್ರಶ್ನೆ. ಪ್ರಸ್ತುತ ಸಂದರ್ಭದಲ್ಲಿ ರಾಜಕೀಯದ ಅರಾಜಕತೆಯ ನಡುವೆ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳು ದಿಕ್ಕುತಪ್ಪುತ್ತಿರುವುದರಿಂದ ಸಂವಿಧಾನದ ಮೂಲ ಆಶಯಗಳು ಪೂರ್ಣ ಸಾಕಾರಗೊಳ್ಳುತ್ತಿಲ್ಲ. ಹಲವೊಮ್ಮೆ ಕೆಲವರಿಂದ ಸಂವಿಧಾನವು ಉಪೇಕ್ಷೆಗೆ ಒಳಗಾಗುತ್ತಲೇ ಇದೆ. ಅಪಮಾನ, ಅಸಹಾಯಕತೆ, ಶೋಷಣೆ ಇವುಗಳಿಂದ ಅಬಲರೆಲ್ಲರೂ ಪರಿತಪಿಸುತ್ತಿದ್ದಾರೆ. ವಿದ್ಯಾವಂತ ಸಮುದಾಯ ಕೂಡ ಇದರಿಂದ ಹೊರತಾಗಿಲ್ಲ. ಧರ್ಮದ ದೃಷ್ಟಿಕೋನಗಳು ವಿಕಾರರೂಪು ಪಡೆಯುತ್ತಿವೆ. ಆಡಳಿತ ವರ್ಗದವರು ಅರೆಬೆಂದ ವಿಚಾರವಂತರಾಗಿ, ಸಂಪ್ರದಾಯದೊಡನೆ ಅನುಸಂಧಾನ ನಡೆಸಿ, ಹೊರಬರಲಾಗದೆ ಕುಳಿತಲ್ಲೇ ಕುಳಿತಿದ್ದಾರೆ. ಪ್ರಗತಿಶೀಲ ಚಟುವಟಿಕೆಗಳು ಕುಂಟುತ್ತಾ ಸಾಗಿವೆ. ನ್ಯಾಯ, ಸತ್ಯ, ಸ್ವಾತಂತ್ರ್ಯ, ಸಮಾನತೆ ಇವುಗಳು ಅರೆಬರೆಯಾಗಿ ದಕ್ಕಲಾರದ ಮೌಲ್ಯಗಳಾಗಿವೆ. ಹಣದ ವಾಂಛೆ ಎಲ್ಲೆಡೆ ಹರಡಿರುವುದರಿಂದ ಬದುಕು ಅತ್ತ ಸಾಗಿದೆ. ಸಾಮಾಜಿಕ ಸ್ತರಗಳು ಬದಲಾಗದೆ ಇದ್ದ ಸ್ಥಿತಿಯಲ್ಲಿಯೇ ಇವೆ. ಹೀಗೆ ಜಖಂಗೊಂಡಿರುವ ಸಾಮಾಜಿಕ ವಾತಾವರಣದಲ್ಲಿ ಸಂವಿಧಾನದ ಪ್ರಸ್ತಾವನೆ ಕೇವಲ ಮೂರ್ತರೂಪದಲ್ಲಿ, ಚೌಕಟ್ಟಿನೊಳಗೆ ಕಂಗೊಳಿಸುತ್ತಿದೆ. ಇಂಥ ಸ್ಥಿತಿಯ ಗತಿಗಳು ಬದಲಾಗಿ, ಪ್ರತಿಯೊಬ್ಬರ ಬದುಕಿನಲ್ಲೂ ಪ್ರಸ್ತಾವನೆಯ ಆಶಯಗಳು ಎದುರಾಗಬೇಕು. ಇದು ಆದಾಗಲೇ, ಪ್ರತಿಯೊಬ್ಬ ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಅತ್ಯುನ್ನತ ಸ್ಥಾನದಲ್ಲಿ ಇರುತ್ತವೆ. ಜಾತಿ, ಧರ್ಮ, ಪ್ರಾಂತೀಯತೆಯ ಆಧಾರದ ಮೇಲೆ ಯಾವುದೇ ತಾರತಮ್ಯ ಇರುವುದಿಲ್ಲ. ಇಂಥ ನಿರೀಕ್ಷೆಯ ಬದಲಾವಣೆಗಳು ಸಾಕಾರಗೊಳ್ಳಲು ಶತಮಾನಗಳೇಬೇಕು. ನಾಳಿನ ನೆಮ್ಮದಿಗಾಗಿ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಲೇಬೇಕು.

ಒಟ್ಟಿನಲ್ಲಿ ಸಂವಿಧಾನದ ಮಹಾಮಾರ್ಗಕ್ಕೆ ಪ್ರಸ್ತಾವನೆಯು ನಂದಾದೀಪವಿದ್ದಂತೆ. ಸಂವಿಧಾನ ಬೆಳಕಾಗಬೇಕಾದರೆ, ಪ್ರಸ್ತಾವನೆ ಎಂಬ ನಂದಾದೀಪ ಬೆಳಗಲೇಬೇಕು. ಆದರೆ ದೀಪ ಹಚ್ಚುವ ಕೆಲಸ ಮಾತ್ರ ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿಯಾಗಿರುತ್ತದೆ. ಅಂದರೆ, 'ನಾವು ಪ್ರಸ್ತಾವನೆಯಲ್ಲಿ ಅಥವಾ ಸಂವಿಧಾನದಲ್ಲಿ ಏನೇನು ಹೇಳುತ್ತೇವೆ ಎಂಬುದಕ್ಕೆ ಸಂಬಂಧವಿಲ್ಲ. ಪ್ರಜಾಪ್ರಭುತ್ವವು ಕಾರ್ಯನಿರ್ವಹಿಸುವುದರ ಮೇಲೆ ಅದರ ಯಶಸ್ಸು ಅವಲಂಬಿಸಿದೆ.'[27]

## ಕೊನೆ ಟಿಪ್ಪಣಿ

* ರಾಷ್ಟ್ರದ ಕನಸು ಮತ್ತು ಮಹತ್ವಾಕಾಂಕ್ಷೆಗೆ ಮುದ್ರಿತ ಮತ್ತು ಲಿಖಿತ ಶಬ್ದಗಳ ಆಕಾರವನ್ನು ಕೊಡುವ ಮಹಾನ್ ಸಾಹಸ (ಭಾ. ಸಂ. ರ. ಸ. ಚ (ನ), ಸಂ. 1, ಪು. 84)
1. ಭಾ. ಸಂ. ರ. ಸ. ಚ (ನ), ಸಂ. 10, ಪು. 810
* ಭಾ. ಸಂ. ರ. ಸ. ಚ (ನ), ಸಂ. 1ರಲ್ಲಿ ಪು. ಸಂ. 80ರಿಂದ 101ರ ತನಕ ಇರುವುದನ್ನು ಅವಲೋಕನ ಮಾಡಬಹುದು.
2. ಭಾ. ಸಂ. ರ. ಸ. ಚ (ನ), ಸಂ. 10, ಪು. 382
* ಅದೇ, ಪು. ಸಂ. 58ರಿಂದ 93ರವರೆಗೆ ಅವಲೋಕನ ಮಾಡಬಹುದು.
3. ಅದೇ, ಪು. 92
4. ಶಿಬಾನಿ ಕಿಂಕರ್ ಚೌಬೆ (ಅನು. ಎಸ್.ಆರ್.ಗೌತಮ್), ಭಾರತ ಸಂವಿಧಾನದ ರಚನೆ ಮತ್ತು ಪ್ರಯೋಗ, 2016, ಪು.20
5. 1976 ರ ಸಂವಿಧಾನ (42ನೇ ತಿದ್ದುಪಡಿ) ಅಧಿನಿಯಮದಿಂದ ಸೇರಿಸಲ್ಪಟ್ಟಿತು.
6. ಅದೇ.
* ಕಾನೂನಿನ ಸಮರ್ಪಕ ನಿರ್ವಹಣೆ ಮಾಡುವುದರಲ್ಲಿ ಮತ್ತು ಅನ್ವಯಗೊಳಿಸುವಲ್ಲಿ ಕಾರ್ಯಾಂಗ ಮತ್ತು ನ್ಯಾಯಾಂಗ ಇವುಗಳಿಗೆ ಪ್ರಾಥಮಿಕವಾಗಿ ಮಾರ್ಗದರ್ಶನ ಮಾಡುವುದಕ್ಕಾಗಿ ಉದ್ದೇಶಗಳ ವಿವರಣೆಯನ್ನು ಕೊಡುವ ಹೇಳಿಕೆಯೇ ಈ ಪರಂಪರೆ. (ಶಿಬಾನಿ ಕಿಂಕರ್ ಚೌಬೆ (ಅನು. ಎಸ್.ಆರ್.ಗೌತಮ್), ಭಾರತ ಸಂವಿಧಾನದ ರಚನೆ ಮತ್ತು ಪ್ರಯೋಗ, 2016, ಪು. 19)
7. ಮೇರುನಂದನ್ ಕೆ. ಬಿ., ಭಾರತ ಸಂವಿಧಾನ ಒಂದು ಪರಿಚಯ, 2014, ಪು. 23
8. ಭಾ. ಸಂ. ರ. ಸ. ಚ (ನ), ಸಂ. 1, ಪು. 82
9. ಅದೇ, ಸಂ. 10, ಪು. 90
10. ಅದೇ, ಸಂ. 10, ಪು. 393
11. ಶಿಬಾನಿ ಕಿಂಕರ್ ಚೌಬೆ (ಅನು. ಎಸ್.ಆರ್.ಗೌತಮ್), ಭಾರತ ಸಂವಿಧಾನದ ರಚನೆ ಮತ್ತು ಪ್ರಯೋಗ, 2016, ಪು. 21
12. ಮೇರುನಂದನ್ ಕೆ. ಬಿ., ಭಾರತ ಸಂವಿಧಾನ ಒಂದು ಪರಿಚಯ, 2014, ಪು. 23
13. ನಾವು ಭಾರತದ ಜನತೆ, ಭಾರತವನ್ನು ಯು.ಎಸ್.ಎಸ್.ಆರ್. ಎಂಬ ಮಾದರಿಯಲ್ಲಿ ಯು.ಐ.ಎಸ್.ಆರ್. ಎಂದು ಕರೆಯಲ್ಪಡುವ ಒಂದು ಭಾರತೀಯ ಸಮಾಜವಾದಿ ಗಣರಾಜ್ಯದ ಒಕ್ಕೂಟವನ್ನು ರಚಿಸಲು ಶ್ರದ್ಧಾಪೂರ್ವಕವಾಗಿ ನಿಶ್ಚಯಿಸಿದ್ದೇವೆ. (ಭಾ. ಸಂ. ರ. ಸ. ಚ (ನ), ಸಂ. 10, ಪು. 64)
14. ಶಿಬಾನಿ ಕಿಂಕರ್ ಚೌಬೆ (ಅನು. ಎಸ್.ಆರ್.ಗೌತಮ್), ಭಾರತ ಸಂವಿಧಾನದ ರಚನೆ ಮತ್ತು ಪ್ರಯೋಗ, 2016, ಪು. 24
15. ಮೇರುನಂದನ್ ಕೆ. ಬಿ., ಭಾರತ ಸಂವಿಧಾನ ಒಂದು ಪರಿಚಯ, 2014, ಪು. 23
16. ಶಿಬಾನಿ ಕಿಂಕರ್ ಚೌಬೆ (ಅನು. ಎಸ್.ಆರ್.ಗೌತಮ್), ಭಾರತ ಸಂವಿಧಾನದ ರಚನೆ ಮತ್ತು ಪ್ರಯೋಗ, 2016, ಪು. 25
17. ಅದೇ, ಪು. 26
18. ಅದೇ, ಪು. 22
19. ಅದೇ, ಪು. 22, 23
20. ಅದೇ, ಪು. 23
21. ಭಾ. ಸಂ. ರ. ಸ. ಚ (ನ), ಸಂ. 10, ಪು. 299
* 'ಭ್ರಾತೃತ್ವವೆಂದರೆ, ಎಲ್ಲ ಭಾರತೀಯರ ಸಮಾನ ಸಹೋದರತ್ವ ಭಾವನೆ – ಭಾರತೀಯರೆಲ್ಲರೂ ಒಂದೇ ಎನ್ನುವ ಭಾವನೆ. ಇದು ಸಾಮಾಜಿಕ ಜೀವನಕ್ಕೆ ಏಕತೆ ಮತ್ತು ಒಗ್ಗಟ್ಟುಗಳನ್ನು ಕೊಡುವ ತತ್ತ್ವ.' – ಡಾ. ಬಿ.ಆರ್. ಅಂಬೇಡ್ಕರ್ (ಮೇರುನಂದನ್ ಕೆ. ಬಿ., ಭಾರತ ಸಂವಿಧಾನ ಒಂದು ಪರಿಚಯ, 2014, ಪು. 26)
22. ಶಿಬಾನಿ ಕಿಂಕರ್ ಚೌಬೆ (ಅನು. ಎಸ್.ಆರ್.ಗೌತಮ್), ಭಾರತ ಸಂವಿಧಾನದ ರಚನೆ ಮತ್ತು ಪ್ರಯೋಗ, 2016, ಪು. 25
* ಡಾ. ಬಿ. ಆರ್. ಅಂಬೇಡ್ಕರ್ ಅವರು ಹೇಳಿದ ಮಾತು. ಭಾ. ಸಂ. ರ. ಸ. ಚ (ನ), ಸಂ. 10, ಪು. 90
23. ಶಿಬಾನಿ ಕಿಂಕರ್ ಚೌಬೆ (ಅನು. ಎಸ್.ಆರ್.ಗೌತಮ್), ಭಾರತ ಸಂವಿಧಾನದ ರಚನೆ ಮತ್ತು ಪ್ರಯೋಗ, 2016, ಪು. 20–21
24. ಭಾ. ಸಂ. ರ. ಸ. ಚ (ನ), ಸಂ. 10, ಪು. 87
25. ಗಂಗಾಧರ ಪಿ. ಎಸ್. ಭಾರತ ಸಂವಿಧಾನ ಮತ್ತು ರಾಜಕೀಯ, 2019, ಪು. 31
26. ಅದೇ, ಪು. 32
* ಪೀಠಿಕೆಯು ಸಂವಿಧಾನದ ಆಶಯವನ್ನು ಮಾತ್ರವಲ್ಲದೆ, ರೂಪುಗೊಳ್ಳಬೇಕಾದ ಭಾರತದ ಪರಿಕಲ್ಪನೆಯನ್ನು ಮುಂದಿಡುತ್ತದೆ. ಎಂತಲೇ ಇದನ್ನು ಬಾಬಾ ಸಾಹೇಬರು 'ಭಾರತದ ಭವಿಷ್ಯದ ಜೀವನ ವಿಧಾನದ ಕನ್ನಡಿ' ಎಂದು ಬಣ್ಣಿಸಿದರು. (ರಹಮತ್ ತರೀಕೆರೆ, ಪ್ರಜಾವಾಣಿ, ಭಾನುವಾರದ ಪುರವಣಿ, 19, ಜನವರಿ 2020,ಪು. 1)
27. ನಜಿರುದ್ದೀನ್ ಅಹಮ್ಮದ್ ಅವರ ಅಭಿಪ್ರಾಯ (ಭಾ. ಸಂ. ರ. ಸ. ಚ (ನ), ಸಂ. 10, ಪು. 89)

## ಸಂಕ್ಷೇಪಗಳ ವಿವರ

* ಭಾ. ಸಂ. ರ. ಸ. ಚ (ನ), – ಭಾರತದ ಸಂವಿಧಾನ ರಚನಾಸಭೆಯ ಚರ್ಚೆಗಳು (ನಡವಳಿಗಳು)

## ಆಕರ ಗ್ರಂಥಗಳು


- **ಗಂಗಾಧರ ಪಿ. ಎಸ್.** (2019) : ಭಾರತ ಸಂವಿಧಾನ ಮತ್ತು ರಾಜಕೀಯ, ಬೆಂಗಳೂರು ಚೈತ್ರ ಪ್ರಕಾಶನ.


– 32ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಶಿವರಾಮ ಕಾರಂತರ ಗರ್ಭಗುಡಿ : ದಲಿತಪರ ಚಿಂತನೆಯ ಅಧ್ಯಯನ

✍ **ಡಾ. ಮಲ್ಲಯ್ಯ ಸಂಡೂರು,** ಉಪನ್ಯಾಸಕರು, ಕನ್ನಡ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ– 583 236

## ಪ್ರಸ್ತಾವನೆ

ನವೋದಯ ಸಾಹಿತ್ಯದಲ್ಲಿ ದಲಿತಪರ ಚಿಂತನೆಯನ್ನು ಗಟ್ಟಿಗೊಳಿಸಿದ ಮಹತ್ವದ ನಾಟಕಗಳಲ್ಲಿ ಶಿವರಾಮ ಕಾರಂತರ 'ಗರ್ಭಗುಡಿ'ಯೂ (1932) ಒಂದು. ಸು. 30ರ ದಶಕದಲ್ಲಿ ಕನ್ನಡದ ನಾಟಕಕಾರರು ಕೇವಲ ಪೌರಾಣಿಕ ಕಥೆಗಳನ್ನು ಆಧಾರವಾಗಿಟ್ಟುಕೊಂಡು ಮನೋರಂಜನೆ ಜೊತೆಗೆ ಧಾರ್ಮಿಕ ಭಾವನೆ ಮತ್ತು ನಂಬಿಕೆಗಳನ್ನು ಗಟ್ಟಿಗೊಳಿಸುವ ಕೆಲಸ ಮಾಡುತ್ತಿದ್ದರು. ಅಂತಹ ಸಂದರ್ಭದಲ್ಲಿ ನಾಟಕವನ್ನು ಹೀಗೂ ಬರೆಯಬಹುದೆಂದು ತೋರಿಸಿಕೊಟ್ಟವರು ಶಿವರಾಮ ಕಾರಂತರು. ಧಾರ್ಮಿಕ ಆಚರಣೆಯ ನೆಪದಲ್ಲಿ ಜನರನ್ನು ಸುಲಿಗೆ ಮಾಡುವ ಸೂಕ್ಷ್ಮ ವಿಷಯವನ್ನು ವಸ್ತುವನ್ನಾಗಿರಿಸಿಕೊಂಡು ಅದನ್ನು ವ್ಯಂಗ್ಯ ಹಾಗೂ ವಿಡಂಬನಾತ್ಮಕವಾಗಿ ಚಿತ್ರಿಸಿ ನಾಟಕ ರೂಪದಲ್ಲಿ ಜನತೆಯ ಮುಂದಿಟ್ಟವರು ಶಿವರಾಮ ಕಾರಂತರು. ಕಾರಂತರು ಬಹುತೇಕ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಅಂತೆಯೇ ನಾಟಕ ಪ್ರಕಾರ ಕೂಡಾ ಹೊರತಾಗಿಲ್ಲ. ಅವರು ಬರೆದ ಹಲವು ನಾಟಕಗಳಲ್ಲಿ 'ಗರ್ಭಗುಡಿ'ಯೂ ಒಂದಾಗಿದೆ.

ಶಿವರಾಮ ಕಾರಂತರ ಹಲವು ನಾಟಕಗಳಲ್ಲಿ ಒಂದಾದ ಈ ನಾಟಕ 30ರ ದಶಕದ ಹೊತ್ತಿಗೆ ಮೂಡಿಬಂದಿರುವ ಈ ನಾಟಕ ವಿವಿಧ ಕಾರಣಕ್ಕೆ ವಿಶಿಷ್ಟ ಹಾಗೂ ವಿಭಿನ್ನವಾಗಿ ಕಂಡುಬರುತ್ತದೆ. ಈ ನಾಟಕದಲ್ಲಿ ಸು.8–9 ಮುಖ್ಯ ಪಾತ್ರಗಳು ಕಂಡುಬರುತ್ತವೆ. ಜೊತೆಗೆ ಸಣ್ಣಪುಟ್ಟ ಪಾತ್ರಗಳು ಕೂಡ ಗಮನಾರ್ಹವೇ. ಏಕೆಂದರೆ ಕಾರಂತರೇ ಹೇಳಿಕೊಂಡಿರುವಂತೆ ಸಣ್ಣ ಪಾತ್ರದ ಮೂಲಕ ಸಮಾಜದಲ್ಲಿ ಕಾಣುವ ನೈಜ ದೃಶ್ಯವನ್ನೇ ತೋರಿಸಲಾಗಿದೆ. ಮುಖ್ಯಪಾತ್ರದಲ್ಲಿ ಬರುವ ಕಾಶ್ಯಪ ಋಷಿ ಶಿಲ್ಪಶಾಸ್ತ್ರಕಾರ. ಆತ ಈ ಕಲಿಯುಗದಲ್ಲಿ ಬಂದು ಗರ್ಭಗುಡಿ ಪ್ರವೇಶಿಸಿ ಅಲ್ಲಿ ಹುದುಗಿರುವ ವಿಗ್ರಹವನ್ನು ಹೊರತೆಗೆಯುತ್ತಾನೆ. ಅಂದರೆ ದೇವರ ಹೆಸರಿನಲ್ಲಿ ಒಂದೆಡೆ ಶೇಖರಿಸಿದ್ದ ಸಂಪತ್ತು ಹೊರತೆಗೆದು ಹಸಿದವರ ಬಾಳು ಹಸನಾಗಲು ವಿತರಿಸುವಲ್ಲಿ ನಾಟಕ ಮುಕ್ತಾಯವಾಗುತ್ತದೆ. ಈ ನಾಟಕದಲ್ಲಿ ಮಠ, ಮಠಕೊಬ್ಬರ ಗುರು, ಆಡಳಿತಕೊಬ್ಬ ಪಾರುಪತ್ಯಗಾರ, ಅಲ್ಲಿನ ವ್ಯವಸ್ಥೆಯಿಂದ ನಡೆಸಿಕೊಂಡು ಹೋಗಲು ಬೇಕಾದ ಕೆಲ ಪುಂಡರು–ಪುರೋಹಿತರು, ಸಾಲದಕ್ಕೆ ಅವರಲ್ಲೊಬ್ಬನ ಪ್ರೇಯಸಿ, ಪರ–ವಿರೋಧ ಭಾವನೆ ಹೊರಹಾಕುವ ಶಿಷ್ಯವರ್ಗ, ಜೊತೆಗೆ ಊರಿನಲ್ಲಿ ಕಂಡುಬರುವ ಕೆಳವರ್ಗದ ವ್ಯಕ್ತಿಗಳು– ಹೀಗೆ ಪಾತ್ರಗಳನ್ನು ಸೃಷ್ಟಿಮಾಡುತ್ತಿರುವ ಕಾರಂತರು ಪ್ರತಿಪಾತ್ರದ ಮೂಲಕವೂ ವಿಶೇಷವಾದ ಸಂದೇಶ ಹೊರಹಾಕಿದ್ದಾರೆ.

ಧರ್ಮದ ದೇವರ ಹೆಸರಿನಲ್ಲಿ ನಡೆಯುವ ಸುಲಿಗೆ, ಶೋಷಣೆ, ಬಹಿಷ್ಕಾರದಂತಹ ಅಮಾನವೀಯ ಕೃತ್ಯಗಳನ್ನು ಕಾರಂತರು ಈ ನಾಟಕದಲ್ಲಿ ಖಂಡಿಸಿದ್ದಾರೆ. ಇಲ್ಲಿ ಏಕಾಕ್ಷಿ, ಮಾದೇಶ ಮತ್ತು ಅಶ್ವತ್ಥರು ಅನಾಥಸ್ವಾಮಿ ಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಿಗೆ ಪೌರೋಹಿತ್ಯ ಕಾರ್ಯದ ವಿಧಿ–ವಿಧಾನ ಮುಗಿಸಿಕೊಡುವುದಾಗಿ ಹೇಳಿ, ಆ ದೇವರು, ಆಚರಣೆ, ವಿಧಿ–ವಿಧಾನಗಳ ಹೆಸರಿನಲ್ಲಿ ಹಣ ಸುಲಿಗೆ ಮಾಡುವವರು. ಅನಾಥಸ್ವಾಮಿಯ ಶುದ್ಧಾಂಬರ ಮಠದ ಸ್ವಾಮಿಗಳಾದ ಶ್ರೀಪಾದಂಗಳು ಹಾಗೂ ಅವರ ಅನುಯಾಯಿ ಪಾರುಪತ್ಯಗಾರರು ಜನರಿಗೆ ವರ್ಣಸಂಕರ, ಜಾತಿಸಂಕರ ಮಾಡಿದ ಕಾರಣವಾಗಿ, ಅಥವಾ ಸುಳ್ಳು ಆರೋಪಮಾಡಿ, ಜಾತಿ–ಧರ್ಮದಿಂದ ಬಹಿಷ್ಕಾರದ ಹೆದರಿಕೆ ಹಾಕಿ ಹಣ ಸುಲಿಗೆ ಮಾಡುವರು. ಇಲ್ಲಿನ ದಲಿತರ ಈ ಧಾರುಣ ಸ್ಥಿತಿಗೆ ಅವರ ಅಜ್ಞಾನ, ಅನಕ್ಷರತೆ, ಕಡುಬಡತನ ಕಾರಣವಾಗಿದೆ. ಅವರನ್ನು ಕಿತ್ತು ತಿನ್ನುತ್ತಿರುವ ಸಮಾಜದ ಮೇಲ್ವರ್ಗದವರೆನಿಸಿಕೊಂಡಿರುವ ಬ್ರಾಹ್ಮಣರ ಭ್ರಷ್ಟತೆಯನ್ನು ನಾಟಕವು ಬಯಲಿಗೆಳೆಯುತ್ತದೆ. ನಾಟಕದ ಮೊದಲ ಅಂಕದಲ್ಲೇ ದೇವಾಲಯವನ್ನು ಸುಂಕದ ಕಟ್ಟೆ ಮಾಡಿಕೊಂಡಿರುವ ಬ್ರಾಹ್ಮಣರ ಕಡುಭ್ರಷ್ಟತೆಯನ್ನು ಕಟುವಾದ ಮಾತುಗಳಲ್ಲಿ ವಿಡಂಬಿಸಲಾಗಿದೆ. ತಮ್ಮ ವೈಚಾರಿಕ ಚಿಂತನೆಗಳಿಂದ ಗಮನಸೆಳೆಯುವ ಕಾರಂತರು ತಮ್ಮ ವಿಚಾರಗಳ ಪ್ರತಿಪಾದನೆಗಾಗಿ ನಾಟಕದಲ್ಲಿ 'ಕಾಶ್ಯಪ'ನೆಂಬ ಪಾತ್ರವನ್ನು ಸೃಷ್ಟಿಸಿಕೊಳ್ಳುತ್ತಾರೆ. ಇದು ವಾಸ್ತವಿಕ ಅನ್ನಿಸದಿದ್ದರೂ ಸತ್ಯದರ್ಶನಕ್ಕೆ ಅನಿವಾರ್ಯ ಎನ್ನುತ್ತಾರೆ. ಕಾಶ್ಯಪ ಪ್ರಾಚೀನ ಕಾಲದ ಶಿಲ್ಪಾಚಾರ್ಯ ಋಷಿ. ತಾನು ಹಿಂದೆ ರೂಪಿಸಿದ ಅನಾಥ ಸ್ವಾಮಿಯ ಮೂರ್ತಿಯು ಯಾವ ಸ್ಥಿತಿಯಲ್ಲಿದೆ ಎಂದು ಗಮನಿಸಲು ಬಂದಿರುತ್ತಾನೆ. ಹಿಂದಿನ ಕಾಲದ ಧಾರ್ಮಿಕ ಮೌಲ್ಯಗಳು ಈಗಿನ ಕಾಲದಲ್ಲಿ ಉಳಿದಿರುವುದಿಲ್ಲವೆಂಬುದನ್ನು ಕಂಡುಕೊಳ್ಳುತ್ತಾರೆ ನಾಟಕಕಾರರು. ನಾಟಕದ ಉಳಿದ ಪಾತ್ರಗಳೆಲ್ಲಾ ಸಮಾಜದ ನಿತ್ಯ ಜೀವನದಲ್ಲಿ ಕಾಣುವ ಪಾತ್ರಗಳೇ ಆಗಿವೆ ಎನ್ನುತ್ತಾರೆ ನಾಟಕಕಾರರು.

ಈ ನಾಟಕವು ದಲಿತ ಪ್ರಜ್ಞೆಯ ನಾಟಕವಾಗಿದ್ದು ನಾಟಕದ ವಸ್ತು ದೇವಾಲಯಗಳ ಭ್ರಷ್ಟತೆಗೆ ಸಂಬಂಧಪಟ್ಟದ್ದಾಗಿದೆ. ಶಿವರಾಮ ಕಾರಂತರ 'ಗರ್ಭಗುಡಿ' ಧರ್ಮದ ಅವನತಿಯನ್ನು ಸಾಂಕೇತಿಕವಾಗಿ ನಿರೂಪಿಸುವ ನಾಟಕವಾಗಿದೆ. ಕಾರಂತರು ಈ ನಾಟಕದ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ: "ದೇಗುಲದ ಗರ್ಭಗುಡಿಯನ್ನು ಬಹಿರಂಗ ಪಡಿಸಿದಂತೆ, ಧರ್ಮದ ಅಂತರ್ಯವನ್ನು ತಿಳಿಯಲು ಯತ್ನಿಸುವುದು. ಇದು ಅಪಹಾಸ್ಯವಾಗಿ (Satirically) ಚಿತ್ರಿತವಾಗಿರುವುದರಿಂದ– 'ಧರ್ಮವಲ್ಲದ್ದು' ಏನು–ಎಂಬುದನ್ನು ತೋರಿಸಲು ಯತ್ನಿಸಿರುತ್ತೇನೆ. ಗರ್ಭಗುಡಿಯಲ್ಲಿ ಅಂತರಂಗದ ಮತ್ತು ಬಹಿರಂಗದ ಎರಡು ವಿಗ್ರಹಗಳನ್ನು ಕಾಣಿಸಿದೆ. ಒಂದು ಇರಬೇಕಾದ, ಅಂದರೆ ನಿಜವಾದ ಶಿಲ್ಪಿಯು ತಪೋಬಲದಿಂದ ಕಂಡು ಅನುಭವಿಸಿ ಕೆತ್ತಿದ ಮೂರ್ತಿ; ಇನ್ನೊಂದು, ಪ್ರತುಮೆಯ ನಿಜ ಪರಿಚಯವಿಲ್ಲದವರು, ಕಾಂಚನಕ್ಕೆ ಮರುಳಾಗಿ, ಬರೇ ಚಿನ್ನ ಬೆಳ್ಳಿ ಮುತ್ತು ರತ್ನಾದಿಗಳಿಂದ ನಿರ್ಮಿಸಿ, ಕಲಾದೃಷ್ಟಿಯಿಂದ ಅಸಹ್ಯವಾಗಿ ಕಾಣಿಸುವಂತೆ ಮಾಡಿದ ಗೊಂಬೆ ! ಇಂದು ನಮ್ಮ ಗುಡಿ ದೇವಾಲಯಗಳಲ್ಲಿ ಶಿಲ್ಪಿಯು ಸೊಗಸಾಗಿ ನಿರ್ಮಿಸಿರುವ ವಿಗ್ರಹಗಳ ಚೆಲುವನ್ನು, ಹೇಗೆ ತಮ್ಮ ಮೂರ್ಖತೆಯಿಂದ, ಪೂಜಾರಿಯರು ಕೆಡಿಸುತ್ತಿರುವರೆಂದು ಇಲ್ಲಿ ತೋರಿಸಿದೆ. ಅಂತೆಯೇ ಧಾರ್ಮಿಕ ಜೀವನದ ಸ್ಥಿತಿ.

ಈ ಕಥಾನಿರ್ದೇಶನದಲ್ಲಿ ಕಾಶ್ಯಪನ ಪಾತ್ರವು ತಾದ್ರೂಪಿಕವಾಗಿ (Realistic) ಕಾಣಿಸಲಿಕ್ಕಿಲ್ಲ. ಕಾಶ್ಯಪ ಋಷಿಯು ಕಲಿಯುಗದಲ್ಲಿ ಅವತರಿಸುವುದುಂಟೇ ? – ಎಂದು ಕೆಲವರು ಬೆಚ್ಚಿಬೀಳಬಹುದು. ಆದರೆ ಕಲಾವಿಧಾನದಲ್ಲಿ ತಾದ್ರೂಪಿಕತೆಗಿಂತ ತದಾತ್ಮಿಕತೆಗೆ ಪ್ರಾಧಾನ್ಯವಿದೆ. ಅಂಥ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸತ್ಯವನ್ನು ಇದು ತೋರಿಸುವುದು. ಕಾಶ್ಯಪನನ್ನೇ ಆರಿಸಲು ಕಾರಣವೇನೆಂದರೆ, ಅವನು ಶಿಲ್ಪಶಾಸ್ತ್ರವನ್ನು ರಚಿಸಿದವನೆಂಬುದರಿಂದ. ತನ್ನ ಉದ್ದೇಶವನ್ನು ಈಗಿನ ಪೂಜಾರ್ಯರು ಎಷ್ಟು ಕೆಡಿಸಿರುವರೆಂದು ತಿಳಿದು ಮರುಗಲು ಅವನಿಗಿಂತ ಮಿಗಿಲಾದ ಇನ್ನೊಂದು ಪಾತ್ರವಿಲ್ಲ. ಅದಕ್ಕಾಗಿ ಶಿಲ್ಪಾಚಾರ್ಯನಾದ ಅವನನ್ನೇ ತಂದಿರುತ್ತೇನೆ. ಮಿಕ್ಕುಳಿದ ಪಾತ್ರಗಳೂ, ದೃಶ್ಯಗಳೂ ಹೆಜ್ಜೆ ಹೆಜ್ಜೆಗೆ ನಮ್ಮ ಸಮಾಜದಲ್ಲಿ ಕಾಣುವ ಚಿತ್ರಗಳೇ" ಎನ್ನುತ್ತಾರೆ. (ಶಿವರಾಮ ಕಾರಂತ, ಗರ್ಭಗುಡಿ, ಮುನ್ನುಡಿ)

ಈ ನಾಟಕವು 87 ಪುಟಗಳನ್ನು ಒಳಗೊಂಡಿದ್ದು 5 ಅಂಕಗಳಲ್ಲಿದೆ. ನಾಟಕದ ಒಂದನೇ ಅಂಕದ ಶ್ರೀಕ್ಷೇತ್ರ ಅನಾಥಪುರಿಯ ಅನಾಥೇಶ್ವರ ದೇವಾಲಯದ ಸನ್ನಿವೇಶ ಭಾರತದ ಯಾವುದೇ ಪುಣ್ಯಕ್ಷೇತ್ರಗಳಲ್ಲಿ ಕಂಡುಬರುವ ಸಾಮಾನ್ಯ ಸನ್ನಿವೇಶವೇ ಆಗಿದೆ. ಇಲ್ಲಿ ಭಕ್ತರನ್ನು ಸುಲಿಗೆ ಮಾಡಲೆಂದೇ ಇರುವ ಏಕಾಕ್ಷಿ, ಮಾಣೇಶ, ಅಶ್ವತ್ಥರ ಪಾತ್ರಗಳಿವೆ. ಹಣವಿಲ್ಲದೆ ದೇವರದರ್ಶನ ಸಾಧ್ಯವೇ ಇಲ್ಲವೆಂಬ ಸನ್ನಿವೇಶವನ್ನು ಅಲ್ಲಿ ಸೃಷ್ಟಿ ಮಾಡಲಾಗಿದೆ.

ಈ ನಾಟಕದಲ್ಲಿ ಚಿದಾನಂದನೆಂಬ ಯುವಕನು ದಲಿತ ಕೇರಿಗೆ ಹೋಗಿ ಅವರ ಉದ್ಧಾರಕ್ಕಾಗಿ ಶ್ರಮಿಸುತ್ತಾನೆ. ಅದನ್ನು ತಡೆಯಲು ಮಾಣೇಶನು ತಮ್ಮ ಕೇರಿಯಲ್ಲಿ ವಾಂತಿ, ಬೇಧಿ ಆಗಿದೆಯೆಂದು; ಅದಕ್ಕೆ ಕಾರಣವೇನೆಂದು ಪ್ರಶ್ನೆ ಕೇಳು ಬಂದ ಬಾಂಕುವಿಗೆ ಜ್ಯೋತಿಷ್ಯ ಹೇಳುವ ನೆಪದಲ್ಲಿ ಬ್ರಾಹ್ಮಣನೊಬ್ಬ ನಿಮ್ಮ ಕೇರಿಗೆ ಬಂದದ್ದರಿಂದ ಮಾರಿ ಮುನಿದಿದ್ದಾಳೆ, ನಿಮ್ಮ ಕೇರಿ ಸುಟ್ಟು ಹೋಗುತ್ತದೆ ಎಂದು ಹೆದರಿಸುತ್ತಾನೆ. ಹೀಗೆ ಮಾಣೇಶ ಬಡವರ ಜ್ಞಾನವನ್ನು ತನ್ನ ಬಂಡವಾಳ ಮಾಡಿಕೊಂಡು ಶೋಷಣೆ ಮಾಡುತ್ತಿದ್ದಾನೆ. ಆದರೆ ತನ್ನ ಮಗುವಿಗೇ ಕಾಯಿಲೆಯಾಗಿ ಚಿಕಿತ್ಸೆಗೆ ದಲಿತರ ಕೇರಿಯಲ್ಲಿದ್ದ ಕಾಶ್ಯಪನನ್ನು ಕರೆತರಲು ಹೋಗಬೇಕಾದ ಸನ್ನಿವೇಶ ನಿರ್ಮಾಣವಾಗುತ್ತದೆ. ಮಾಣೇಶನ ಮಾತನ್ನು ಕೇಳುವ ಮತ್ತು ನಂಬುವ ದಲಿತರು ಚಿದಾನಂದನ ಸೇವೆಯನ್ನು ನಿರಾಕರಿಸುತ್ತಾರೆ. ಆಗ ಚಿದಾನಂದನು 'ಹೇಳಿದ್ದನ್ನೆಲ್ಲಾ ನಂಬುವ ಇವರು ಸುಲಭವಂಚಿತರು. ಮೊದಲೇ ಚಿತ್ತರರಾಸ್ಯಕ್ಕೆ ಬಿದ್ದು 'ನಾವು ಕೀಳು' ಎಂಬ ಭಾವವು ರಕ್ತದಲ್ಲಿ ಬೆರೆತು ಹೋಗಿದೆ' ಎಂದು ದಲಿತರ ಬಗೆಗೆ ಮರುಗುತ್ತಾನೆ.

ಬೇರೆ ಊರಿನಿಂದ ಬಂದ ಕಾಶ್ಯಪನಿಗೂ ಹೊಲಗೇರಿಗೆ ಹೋಗಿದ್ದಾಗಿ ಮತ್ತು ಅನಾಥ ಸ್ವಾಮಿಗೆ ಅವಹೇಳನಕಾರಿ ಮಾತನಾಡಿದ್ದಾಗಿ ಸುಳ್ಳು ಸಾಕ್ಷಿ ಹೇಳಿಸಿ ದಂಡ ಹಾಕುವರು. ಆದರೆ ಕಾಶ್ಯಪನು ಕೊಡಲೊಪ್ಪುವುದಿಲ್ಲ. ಧರ್ಮವೇ ಇಲ್ಲದ ತನಗೆ ಬಹಿಷ್ಕಾರ ಏತರದ್ದೆಂದು ಹೆದರುವುದಿಲ್ಲ. ತನ್ನನ್ನು ದೇವಾಲಯದೊಳಗೆ ಬಿಟ್ಟರೆ ಬೇಡಿ ಪಡೆದು ನಿಮ್ಮ ಹಣದ ದಾಹ ತೀರಿಸುವುದಾಗಿ ಹೇಳುವನು. ಆದರೂ ಬಿಡುವುದಿಲ್ಲ. ಅನಂತರ ಶ್ರೀಪಾದಂಗಳು ಗರ್ಭಗುಡಿಯಲ್ಲಿ ನಿಧಿ ಇದೆ ಎಂದು ಹೇಳಲಾಗುತ್ತಿದೆ. ಅದು ಅವನಿಗೆ ತಿಳಿಯದಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ಆತ ಹಾಗೆ ಹೇಳಿದ್ದಾನೆಂದು ಅರ್ಥ ಕಲ್ಪಿಸಿಕೊಂಡು ಅವನನ್ನು ಹುಡುಕಿ ಕರೆಯಿಸಿ ಕೇಳುವರು.

ಶ್ರೀಪಾದರು ಹಣ ಸಿಗುವುದೆಂಬ ಆಸೆಯಿಂದಾಗಿ ಗರ್ಭಗುಡಿಯನ್ನೇ ಅಗೆಸುತ್ತಾರೆ. ಆದರೆ ಅದು ಸಿಗದಿದ್ದಾಗ ಗುಪ್ತನಿಧಿ ಇರುವ ಸ್ಥಳ ಕಾಶ್ಯಪನಿಗೆ ಗೊತ್ತಿರಬಹುದೆಂದು ತರ್ಕಿಸುತ್ತಾರೆ. ಹಣಕ್ಕಾಗಿ ಏನುಬೇಕಾದರೂ ಮಾಡಬಲ್ಲವರಾಗಿದ್ದ ಅವರು ಕಾಶ್ಯಪನಿಗೆ ಕರೆ ಕಳುಹಿಸುತ್ತಾರೆ. ಏಕಾಕ್ಷಿಯು ಕಾಶ್ಯಪನನ್ನು ಕರೆತರುತ್ತಾನೆ. ನಾಟಕದ ಕೊನೆಯ ದೃಶ್ಯದಲ್ಲಿ ಕಾಶ್ಯಪನು ಶ್ರೀಪಾದರಿಗೆ 'ನಿಮಗೆ ಎಷ್ಟು ಬೇಕೋ ದ್ರವ್ಯ ತೆಗೆದುಕೊಳ್ಳಿ ದೇವರನ್ನು ನನಗೆ ಬಿಟ್ಟುಕೊಡಿ' ಎನ್ನುತ್ತಾನೆ. ಹಣದ ಆಸೆಗೆ ಶ್ರೀಪಾದರು ಒಪ್ಪಿಗೆ ನೀಡುತ್ತಾರೆ. ಭಾನುಕೋಟಿ ಆಚಾರ್ಯ, ಮಾಣೇಶ, ಏಕಾಕ್ಷಿ, ಅಶ್ವತ್ಥ ಇವರುಗಳೆಲ್ಲರೂ ದ್ರವ್ಯದ ಆಸೆಗೆ ದೇವಾಲಯವನ್ನು ಬಿಟ್ಟು ಹೋಗಲು ನಿರ್ಧರಿಸುತ್ತಾರೆ.

ಕಾಶ್ಯಪನು ನೀವೆಲ್ಲಿ "ಅನಾಥ ಬಂಧು ನನಗೆ ನೀನು ಬೇಕಿಲ್ಲ; ಬದಲು ಬೇಕೆನ್ನುವಷ್ಟು ಚಿನ್ನವನ್ನು ಕೊಡು" ಎಂದು ಬೇಡಿಕೊಳ್ಳಲು ಹೇಳುವನು. (ಗರ್ಭಗುಡಿ: ಪುಟ.108) ಶ್ರೀಪಾದಗಳು, ಭಾನು, ಏಕಾಕ್ಷಿ, ಮಾಗೇಶರರು ಅದಕ್ಕೆ ಒಪ್ಪಿ, ಚಿನ್ನವನ್ನು ತೆಗೆದುಕೊಂಡು ಊರು ಬಿಡಲು ತಯಾರಾಗುವರು. ಕಾಶ್ಯಪನು ಗರ್ಭಗುಡಿಯಲ್ಲಿಯ ಚಿನ್ನದ ಮೂರ್ತಿಕಿತ್ತು ಅವರ ಚಿನ್ನದ ದಾಹ ತೀರಿಸುವನು. ಆಗ ತಾನು ಪೂರ್ವದಲ್ಲಿ ಕೆತ್ತಿದ ಕಲ್ಲಿನ ಮೂರ್ತಿಯು ಹೊಳೆಯುವುದು. ಅಂದಿನ ಗರ್ಭಗುಡಿಯ ಬಾಗಿಲು ಜಗತ್ತಿಗೆ ತೆರೆಯುವುದು, ಸರ್ವನಾಮವರಿಗೂ ಅಲ್ಲಿಗೆ ಬರುವ, ದೇವಾಲಯ ಪ್ರವೇಶಿಸುವ ಸ್ವಾತಂತ್ರ್ಯ ದೊರೆಯುತ್ತದೆ. ಇದು ಮೊದಲು ಚಿನ್ನದ ದೇಗುಲವಾಗಿತ್ತು. ಅದಕ್ಕೆ ಕಲ್ಲಿನ ಒಡಲಿತ್ತು. ಈಗ ಕಲ್ಲಿನ ದೇಗುಲವಿದ್ದು ಚಿನ್ನದ ಒಡಲನ್ನು ಹೊಂದಿತು. ಈ ನಾಟಕದಲ್ಲಿ ಕಾಶ್ಯಪ ಮತ್ತು ಚಿದಂಬರರಾಯ ಸುಧಾರಣಾವಾದಿಗಳಾದರೆ, ಶ್ರೀಪಾದ, ಭಾನು, ಏಕಾಕ್ಷಿ, ಮಾಣೇಶ– ಇವರೆಲ್ಲರೂ ಸಂಪ್ರದಾಯವಾದಿಗಳು ಆಗಿದ್ದಾರೆ. ಜನರನ್ನು ಶೋಷಣೆ ಮಾಡುವ ಪುರೋಹಿತ ಶಾಹಿಗಳ ವರ್ಗ.

ಹೀಗೆ ಬ್ರಾಹ್ಮಣರಿಂದ ಅವರಿಗೆ ಸಾಕೆನಿಸುವಷ್ಟು ದ್ರವ್ಯ ನೀತಿ ಮುಕ್ತಿಗೊಳಿಸುತ್ತಾನೆ ಕಾಶ್ಯಪ. ಹೀಗೆ ಅನಾಥೇಶ್ವರ ದೇವಾಲಯದ 'ಗರ್ಭಗುಡಿ'ಯ ಬಾಗಿಲು ಅನಾಥರಿಗೆ, ದೀನರಿಗೆ ಪತಿತರಿಗೆ ತೆರೆದು ಕೊಳ್ಳುವುದರೊಂದಿಗೆ ನಾಟಕ ಕೊನೆಗೊಳ್ಳುತ್ತದೆ. ಶೋಷಿತರಿಗೆ ಗರ್ಭಗುಡಿಯನ್ನು ಮುಕ್ತವಾಗಿಸಿ ನಾಟಕಕಾರರು ನಾಟಕವನ್ನು ಸುಖಾಂತಗೊಳಿಸಿದ್ದಾರೆ ಎನ್ನಬಹುದು.

## ಪ್ರಧಾನ ಕೃತಿ

1. **ಶಿವರಾಮ ಕಾರಂತ, ಗರ್ಭಗುಡಿ,** ರಾಮಮೋಹನ ಕಂಪೆನಿ, ಬೆಂಗಳೂರು ಸಿಟಿ. 1932

## ಆಕರ ಗ್ರಂಥಗಳು

- **ಮರುಳ ಸಿದ್ಧಪ್ಪ ಕೆ., ಆಧುನಿಕ ಕನ್ನಡ ನಾಟಕ** (2013) : ಬೆಂಗಳೂರು ಅಂಕಿತ ಪುಸ್ತಕ.
- **ರಂಗನಾಥ್ ಎಚ್.ಕೆ(ಸಂ)., ವೃತ್ತಿರಂಗದರ್ಶನ** (1993) : ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು.
- **ರಂಗನಾಥ್ ಎಚ್.ಕೆ., ಕರ್ನಾಟಕ ರಂಗಭೂಮಿ** (2000) : ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.

■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ,
ಗದಗ-582 101
ದೂರವಾಣಿ : 08372–237527, 277527
e-mail : vidyanidhiprakashana@gmail.com.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಪರಿಶಿಷ್ಟ ಸಮುದಾಯಗಳ ಯುವಕರಿಗೆ ಉದ್ಯಮಶೀಲತೆಯ ಅವಶ್ಯಕತೆ ಮತ್ತು ಸವಾಲುಗಳು

✍ ಡಾ. ಸುರೇಶ ಕೆ. ಪಿ., ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.

ನಮ್ಮ ರಾಜ್ಯದಲ್ಲಿ 2011 ರ ಜನಗಣತಿ ಪ್ರಕಾರ ಒಟ್ಟು ಭೂರಹಿತ ದಿನಗೂಲಿ ದುಡಿಮೆಗಾರರ ಸಂಖ್ಯೆ 71.55 ಲಕ್ಷ. ಇವರಲ್ಲಿ ಪರಿಶಿಷ್ಟರ ಸಂಖ್ಯೆ 29.70 ಲಕ್ಷ ಜನಸಂಖ್ಯೆಯಲ್ಲಿ ಪರಿಶಿಷ್ಟರ ಪ್ರಮಾಣ ಶೇ24ರಷ್ಟಿದ್ದರೆ ಭೂರಹಿತ ದಿನಗೂಲಿ ದುಡಿಮೆಗಾರರಲ್ಲಿ ಅವರ ಪ್ರಮಾಣ ಶೇ 41.50 ರಷ್ಟಿದೆ. ಈ ಎಲ್ಲ ತಾರತಮ್ಯದ ಮೂಲದಲ್ಲಿ ಅಸ್ಪೃಶ್ಯತೆಯ ಪಾತ್ರವಿದೆ. ಅಸ್ಪೃಶ್ಯತೆಯ ಕಾರಣದಿಂದಾಗಿ ಪ. ಜಾ. ಯಲ್ಲಿ ಬಡತನದ ಪ್ರಮಾಣ ಸಾಪೇಕ್ಷವಾಗಿ ಅಧಿಕವಾಗಿದೆ. ಅಸ್ಪಶ್ಯತೆಯ ಕಾರಣವಾಗಿ ರಾಜ್ಯದ ಒಟ್ಟು ಭೂರಹಿತ ದಿನಗೂಲಿ ದುಡಿಮೆಗಾರರಲ್ಲಿ ಪರಿಶಿಷ್ಟರ ಪ್ರಮಾಣವು ಅಧಿಕವಾಗಿದೆ. ಅಸ್ಪೃಶ್ಯತೆಯ ಕಾರಣದಿಂದಾಗಿ ಅವರ ವಾಸಸ್ಥಾನಗಳು ಗ್ರಾಮೀಣ ಪ್ರದೇಶದಲ್ಲಿ ಊರಾಚೆಯಲ್ಲಿರುತ್ತವೆ.

2011 ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಒಟ್ಟು ಅಕ್ಷರಸ್ಥರ ಸಂಖ್ಯೆ 406.47 ಲಕ್ಷ. ಇವರಲ್ಲಿ ಶಿಷ್ಟರ ಸಂಖ್ಯೆ 324.01 ಲಕ್ಷವಾದರೆ ಪರಿಶಿಷ್ಟರ ಸಂಖ್ಯೆ 82.46 ಲಕ್ಷ. ಒಟ್ಟು ಅಕ್ಷರಸ್ಥರಲ್ಲಿ ಶಿಷ್ಯರ ಪ್ರಮಾಣ ಶೇ. 79.71 ರಷ್ಟಿದ್ದರೆ ಪರಿಶಿಷ್ಟರ ಪ್ರಮಾಣ ಶೇ. 20.29 ಅನಕ್ಷರಸ್ಥರಲ್ಲಿ ಪರಿಶಿಷ್ಟರ ಪ್ರಮಾಣ ಶೇ. 34.32 ಆದರೆ ನಮಗೆ ತಿಳಿದಿರುವಂತೆ ಜನಸಂಖ್ಯೆಯಲ್ಲಿ ಶಿಷ್ಟರ ಪ್ರಮಾಣ ಶೇ. 75.90 ಮತ್ತು ಪರಿಶಿಷ್ಟರ ಪ್ರಮಾಣ ಶೇ. 25.10 ಅಕ್ಷರಸ್ಥರಲ್ಲಿ ಪ್ರಮಾಣ ಅವರು ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದ್ದಾರೋ ಅದಕ್ಕಿಂತ ಕಡಿಮೆ ಪಾಲನ್ನು ಪಡೆದಿದ್ದಾರೆ. ಇದು ಅನಕ್ಷರಸ್ಥರಿಗೆ ಸಂಬಂಧಿಸಿದಂತೆ ತಿರುವುಮುರುವು ಆಗಿದೆ. ಇದರ ಮೂಲದಲ್ಲಿರುವ ಪ್ರಧಾನ ಸಂಗತಿಯೆಂದರೆ ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಅಸ್ಪೃಶ್ಯತೆ. ದುಡಿಮೆಗಾರರ ಸಂರಚನೆ ನಮ್ಮ ಸಮಾಜದಲ್ಲಿ ಪರಿಶಿಷ್ಟರು ಎದುರಿಸುತ್ತಿರುವ ತಾರತಮ್ಯ ಯಾವ ಸ್ವರೂಪದ್ದು ಮತ್ತು ಯಾವ ಪ್ರಮಾಣದ್ದು ಎಂಬುದನ್ನು ಕೆಳಗಿನ ಕೋಷ್ಟಕದಲ್ಲಿ ಮಂಡಿಸಲಾಗಿದೆ. ಅಭಿವೃದ್ಧಿಯಲ್ಲಿನ ಪಾಲಿನ ವಿಷಯ ಬಂದಾಗ ಶಿಷ್ಟರ ಪಾಲು ಅಧಿಕವಾಗಿರುತ್ತದೆ ಮತ್ತು ದುಸ್ಥಿತಿಯ ವಿಷಯ ಬಂದಾಗ ಅದರಲ್ಲಿ ಪರಿಶಿಷ್ಟರ ಪಾಲು ಅಧಿಕವಾಗಿರುತ್ತದೆ. ಕರ್ನಾಟಕದ ದುಡಿಮೆಗಾರರ ಶಿಷ್ಟ–ಪರಿಶಿಷ್ಟ ಆಯಾಮದಲ್ಲಿ ಇದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ

ಅಂಚಿನಲ್ಲಿರುವ ಸಮುದಾಯಕ್ಕೆ ಸೇರಿದವರಲ್ಲಿ ಶೈಕ್ಷಣಿಕ ಮತ್ತು ಕೌಶಲ್ಯದ ಕೊರತೆಯು ಪ್ರಮುಖ ಅಡ್ಡಿಯಾಗಿದೆ. ಅದು ಜವಾಬ್ದಾರಿ ಹೊರುವ ಸಂದರ್ಭದಲ್ಲಿ ವಿಶ್ವಾಸದ ಕೊರತೆಗೆ ಕಾರಣವಾಗುತ್ತದೆ. ಈ ಆತ್ಮವಿಶ್ವಾಸದ ಕೊರತೆ ಮತ್ತು ಸ್ವಯಂಬಲದ ಮೇಲೆ ನಂಬಿಕೆ ಇಲ್ಲದೇ ಇರುವುದು ಮಹಿಳೆಯರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಕೊರತೆ ನೀಗುವುದಕ್ಕಾಗಿ ಉದ್ಯಮಶೀಲತೆಯ ಕುರಿತು ಉತ್ತೇಜನ ನೀಡುವುದು ಮತ್ತು ಕೌಶಲ್ಯಾಭಿವೃದ್ಧಿಗಳ ಬಗ್ಗೆ ಏಕಕಾಲಕ್ಕೆ ತರಬೇತಿ ನೀಡುವ ಅಗತ್ಯವಿದೆ. ಸಮಾಜದ ಪ್ರತಿಯೊಂದು ಸಮೂಹವನ್ನು ಸಶಕ್ತಗೊಳಿಸುವ ಕಾರ್ಯಸೂಚಿ ಮತ್ತು ಯೋಜನೆಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ. ಭಾರತವು ಕಳೆದ ಏಳು ದಶಕಗಳ ಅವಧಿಯಲ್ಲಿ ಸಮಾಜದ ಪ್ರತಿ ಘಟಕವನ್ನು ಆರ್ಥಿಕವಾಗಿ ಸಶಕ್ತಗೊಳಿಸುವ ಅವಕಾಶಗಳನ್ನು ವ್ಯವಸ್ಥಿತವಾಗಿ ರೂಪಿಸುತ್ತ ಬಂದಿದೆ. ಆದರೂ ಸಮಾಜದ ಅಸಹಾಯಕ ಸಮುದಾಯವನ್ನು ಮೇಲೆತ್ತಲು ಸಾಕಷ್ಟು ಅವಕಾಶಗಳು ಉಳಿದುಕೊಂಡಿವೆ. ಆರ್ಥಿಕ ಮತ್ತು ಸಾಮಾಜಿಕ ಏಣಿಯನ್ನು ಮೇಲೆ ಹತ್ತಲು ಅಗತ್ಯವಿರುವ ಸಾಮಾಜಿಕ ಹೂಡಿಕೆಯ ಕೊರತೆ ಎದುರಿಸುತ್ತಿರುವ ಸಮಾಜದ ದುರ್ಬಲರಿಗೆ ನೆರವು ಒದಗಿಸಬೇಕಿದೆ. ಸಮಾಜದಲ್ಲಿನ ಯೋಚನಾಕ್ರಮದ ಕಾರಣದಿಂದಾಗಿ ಹಲವಾರು ಸಲ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ, ದೈಹಿಕ ಸಾಮರ್ಥ್ಯ ಹೊಂದಿರದ ಮತ್ತು ಮಹಿಳೆಯರು ಸಮಾಜದಿಂದ ಬೇರ್ಪಟ್ಟ ಒಂಟಿತನ ಅಸಹಾಯಕತೆ ಅನುಭವಿಸುತ್ತಾರೆ. ನಮ್ಮ ಸಮಾಜದಲ್ಲಿ ದೈಹಿಕ ವೈಕಲ್ಯ ಹೊಂದಿರುವವರು ಮತ್ತು ವಿಶೇಷ ಚೇತನರು ಕೂಡ ಯೋಗ್ಯವಲ್ಲದ ರೀತಿಯಲ್ಲಿ ಜೀವಿಸುವ ಸ್ಥಿತಿ ಇದೆ. ಸಮಾಜದ ವಿವಿಧ ಘಟಕಗಳ ಸ್ಥಿತಿಗತಿಗಳ ನಡುವೆ ಅಂತರ ಬೆಳೆಯುತ್ತಿದೆ. ಲಿಂಗ ತಾರತಮ್ಯ ಮತ್ತು ವೈಕಲ್ಯದ ಕಾರಣದಿಂದಾಗಿ ಸಮಾಜದಲ್ಲಿ ದುರ್ಬಲರನ್ನು ಕಡೆಗಣಿಸುವುದು ಸರಿಯಲ್ಲ. ಅಂಕಿ ಸಂಖ್ಯೆಗಳು ಹತಾಶೆಯನ್ನುಂಟು ಮಾಡುವಷ್ಟಿವೆ. ಉದಾರೀಕರಣ ಮತ್ತು ಆರ್ಥಿಕ ಪ್ರಗತಿಯ ಹಲವು ವರ್ಷಗಳ ನಂತರವೂ ಸಂಪನ್ಮೂಲ ಮತ್ತು ಅವಕಾಶಗಳನ್ನು ಸಮಾನವಾಗಿ ಹಂಚುವುದು ಸಾಧ್ಯವಾಗಿಲ್ಲ. ಮತ್ತು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಒಳಗೊಳ್ಳುವುದು ತಲುಪಲಾಗದ ಗುರಿಯಾಗಿಯೇ ಉಳಿದಿದೆ.

## ಆಶಾದಾಯಕ ಸಾಮಾಜಿಕ ಪ್ರತಿಕ್ರಿಯೆ

ನೀತಿ ಆಯೋಗಕ್ಕಾಗಿ ಪ್ರಥಮ್ ನಡೆಸಿದ ಅಧ್ಯಯನವು ಹೀಗೆ ಸೂಚಿಸುತ್ತದೆ–"ಪ್ರತಿಕ್ರಿಯೆ ನೀಡಿದವರ ಪೈಕಿ ಅರೆನಗರ ಮತ್ತು ಗ್ರಾಮೀಣ ಪ್ರದೇಶಕ್ಕೆ ಸೇರಿದ ಸುಮಾರು ಶೇ. 70ರಷ್ಟು ಜನ 'ಸ್ವಯಂ ಉದ್ಯೋಗ' ಹೊಂದಿದ ಉದ್ಯಮಿಗಳಾಗಲು ಬಯಸುತ್ತಾರೆ. ಅದು ನಗರ ಪ್ರದೇಶಕ್ಕೆ ಸೇರಿದವರಿಗಿಂತ ತೀರಾ ವ್ಯತಿರಿಕ್ತವಾದ ಪ್ರತಿಕ್ರಿಯೆ. (ದ ಇಂಡಿಯನ್ ಎಕ್ಸ್‌ಪ್ರೆಸ್, 2018)" ದೇಶದ ಅದರಲ್ಲಿಯೂ ವಿಶೇಷವಾಗಿ ಗ್ರಾಮೀಣ ಪ್ರದೇಶಕ್ಕೆ ಸೇರಿದ ಯುವಜನರು ಬಡತನ ಮತ್ತು ನಿರುದ್ಯೋಗದಿಂದ ಹೊರಬರುವುದಕ್ಕಾಗಿ ಉದ್ಯಮಶೀಲರಾಗಲು ಸಿದ್ಧರಾಗಿದ್ದಾರೆ ಎಂಬುದನ್ನು ಸಂಶೋಧನೆಯ ಮಾಹಿತಿಯು ಪುನರುಚ್ಚರಿಸುತ್ತದೆ. ಭಾರತವು ಉತ್ಸಾಹ ಮತ್ತು ಧೈರ್ಯದಿಂದ ಕೂಡಿದ ಯುವಜನರ ದೇಶ. ಜನಸಂಖ್ಯೆ ಆಧರಿತ ಯುವಕರ ಮಾಹಿತಿ ಗಮನಿಸಿದರೆ, ಬಹುತೇಕ ಜನರು ಸಂಪನ್ಮೂಲ ಕೊರತೆಯ ವಾತಾವರಣ ಇರುವ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಅಂಚಿನಲ್ಲಿರುವ ಸಮುದಾಯಗಳಿಗೆ ಸೇರಿದವರು. ಆದರೂ. ಅವರಲ್ಲಿ ವ್ಯಕ್ತಗತವಾಗಿರುವ ಸ್ವಾಭಾವಿಕ ಉದ್ಯಮಶೀಲತೆಯ ಲಕ್ಷಣವು ಯಶಸ್ವಿ ಉದ್ಯಮಶೀಲತೆಯ ಲಕ್ಷಣವು ಯಶಸ್ವಿ ಉದ್ಯಮಿಗಳಾಗಿ ಬೆಳೆಸಲು ಪೂರಕವಾಗಿದೆ.

ಹೊಸ ಉತ್ಪನ್ನಗಳ ಆವಿಷ್ಕಾರ, ಸಮಾಜದ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಕಂಡುಕೊಳ್ಳುವ ವಿಭಿನ್ನ ಪರಿಹಾರಗಳ ಮತ್ತು ಮಹತ್ವ ಪ್ರಗತಿದಾಯಕ ಅಂಶಗಳು ಅವರನ್ನು ಆಕರ್ಷಿಸುತ್ತವೆ. ಅವರು ಸಮಾಜವನ್ನು ಬದಲಾಯಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದಾರೆ. ಹೊಸ ಉದ್ಯಮದಲ್ಲಿ ಮುಂದುವರೆಯುವುದಕ್ಕಾಗಿ ಅವರಿಗೆ ಅಗತ್ಯ

ಇರುವುದು, ಯೋಚನೆ–ಯೋಜನೆಗಳಿಗೆ ಸೂಕ್ತ ಮಾರ್ಗದರ್ಶನದೊಂದಿಗೆ ವಿಶ್ವಾಸಾರ್ಹ ಬೆಂಬಲ ಒದಗಿಸುವ ವ್ಯವಸ್ಥೆ ಮತ್ತು ಅವರ ಪ್ರಯತ್ನದಲ್ಲಿ ಯಶಸ್ವಿಗಳಾಗಿ ಪರಿವರ್ತಿಸುವ ನೆರವು. ವಾಣಿಜ್ಯೋದ್ಯಮದ ಚಲನಶೀಲತೆಯ ಜಗತ್ತಿನ ಅತಿದೊಡ್ಡ ಅಧ್ಯಯನವಾದ, 2017–18 ರಲ್ಲಿದ್ದ ಉದ್ಯಮಾಸಕ್ತಿಯ ಪ್ರಮಾಣವು ಶೇ. 9 ರಿಂದ 14.9ಕ್ಕೆ ಹೆಚ್ಚಿದೆ. ಹಾಗೆಯೇ 'ಸೋಲುವ ಭಯ'ವು 2015–16ನೇ ಸಾಲಿನಲ್ಲಿ ಶೇ. 44ರಷ್ಟಿದ್ದರೆ, 2017–18ನೇ ಸಾಲಿನಲ್ಲಿ ಶೇ.37.5ಕ್ಕೆ ಇಳಿದಿದೆ. 2016–17 ರ ವರದಿಯು ಭಾರತದಲ್ಲಿ ಶೇ. 44ರಷ್ಟು ಯುವಕರು 'ಹೊಸ ಉದ್ಯಮ ಆರಂಭಿಸುವ ಉತ್ತಮ ಅವಕಾಶ'ಕ್ಕಾಗಿ ಕಾದಿರುವುದನ್ನು ದಾಖಲಿಸಿದೆ. ಹಾಗೆಯೇ ಶೇ. 44ರಷ್ಟು ಜನ 'ಉದ್ಯಮ ಆರಂಭಿಸುವ ಸಾಮರ್ಥ್ಯ' ಹೊಂದಿದ್ದಾರೆ ಎಂಬ ಅಂಶವನ್ನು ಗುರುತಿಸಿದೆ. ಅದೇ ರೀತಿಯಲ್ಲಿ 2017ರ ಭಾರತದ ಆಮ್ ವೇ ಉದ್ಯಮಶೀಲತಾ ವರದಿಯು ಸಮೀಕ್ಷೆಯಲ್ಲಿ ಭಾಗವಹಿಸಿದವರ ಪೈಕಿ ಶೇ. 30ರಷ್ಟು 'ತಮ್ಮ ಸ್ವಂತ ಉದ್ಯಮ' ಆರಂಭಿಸುವ ಬಯಕೆ ಹೊಂದಿದ್ದಾರೆ. ಈ ಮೇಲ್ಕಾಣಿಸಿದ ಎರಡೂ ಅಧ್ಯಯನಗಳಿಂದ, ಸಮಾಜದಲ್ಲಿ ವಾಣಿಜ್ಯೋದ್ಯಮ ಕುರಿತಾದ ಗ್ರಹಿಕೆಯಲ್ಲಿ ಗಮನಾರ್ಹ ಬದಲಾವಣೆ ಆಗಿರುವುದರಿಂದ ಉದ್ಯಮಶೀಲತೆಯ ಭವಿಷ್ಯವು ಆಶಾದಾಯಕವಾಗಿದೆ ಎಂಬುದು ತಿಳಿದು ಬರುತ್ತದೆ. ಇದು ದೇಶದಲ್ಲಿ ವಾಣಿಜ್ಯೋದ್ಯಮದ ಪ್ರಗತಿಯ ದೃಷ್ಟಿಯಿಂದ ಆರೋಗ್ಯಕರ ಬೆಳವಣಿಗೆಯನ್ನೂ ಸೂಚಿಸುತ್ತದೆ.

ಅಂಚಿನಲ್ಲಿರುವ ಸಮುದಾಯಕ್ಕೆ ಸೇರಿದವರಲ್ಲಿ ಶೈಕ್ಷಣಿಕ ಮತ್ತು ಕೌಶಲ್ಯದ ಕೊರತೆಯು ಪ್ರಮುಖ ಅಡ್ಡಿಯಾಗಿದೆ. ಅದು ಜವಾಬ್ದಾರಿ ಹೊರುವ ಸಂದರ್ಭದಲ್ಲಿ ವಿಶ್ವಾಸದ ಕೊರತೆಗೆ ಕಾರಣವಾಗುತ್ತದೆ. ಈ ಆತ್ಮವಿಶ್ವಾಸದ ಕೊರತೆ ಮತ್ತು ಸ್ವಯಂಬಲದ ಮೇಲೆ ನಂಬಿಕೆ ಇಲ್ಲದೇ ಇರುವುದು ಮಹಿಳೆಯರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಕೊರತೆ ನೀಗುವುದಕ್ಕಾಗಿ ಉದ್ಯಮಶೀಲತೆಯ ಕುರಿತು ಉತ್ತೇಜನ ನೀಡುವುದು ಮತ್ತು ಕೌಶಲ್ಯಾಭಿವೃದ್ಧಿಗಳ ಬಗ್ಗೆ ಏಕಕಾಲಕ್ಕೆ ತರಬೇತಿ ನೀಡುವ ಅಗತ್ಯವಿದೆ. ಯುವಕರಲ್ಲಿ ಆತ್ಮವಿಶ್ವಾಸ ತುಂಬಲು ಮತ್ತು ನಡವಳಿಕೆಯ ದೃಷ್ಟಿಕೋನ ರೂಪಿಸುವಲ್ಲಿ ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಪೂರಕವಾಗಿವೆ ಎಂಬುದು ಕಾಲಾನುಕಾಲದಿಂದ ಸಾಬೀತಾಗಿದೆ. ನಿರ್ದಿಷ್ಟವಾದ ಗುರಿ ಹೊಂದಿದ ಉದ್ಯಮಶೀಲತಾ ತರಬೇತಿ, ಮಾರ್ಗದರ್ಶನ ಮತ್ತು ಮೇಲುಸ್ತುವಾರಿಗಳಿರುವ ಸೂಕ್ತ ಯೋಜನೆ ರೂಪಿಸುವ ಮೂಲಕ ಅಂಚಿನಲ್ಲಿರುವ ಸಮುದಾಯಕ್ಕೆ ಸೇರಿದ ಜನರಲ್ಲಿ ಸ್ವಯಂ ಉದ್ಯೋಗದ ಅವಕಾಶಗಳಿಗೆ ತೆರೆದುಕೊಳ್ಳುವಂತೆ ಮಾಡಬಹುದು.

ಸ್ವಂತ ಉದ್ಯಮ ಆರಂಭಿಸುವುದಕ್ಕೆ ಹಿಂದೇಟು ಹಾಕಲು ಹಣಕಾಸಿನ ಕೊರತೆ, ಕೇಡಿನ ಭಯ ಮತ್ತು ಕ್ರಿಯಾತ್ಮಕ ಸಾಕ್ಷರತೆಗಳು ಕಾರಣ. ಅದರ ಜೊತೆಯಲ್ಲಿಯೇ, ಕಚ್ಚಾವಸ್ತುಗಳ ಪೂರೈಕೆಗೆ ಸಂಬಂಧಿಸಿದಂತೆ ಇರುವ ನಿರ್ಬಂಧ, ಅಗತ್ಯವಿರುವಷ್ಟು ಪ್ರಮಾಣದ ಬಂಡವಾಳದ ಕೊರತೆ, ಮಾರುಕಟ್ಟೆಯ ಮೂಲಸೌಕರ್ಯಗಳ ಗೈರುಹಾಜರಿ ಇತ್ಯಾದಿಗಳು ಗ್ರಾಮೀಣ ಉದ್ಯಮ ಆರಂಭಿಸಲು ಇರುವ ಪ್ರಾಥಮಿಕ ಅಡ್ಡಿಗಳು ಎಂಬ ಅಂಶವನ್ನು ಅಧ್ಯಯನಗಳು ಸೂಚಿಸಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ, ಶಿಕ್ಷಣ ಇಲ್ಲದ ಕಾರಣ ಗ್ರಾಮೀಣ ಉದ್ಯಮಿಗಳು ಯೋಗ್ಯತೆ ಮತ್ತು ಸಾಮರ್ಥ್ಯದ ಕೊರತೆ ಅನುಭವಿಸುತ್ತಾರೆ. ತಿಳಿವಳಿಕೆಯ ಕೊರತೆಯಿಂದಾಗಿ ಅವರಿಗೆ ತಮಗೆ ದೊರೆಯುವ ಹಲವು ಸೌಲಭ್ಯಗಳ ಅರಿವೂ ಇರುವುದಿಲ್ಲ (ಸಕ್ಸೇನಾ, 2012, ಪು.24). ಆದುದರಿಂದ ಅವರು ಸ್ವಯಂ ಉದ್ಯೋಗದ ವಹಿವಾಟಿನಿಂದ ದೂರ ಉಳಿದು ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಾರೆ. ಗ್ರಾಮೀಣ ಉದ್ಯಮಕ್ಕೆ ಅಡ್ಡಿಯಾಗಿರುವ ಈ ಹಿಂದೆ ವಿವರಿಸಲಾದ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು, ಗ್ರಾಮೀಣ ವ್ಯವಸ್ಥೆಗೆ ಹೊಂದಿಕೊಳ್ಳುವಂತಹ ಉದ್ಯಮಗಳ ಬಗ್ಗೆ ಚಿಂತನೆ ನಡೆಸುವುದು ಮಹತ್ವದ್ದು.

ಆಯಾ ಪ್ರದೇಶದ ಅಗತ್ಯಗಳಿಗೆ ಅನುಗುಣವಾಗಿ ಸೂಕ್ತವಾದ ಉದ್ಯಮಶೀಲತಾಭಿವೃದ್ಧಿ ಯೋಜನೆಗಳನ್ನು ರೂಪಿಸುವುದಕ್ಕೆ ಅಗತ್ಯವಿರುವ ನೀತಿಗಳನ್ನು ರೂಪಿಸುವುದಕ್ಕಾಗಿ ಆಂತರಿಕ ಮಾರುಕಟ್ಟೆ ಮತ್ತು ಅವುಗಳ ಪರಸ್ಪರ ಅವಲಂಬಿನೆಯನ್ನು ಅರಿತಿರಬೇಕಾದ ಅಗತ್ಯವಿದೆ.

ಭಾರತದಲ್ಲಿ 1990ರ ಆರ್ಥಿಕ ಸುಧಾರಣೆಯ ಪರಿಣಾಮವಾಗಿ ಪರಿಶಿಷ್ಟರು ಉದ್ಯಮಿಗಳಾಗುವ ಪ್ರಮಾಣ ವಿರಳವಾಗಿದೆ. ಆದರೆ ಖಾಸಗಿ ಉದ್ಯಮಗಳಲ್ಲಿನ ಮಾಲಿಕತ್ವದ ಪ್ರಾತಿನಿಧ್ಯ ಮತ್ತು ಉದ್ಯೋಗ ಸೃಷ್ಟಿಯ ಪ್ರಮಾಣವು ಪರಿಶಿಷ್ಟ ಜಾತಿಯ ಸಮುದಾಯಗಳಲ್ಲಿ ಅತೀ ಕಡಿಮೆ (ಅಯ್ಯರ್, ಖನ್ನಾ ಮತ್ತು ವರ್ಷ್ನೇ, 2011).

ಪರಿಶಿಷ್ಟ ಜಾತಿಯ ಮಾಲಿಕತ್ವದ ಉದ್ಯಮದಲ್ಲಿ ಕಡಿಮೆ ಪ್ರಮಾಣದ ಉದ್ಯೋಗಿಗಳು ಭಾಗವಹಿಸುವುದರಿಂದ, ಪರಿಶಿಷ್ಟ ಜಾತಿಯ ಮಾಲಿಕರು ವಾಣಿಜ್ಯೋದ್ಯಮದ ಅಡೆತಡೆಗಳನ್ನು ಮೀರುವುದು ಸಾಧ್ಯವಾಗಿಲ್ಲ. ಆದರೆ. ಹಿಂದುಳಿದ ವರ್ಗಕ್ಕೆ ಸೇರಿದ ಮಾಲಿಕರಿಗೆ ಈ ಅಡ್ಡಿಗಳನ್ನು ಮೀರುವುದು ಸಾಧ್ಯವಾಗಿದೆ. ಅದಕ್ಕಿಂತ ಹೆಚ್ಚಾಗಿ, ಪರಿಶಿಷ್ಟ ಜಾತಿಗೆ ಸೇರಿದವರು ತಮ್ಮ ಉದ್ಯಮವನ್ನು ವಿಸ್ತರಿಸುವುದಕ್ಕೆ ಅಗತ್ಯವಿರುವ ಸ್ಪರ್ಧಾತ್ಮಕತೆಯ ಕೊರತೆ ಮತ್ತು ವಾಣಿಜ್ಯ ವಹಿವಾಟು ವಲಯದಲ್ಲಿ ಎದುರಿಸುತ್ತಿರುವ ಭೇದಭಾವಗಳೂ ಪ್ರಮುಖ ಕಾರಣ.

ಭಾರತೀಯ ಪರಿಶಿಷ್ಟ ವಾಣಿಜ್ಯೋದ್ಯಮ ಮಂಡಳಿಯು ಅಂಚಿನಲ್ಲಿರುವ ಸಮುದಾಯದ ಯುವಕರ ಸಬಲೀಕರಣಕ್ಕಾಗಿ ಹಲವು ಮೆಚ್ಚಬಹುದಾದ ಕ್ರಮಗಳನ್ನು ಕೈಗೊಂಡಿದೆ. ಈ ಹಿಂದೆ ವಿವರಿಸಲಾದ ಸವಾಲುಗಳನ್ನು ನಿಭಾಯಿಸುವುದಕ್ಕಾಗಿ ಸರ್ಕಾರವು ಕೆಳಕಂಡ ನೀತಿಗಳನ್ನು ರೂಪಿಸದೆ.

ಸ್ಟಾರ್ಟ್ ಆಫ್ ಇಂಡಿಯಾ ಕ್ರಿಯಾಯೋಜನೆಯ ಭಾಗವಾಗಿ ಭಾರತ ಸರ್ಕಾರವು ಮುಂಬರುವ ನಾಲ್ಕು ವರ್ಷಗಳಲ್ಲಿ ಸ್ಟಾರ್ಟ್‌ಅಪ್ ಆರಂಭಿಸುವ ಕಂಪೆನಿಯಗಳಿಗೆ ನೆರವು ಒದಗಿಸುವುದಕ್ಕಾಗಿ 10,000 ಕೋಟಿ ರೂಪಾಯಿಗಳ ಮೂಲಧನದೊಂದಿಗೆ ಸ್ಟಾರ್ಟ್ ಅಪ್‌ಗಾಗಿ ನಿಧಿಯ ನಿಧಿಯನ್ನು (ಎಫ್. ಎಫ್. ಎಸ್.) ವ್ಯವಸ್ಥೆ ಮಾಡಿದೆ. ಈ ನಿಧಿಯು ಹೊಸದಾಗಿ ಆರಂಭವಾಗುವ ಉದ್ಯಮಗಳಿಗೆ ಜೀವಸೆಲೆಯಾಗಿ ಪರಿಣಮಿಸಲಿದೆ. ಈ ಹಣವನ್ನು ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ (ಎಸ್‌ಐಡಿಬಿಐ) ಮೂಲಕ ವಿತರಿಸಲಾಗುತ್ತದೆ. ಈ ವರೆಗೆ ಎಫ್‌ಎಫ್‌ಎಸ್‌ಗಾಗಿ ಒಟ್ಟು 600 ಕೋಟಿ ರೂಪಾಯಿಗಳನ್ನು ಎಸ್‌ಐಡಿಬಿಐಗೆ ಬಿಡುಗಡೆ ಮಾಡಲಾಗಿದೆ ಎಂದು ವರದಿ ತಿಳಿಸುತ್ತದೆ. ಈ ಮಧ್ಯೆ 605.7 ಕೋಟಿ ರೂಪಾಯಿಗಳನ್ನು ನೀಡಲು ಎಸ್‌ಐಡಿಬಿಐ ಒಪ್ಪಿಕೊಂಡಿದೆ, 90.62 ಕೋಟಿ ರೂಪಾಯಿಗಳನ್ನು 17 ಪರ್ಯಾಯ ಹೂಡಿಕೆ ನಿಧಿ (ಎಐಎಫ್) ಗಳಿಗೆ ವಿತರಿಸಲಾಗಿದೆ. 337.02 ಕೋಟಿ ರೂಪಾಯಿಗಳ ವರೆಗಿರುವ ಆ ಹೂಡಿಕೆಯನ್ನು ಸರಿಸುಮಾರು 75 ಸ್ಟಾರ್ಟ್‌ಅಪ್ ಗಳಿಗೆ ತಲುಪುವಂತೆ ಮಾಡಲಾಗಿದೆ. ಅದಕ್ಕಿಂತ ಹೆಚ್ಚಾಗಿ, ಒಟ್ಟು 74 ಸ್ಟಾರ್ಟ್‌ಅಪ್ ಗಳಿಗೆ ಆದಾಯ ತೆರಿಗೆ ಕಾಯ್ದೆ ಯ ಸೆಕ್ಷನ್ 80 ಐಎಸಿ ಅಡಿಯಲ್ಲಿ ತೆರಿಗೆ ವಿನಾಯತಿ ನೀಡಲಾಗಿದೆ. ಈ ಸೌಲಭ್ಯಗಳು ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಗೆ ಉತ್ತಮ ನೆರವು ನೀಡಬಹುದು ಮತ್ತು ದೇಶದಾದ್ಯಂತ ಉದ್ಯಮವು ತಲೆ ಎತ್ತಲು ಕಾರಣವಾಗಬಹುದು. ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯು ಇನ್ನೂ ಚಲನಶೀಲತೆಯನ್ನು ಪಡೆಯಬೇಕಿದೆ. ಅದು ಮಹತ್ವಾಕಾಂಕ್ಷೆ ಹೊಂದಿದ ಉದ್ಯಮಶೀಲರು ಮತ್ತು ಯುವಕರನ್ನು ಸಶಕ್ತಗೊಳಿಸಲು ಯಾವ ರೀತಿಯ ಪರಿಣಾಮ ಬೀರಲಿದೆ ಎಂಬುದನ್ನು ಕಾದುನೋಡಬೇಕು. ಎರಡು ವರ್ಷಗಳ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅವಧಿಯಲ್ಲಿ ಎಫ್‌ಎಫ್ ಎಸ್ ನಿಂದ ಬಳಸಲಾದ ಮೊತ್ತ ತುಂಬಾ ಕಡಿಮೆ ಪ್ರಮಾಣದಲ್ಲಿದೆ. ಆಕಾಂಕ್ಷಿಗಳಿಗೆ ಕಲಿಯುವ ಸಂಪನ್ಮೂಲ ಮತ್ತು ಮಾಹಿತಿ ಒದಗಿಸುವ ಉದ್ದೇಶದಿಂದ ವರ್ಚ್ಯುವಲ್ ಸ್ಟಾರ್ಟ್‌ಅಪ್ ಇಂಡಿಯಾ ಹಬ್ ಆರಂಭಿಸಲಾಗಿದೆ. ಇದುವರೆಗೆ ಸ್ಟಾರ್ಟ್‌ಅಪ್ ಇಂಡಿಯಾ ಹಬ್ ನಿಂದ 75,643 ಪ್ರಶ್ನೆಗಳಿಗೆ ಮಾಹಿತಿ ಒದಗಿಸಲಾಗಿದೆ. ಹಬ್ ಗೆ 15000 ನೊಂದಾಯಿತ ಸದಸ್ಯರಿದ್ದಾರೆ ಎಂದು ಪೋರ್ಟಲ್ ಹೇಳಿಕೊಂಡಿದೆ. ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆಯ ಅಡಿಯಲ್ಲಿ ಕಲಿಕೆ ಮತ್ತು ಅಭಿವೃದ್ಧಿ ಘಟಕವನ್ನು ರೂಪಿಸಲಾಗಿದೆ. ಇದುವರೆಗೆ 1,89,000 ಜನರು ಇದರ ಉಪಯೋಗ ಪಡೆದುಕೊಂಡಿದ್ದಾರೆ. ಸಂಬಂಧಿಸಿದ ಸರ್ಕಾರಿ ಇಲಾಖೆಗಳು ಉದ್ಯಮಶೀಲತೆಯ ವಾತಾವರಣ ರೂಪಿಸುವುದಕ್ಕಾಗಿ ಹಲವು ಸಂಯೋಜಿತ ವಿಧಾಯಕ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಅಂಶವನ್ನು ಇಲ್ಲಿ ಸೇರಿಸಬಹುದು.

ವಾಸ್ತವವಾಗಿ ಬೇರುಮಟ್ಟದಲ್ಲಿ ಆರ್ಥಿಕ ಸಬಲೀಕರಣ ಮತ್ತು ಉದ್ಯೋಗ ಸೃಷ್ಟಿಯ ಕಾರಣಕ್ಕಾಗಿ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆರಂಭಿಸಲಾಗಿದೆ. ಈ ವರೆಗೆ ಯೋಜನೆಗೆ ನೆರವು ಕೋರಿ 60,795 ಅರ್ಜಿಗಳು ಸಲ್ಲಿಕೆಯಾಗಿವೆ ಮತ್ತು ಸುಮಾರು 13,237 ಕೋಟಿ ರೂಪಾಯಿ ಹಣವನ್ನು ಮಂಜೂರು ಮಾಡಲಾಗಿದೆ. ದೇಶದ 103 ಬ್ಯಾಂಕುಗಳ 133236 ಶಾಖೆಗಳು ಸ್ಟ್ಯಾಂಡ್ ಇಂಡಿಯಾ ವೆಬ್ ಪೋರ್ಟಲ್ ನಲ್ಲಿ ಕಿಯಾಶೀಲವಾಗಿವೆ. ಮುದ್ರಾ ಯೋಜನೆ (ಪ್ರಧಾನ ಮಂತ್ರಿ ಮುದ್ರಾ ಯೋಜನೆ, ಪಿಎಂಎಂವೈ) : ಸ್ಟ್ಯಾಂಡ್ ಅಪ್ ಇಂಡಿಯಾ ಉಪಕ್ರಮದ ಅಡಿಯಲ್ಲಿ ಯೋಜನೆಯ ಗುರಿ ತುಲುಪಲು ಜಾರಿಗೆ ತರುವ ಹಣಕಾಸು ಸಂಸ್ಥೆಯಾಗಿ ಸಣ್ಣ ಘಟಕಗಳ ಅಭಿವೃದ್ಧಿ ಮತ್ತು ಮರುಹಣ ನೀಡಿಕೆ ಸಂಸ್ಥೆ (ಮುದ್ರಾ) ಯು ಕಾರ್ಯ ನಿರ್ವಹಿಸುತ್ತದೆ. ದೇಶದಲ್ಲಿ ಸಣ್ಣ–ಘಟಕಗಳಿಗೆ ಸಣ್ಣಪ್ರಮಾಣದ ಸಾಲ ಒದಗಿಸಲು ಹಣಕಾಸು ಸಂಸ್ಥೆಗಳಿಗೆ ಮುದ್ರಾ ಆರ್ಥಿಕ ನೆರವು ನೀಡುತ್ತದೆ. ಸಣ್ಣಘಟಕಗಳು ಸುಸ್ತಿದಾರರಾದಲ್ಲಿ ಮಧ್ಯವರ್ತಿ ಬ್ಯಾಂಕುಗಳಿಗೆ (ಎನ್ ಬಿಎಫ್ ಸಿ, ಎಂಎಸ್ಐ ಮತ್ತು ಇತರ ಎಫ್‌ಐಗಳು) ಹಣ ನೀಡುವ ಉದ್ದೇಶದಿಂದ ಸಣ್ಣ ಘಟಕಗಳಿಗೆ ಸಾಲಖಾತ್ರಿ ನಿಧಿಯನ್ನು ಆರಂಭಿಸಲಾಗಿದೆ. ಸಣ್ಣ ಸಾಲಗಳನ್ನು ಸಂಸ್ಥೆಯ ಬೆಳವಣಿಗೆ ಹಂತ ಮತ್ತು ಅದರ ಅಗತ್ಯಕ್ಕೆ ಅನುಗುಣವಾಗಿ ವರ್ಗೀಕರಿಸಿ ಅವಕ್ಕೆ 'ಶಿಶು', 'ಕಿಶೋರ' ಮತ್ತು 'ತರುಣ' ಎಂದು ಹೆಸರಿಡಲಾಗಿದೆ. ಪಿಎಂಎಂವೈ ಯೋಜನೆಯ ಅಡಿಯಲ್ಲಿ 6 ಲಕ್ಷ ಕೋಟಿ ರೂಪಾಯಿಗಳನ್ನು 12 ಕೋಟಿ ಫಲಾನುಭವಿಗಳಿಗೆ ನೀಡಲಾಗಿದೆ. ಶೇ. 28 ರಷ್ಟು (3.25 ಕೋಟಿ) ಜನ ಮೊದಲ ಬಾರಿಗೆ ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸಿದವರಾಗಿದ್ದಾರೆ. ಸಾಲ ಪಡೆದವರ ಪೈಕಿ ಶೇ 74ರಷ್ಟು ಜನ (9 ಕೋಟಿ) ಮಹಿಳೆಯರು ಮತ್ತು ಶೇ. 55ರಷ್ಟು ಜನ ಪರಿಶಿಷ್ಟ ಜಾತಿ ಮತ್ತು ಜನಾಂಗ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರು ಎಂಬುದು ಉಲ್ಲೇಖಾರ್ಹ ಅಂಶ. ಮೂರು ವರ್ಷದ ಅವಧಿಯಲ್ಲಿ, ಈ ಯೋಜನೆಯು ಸಮಾಜದ ತಳಹಂತದಲ್ಲಿ ಇರುವವರನ್ನು ಸಬಲೀಕರಣ ಮಾಡುವ ಪ್ರಯತ್ನ ಮಾಡಿದೆ. ಆದರೆ, ಇನ್ನೂ ಮತ್ತಷ್ಟು ಬೇಡಿಕೆಗಳನ್ನು ಪೂರೈಸಬೇಕಿದೆ. ಮುದ್ರಾ ಬೆಂಬಲಿತ ಸಂಸ್ಥೆಗಳಿಗೆ ಅನುಸರಣಾ ವ್ಯವಸ್ಥೆ ಮತ್ತು ಉದ್ಯಮಶೀಲತಾ ಮಾರ್ಗದರ್ಶನಗಳು ದೊರೆಯುವುದರಿಂದ ಸರ್ಕಾರಕ್ಕೆ ವ್ಯಾಪಕ ಪ್ರಮಾಣದ ಉದ್ಯೋಗ ಸೃಷ್ಟಿಸುವುದು ಸಾಧ್ಯವಾಗಲಿದೆ. ಅದು ನೆರವು ಪಡೆದ ಸಂಸ್ಥೆಗಳು ಸುಸ್ಥಿರವಾಗಿ ಪ್ರಗತಿಯ ಪಥದಲ್ಲಿ ಮುನ್ನಡೆದರೆ ಅದು ಸಾಧ್ಯವಾಗಬಹುದು.

ಗ್ರಾಮೀಣ ಪ್ರದೇಶದಲ್ಲಿ ಇರುವ ಯುವಕರು ಸ್ವಯಂಉದ್ಯೋಗ ಅವಕಾಶ ಹೆಚ್ಚಿಸುವುದಕ್ಕಾಗಿ ಸರ್ಕಾರದಿಂದ ಆರ್ಥಿಕ ನೆರವು ಒದಗಿಸುವ ಸ್ಟಾರ್ಟ್‌ಅಪ್ ಗ್ರಾಮ ಉದ್ಯಮಶೀಲತಾ ಯೋಜನೆ (ಎಸ್‌ವಿಇಪಿ) ಯನ್ನು 2015–16 ನೇ ಸಾಲಿನ ಆಯವ್ಯಯ ಪತ್ರದಲ್ಲಿ ಪ್ರಕಟಿಸಲಾಗಿತ್ತು. ಸಣ್ಣ ಪ್ರಮಾಣದ ಸಾಲಗಳು ಮತ್ತು ಮಾರ್ಗದರ್ಶನದ ಬೆಂಬಲದ ಮೂಲಕ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವ ಮುಖ್ಯ ಉದ್ದೇಶದಿಂದ ಎಸ್ ವಿಇಪಿ ರೂಪಿಸಲಾಗಿತ್ತು. ಈ ಯೋಜನೆಯು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಗ್ರಾಮೀಣ ಜೀವನಾವಶ್ಯಕ ಮಿಷನ್‌ನ ಉಪಯೋಜನೆಯಾಗಿತ್ತು. ಅದರ ಸದ್ಯದ ಹಂತದಲ್ಲಿ, ಯೋಜನೆಯು ರೂಪುಗೊಂಡ ನಂತರದ ನಾಲ್ಕು ವರ್ಷಗಳ ಅವಧಿಯಲ್ಲಿ (2015–2019) ಎಸ್ ವಿಇಪಿಯು ಕ್ರಿಯಾಶೀಲವಾಗಿ ಕಾರ್ಯಾರಂಭ ಮಾಡಿದೆ.

ದೇಶದ 24 ರಾಜ್ಯಗಳ 125 ಬ್ಲಾಕ್‌ಗಳ ಸರಿಸುಮಾರು 1.82 ಲಕ್ಷ ಗ್ರಾಮಗಳಲ್ಲಿ ಉದ್ದಿಮೆಗಳ ಸೃಷ್ಟಿ ಮತ್ತು ಬಲವರ್ಧನೆಗೆ ಕಾರಣವಾಗಿದೆ. ಅದರಿಂದಾಗಿ ಸರಿಸುಮಾರು 3.78 ಲಕ್ಷ ಜನರಿಗೆ ಉದ್ಯೋಗಾವಕಾಶ ದೊರೆತಿದೆ. ಈ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಉದ್ಯಮ ಶೀಲತೆಯ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಆರಂಭಿಸಲಾಗಿತ್ತು. ಈ ಯೋಜನೆಯು ಜಾರಿಯಿಂದ ಪ್ರತಿ ಪ್ರದೇಶದಲ್ಲಿಯೂ ವಾಣಿಜ್ಯೋದ್ಯಮದ ಪ್ರಗತಿಯಾಗಿ ಗ್ರಾಮೀಣ ಪ್ರದೇಶದಲ್ಲಿ ಸುಸ್ಥಿರ ಸಂಸ್ಥೆಗಳನ್ನು ಸೃಷ್ಟಿಸಲು ಸಾಧ್ಯವಾಗಲಿದೆ.

## ಸಮಾರೋಪ

ನಮ್ಮ ದೇಶದಲ್ಲಿ (ವಿಶೇಷವಾಗಿ ತಾರತಮ್ಯಕ್ಕೆ ಒಳಗಾದ ಒಳಗುಂಪಿಗೆ ಸೇರಿದವರು, ಉದಾ : ಅವಕಾಶ ವಂಚಿತ ವಿಶೇಷಚೇತನ ಮಹಿಳೆಯರು) ಅಂಚಿನಲ್ಲಿರುವ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ಸಮೂಹಗಳಲ್ಲಿ ಉದ್ಯಮಶೀಲತೆಯನ್ನು ಬೆಳೆಸುವ ನಿಟ್ಟಿನಲ್ಲಿ ಪ್ರಯತ್ನಿಸಿದರೆ ಅವರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಲವು ನೆಲೆಯಲ್ಲಿ ಪ್ರಗತಿ ಸಾಧಿಸಲು ಸಾಧ್ಯ ಎಂಬುದನ್ನು ಗುರುತಿಸಬಹುದು. ಇದನ್ನು ತಾರತಮ್ಯ ಮತ್ತು ಸಾಮಾಜಿಕ ಅಸ್ವಸ್ಥತೆಯನ್ನು ಎದುರಿಸಲು ದೃಢ ಪ್ರಯತ್ನವಾಗಿ ಬಳಸಿಕೊಳ್ಳಬಹುದು.

ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳನ್ನು ಸ್ಪರ್ಧಿಸುವ ಸಾಮರ್ಥ್ಯದ ಉದ್ಯಮಿಗಳನ್ನಾಗಿ ರೂಪಿಸುವುದಕ್ಕಾಗಿ ನಿಯಮಿತವಾಗಿ ಉದ್ಯಮಶೀಲತಾ ಅಭಿವೃದ್ಧಿ ಕ್ರಮಗಳು, ಆಗಾಗ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ಒದಗಿಸುವುದರೊಂದಿಗೆ ಕಿರುಉದ್ಯಮಗಳ ಅಭಿವೃದ್ಧಿಗೆ ಸಣ್ಣ ಪ್ರಮಾಣದ ಸಾಲ ಮತ್ತು ಸ್ವಸಹಾಯ ಗುಂಪುಗಳಿಗೆ ನೆರವು ಒದಗಿಸುವ ಸಮಗ್ರ ನೀತಿಯನ್ನು ಅಳವಡಿಸಿಕೊಂಡರೆ ಅವರು ದೇಶದ ಆರ್ಥಿಕತೆಯ ಮಹತ್ವಾಕಾಂಕ್ಷೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ನೆರವಾಗಬಲ್ಲರು.

ಅದಕ್ಕಿಂತ ಹೆಚ್ಚಾಗಿ, ಕೆಲಸವು ಬದುಕುವ ಕೌಶಲ್ಯವನ್ನು ಹೆಚ್ಚಿಸುತ್ತದೆ ಮತ್ತು ಉದ್ಯಮಶೀಲತಾ ಪ್ರೇರಣೆಯೊಂದಿಗೆ ಒದಗಿಸುವ ಉದ್ಯೋಗವು ಎರಡು ಉದ್ದೇಶಗಳನ್ನು ಈಡೇರಿಸುತ್ತದೆ. ಒಂದೆಡೆ ಉದ್ಯೋಗಾವಕಾಶಗಳ ಸೃಷ್ಟಿಯಾದರೆ ಮತ್ತೊಂಡೆದೆ ಬಳಸಲಾಗದೇ ಉಳಿದ ಸಂಪನ್ಮೂಲ ಮತ್ತು ಅವಕಾಶಗಳನ್ನು ಉಪಯೋಗಿಸಿದಂತಾಗುತ್ತದೆ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಮೈಸೂರು ಸಂಸ್ಥಾನದಲ್ಲಿ ಬ್ರಾಹ್ಮಣೇತರ ಚಳವಳಿ : ಬ್ರಾಹ್ಮಣೇತರರ ಏಳಿಗೆ ಮತ್ತು ಬಿಕ್ಕಟ್ಟು

✍ ಡಾ. ಕೆ. ಗುರುಸ್ವಾಮಿ, ಸಮಾಜ-ವಿಜ್ಞಾನ ಶಿಕ್ಷಕರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊಳೆನರಸೀಪುರ, ಹಾಸನ.

**ಭಾ**ರತವು ಶ್ರೇಣೀಕೃತ ಜಾತಿ ವ್ಯವಸ್ಥೆಯ ತವರೂರು. ಇಲ್ಲಿ ಸಿಂಧೂ ಬಯಲಿನ ನಾಗರಿಕತೆಯ ಜಾತಿರಹಿತ ಮಾನವೀಯ ಸಮಸಮಾಜದ ಜನಸಂಸ್ಕೃತಿ ಅಸ್ತಿತ್ವದಲ್ಲಿತ್ತು. ಆದರೆ ವೈದಿಕಶಾಹಿಗಳ ಅಟ್ಟಹಾಸದಿಂದ ಹರಪ್ಪ ಸಂಸ್ಕೃತಿ ಅಂತ್ಯವಾಗಿ ಜಾತಿ ಸಹಿತ ಅಸಮಾನತೆಯ ಸಮಾಜ ಬಲವಾಗಿ ಅಂಕುರಿಸಿತು. ಇವರು ಸಮಾಜವನ್ನು ಚಾತುರ್ವರ್ಣಾಧರಿತ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರವರ್ಗಗಳೆಂದು ವಿಭಾಗಿಸಿ, ಇವುಗಳಲ್ಲಿ 'ಬ್ರಾಹ್ಮಣ ವರ್ಗವೇ ಶ್ರೇಷ್ಠ' ಎಂದು ತಮ್ಮ ಸವರ್ಣೀಯತ್ವವನ್ನು ಪ್ರತಿಪಾದಿಸಿದರು. ಜೊತೆಗೆ ರಾಜಮಹಾರಾಜರುಗಳನ್ನು ತಮ್ಮ ತತ್ವಸಿದ್ಧಾಂತಗಳು, ಯಜ್ಞಯಾಗಾದಿಗಳು, ಮಂತ್ರ ಶ್ಲೋಕಗಳ ಮೂಲಕ ಓಲೈಸಿಕೊಂಡು ಅವರುಗಳ ಆಸ್ಥಾನಗಳಲ್ಲಿ ಸಿಗುವ ಎಲ್ಲಾ ರೀತಿಯ ಉನ್ನತ ಅಧಿಕಾರದ ಪದವಿಗಳನ್ನು ಗಳಿಸಿಕೊಂಡರು. ಮಾತ್ರವಲ್ಲದೆ ತಮ್ಮ ಈ ರೀತಿಯ ಸ್ಥಾನಮಾನಗಳಿಗೆ ಸಮಾನವಾಗಿ ಯಾರೂ ಬಾರದಂತೆ ತಡೆಯುವ ತಂತ್ರಗಳನ್ನು ಎಣೆದು, ಶೂದ್ರಾತಿ ಶೂದ್ರರುಗಳಿಂದ ಸಮಾಜದಲ್ಲಿ ಸ್ವತಂತ್ರವಾಗಿ ಬದುಕುವ ಹಕ್ಕನ್ನೇ ಕಿತ್ತುಕೊಂಡರು. 'ಜಾತೀಯತೆ'ಯ ಹೆಸರಿನಲ್ಲಿ ಸವರ್ಣೀಯರ ಈ ರೀತಿಯ ದುರಾಭ್ಯಾಸ ಮತ್ತು ದುರ್ವರ್ತನೆಗಳು ದೇಶದ ಮೂಲೆಮೂಲೆಗಳಿಗೂ ವ್ಯಾಪಿಸಿತ್ತು. ಕ್ರಮೇಣ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಕರುಗಳ ಸಮಾಜೋ-ಧಾರ್ಮಿಕ ಚಳವಳಿಯ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು 'ತತ್ವ ಸಿದ್ಧಾಂತಗಳ ತಿರುಳನ್ನು ಅರಿತ ಶೂದ್ರಾತಿಶೂದ್ರರು ಜಾತಿವಾದಿ ಬ್ರಾಹ್ಮಣಶಾಹಿಗಳ ವಿರುದ್ಧ ದೇಶದೆಲ್ಲೆಡೆ ಚಳವಳಿಗಳನ್ನು ಪ್ರಾರಂಭಿಸಿದರು. ಆ ಚಳವಳಿಯೇ ಪ್ರಖ್ಯಾತ 'ಬ್ರಾಹ್ಮಣೇತರ ಚಳವಳಿ'. ಈ ಚಳವಳಿಯ ರಭಸವಾದ ಅಲೆಗಳು ದೇಶದಾದ್ಯಂತ ಪಸರಿಸಿದಂತೆ ಮೈಸೂರು ಸಂಸ್ಥಾನವನ್ನು ವ್ಯಾಪಿಸಿದ್ದವು. ಈ ಸಂದರ್ಭದಲ್ಲಿ ಮೈಸೂರು ರಾಜಪ್ರಭುತ್ವವು ಚಳವಳಿಯ ತೀವ್ರತೆಯನ್ನು ಶಮನಗೊಳಿಸಿ ಬ್ರಾಹ್ಮಣೇತರರ ಬೇಡಿಕೆಗಳನ್ನು ತಮ್ಮ ರಾಜತಾಂತ್ರಿಕತೆ ನೈಪುಣ್ಯತೆಯಿಂದ ಈಡೇರಿಸಿದ ರೀತಿ ನಿಜಕ್ಕೂ ಚಿರಸ್ಮರಣೀಯವಾಗಿದೆ. ಹೀಗಾಗಿ ಈ ಲೇಖನದಲ್ಲಿ ಮೊದಲಿಗೆ'ಬ್ರಾಹ್ಮಣೇತರರು ಎಂದರೆ ಯಾರು?', 'ಬ್ರಾಹ್ಮಣೇತರ ಚಳವಳಿಯ ಐತಿಹಾಸಿಕ ಹಿನ್ನೆಲೆ', 'ಮೈಸೂರು ಸಂಸ್ಥಾನದ ಆಡಳಿತದ ಉನ್ನತಾಧಿಕಾರಗಳಲ್ಲಿ ಬ್ರಾಹ್ಮಣವರ್ಗಗಳ ಪ್ರಾಬಲ್ಯ', 'ಮೈಸೂರು ಸಂಸ್ಥಾನದಲ್ಲಿ ಪ್ರಜಾಮಿತ್ರ ಮಂಡಳಿಯ ಸ್ಥಾಪನೆ-ಬ್ರಾಹ್ಮಣೇತರ ಚಳವಳಿಯ ತೀವ್ರತೆ', 'ಸರ್. ಲೆಸ್ಲೀ ಮಿಲ್ಲರ್ ಸಮಿತಿಯ ರಚನೆ ಹಾಗೂ ಇದರ ಶಿಫಾರಸ್ಸುಗಳು', 'ಮೈಸೂರು ಸಂಸ್ಥಾನದ ಬ್ರಾಹ್ಮಣೇತರ ದಿವಾನರಾಗಿ ಎಂ. ಕಾಂತರಾಜ ಅರಸು-ಬ್ರಾಹ್ಮಣೇತರರ ಏಳಿಗೆ' ಹಾಗೂ'ಬ್ರಾಹ್ಮಣೇತರರ ನಡುವೆ ಆಂತರಿಕ ಬಿಕ್ಕಟ್ಟು-ಹಾದಿ ತಪ್ಪಿದ ಚಳವಳಿ' ಈ ವಿಷಯಗಳ ಆಧಾರದ ಮೇಲೆ ಸವಿವರಗಳನ್ನು ಪ್ರಸ್ತುತಪಡಿಸಲು ಇಚ್ಛಿಸಿದ್ದೇನೆ.

## ಬ್ರಾಹ್ಮಣೇತರರು ಎಂದರೆ ಯಾರು ?

'ಬ್ರಾಹ್ಮಣ ವರ್ಗಗಳನ್ನು ಹೊರತುಪಡಿಸಿ ಅಸ್ಪೃಶ್ಯರನ್ನು ಒಳಗೊಂಡು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಸಾಂಸ್ಕೃತಿಕ ವ್ಯವಸ್ಥೆಗಳಲ್ಲಿ ಮೇಲ್ವರ್ಗಗಳಿಂದ ಸಂಪೂರ್ಣವಾಗಿ ನಿರಾಕರಣೆಗೆ ಒಳಗಾಗಿರುವ ಹಿಂದುಳಿದಿರುವ ಎಲ್ಲಾ ಜಾತಿಗಳು' ಎಂದು ಹೇಳಬಹುದು. ಇನ್ನೊಂದು ಅರ್ಥದಲ್ಲಿ ಬ್ರಾಹ್ಮಣೇತರರೆಂದರೆ ಹಿಂದುಳಿದ ವರ್ಗಗಳೇ ಆಗಿವೆ.

ಬಿಜಾರ್ನ್ ಹೆಟ್ನೆಯರವರು ಇಂತಹ ವರ್ಗಗಳನ್ನು ಅಬ್ರಾಹ್ಮಣರು, ಬ್ರಾಹ್ಮಣೇತರರು, ಶೂದ್ರರು, ಶುದ್ಧ ಹಿಂದೂ ಜಾತಿಗಳು, ಅಶುದ್ಧ ಹಿಂದೂ ಜಾತಿಗಳು(ಹರಿಜನರು), ಹಿಂದೂಯೇತರರು ಎಂದು ತಮ್ಮ 'ದಿ ಪೊಲಿಟಿಕಲ್ ಎಕಾನೊಮಿ ಇನ್‌ಡೈರೆಕ್ಟ್ ರೂಲ್ ಮೈಸೂರು 1881-1947' ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ. ಇಂತಹ ಜಾತಿಸಮೂಹಗಳನ್ನು ಬೆಸ್ತರು, ಗೊಲ್ಲರು, ವಡ್ಡರು, ಬಣಜಿಗರು, ಬಂಜಾರರು, ಪಾಂಚಾಲರು (ವಿಶ್ವಕರ್ಮರು), ಉಪ್ಪಾರರು, ಒಕ್ಕಲಿಗರು, ನೊಣಂಬರು, ರೆಡ್ಡಿಗಳು ಅಥವಾ ಕಾಪು (ಕೋಲಾರ), ಕುಂಚಿಟಿಗಾರರು (ತುಮಕೂರು), ಈಡಿಗರು (ಶಿವಮೊಗ್ಗ), ಲಿಂಗಾಯತರು ಅಥವಾ ವೀರಶೈವರು, ಕುರುಬರು, ಮುಸ್ಲೀಮರು, ಕ್ರಿಶ್ಚಿಯನ್ನರು, ಹೊಲೆಯ, ಮಾದಿಗ, ಪಂಚಮರು, ಭೋವಿಗಳು ಮುಂತಾದ ವರ್ಗಗಳು ಈ ಮೇಲ್ಕಾಣಿಸಿದ ಜಾತಿಗಳ ಸಾಲಿನಲ್ಲಿ ಬರುತ್ತವೆ. ಒಟ್ಟಾರೆಯಾಗಿ ಇಂತಹ ಜಾತಿಗಳ ಸಮೂಹವನ್ನು 'ಬ್ರಾಹ್ಮಣೇತರರು', 'ಹಿಂದುಳಿದ ಜಾತಿಗಳು', 'ಹಿಂದುಳಿದ ವರ್ಗಗಳು', 'ನಿಮ್ನವರ್ಗಗಳು', 'ಶೋಷಿತ ವರ್ಗಗಳು'ಎಂದು ಹೇಳಬಹುದು.

ಹೀಗಾಗಿಯೇ ಬಿ. ಆರ್. ಅಂಬೇಡ್ಕರ್‌ರವರು 'ಹಿಂದುಳಿದ ವರ್ಗಗಳೆಂದರೆ ಅವರು ಬೇರಾರೂ ಅಲ್ಲ. ಅವರೊಂದು ಅನೇಕ ಜಾತಿಗಳ ಸಮೂಹ' ಎಂದೇಳಿರುವುದು ಮೇಲೆ ತಿಳಿಸಿರುವ ಜಾತಿಗಳ ಹೆಸರುಗಳಿಗೆ ಪುಷ್ಠಿ ನೀಡುತ್ತದೆ. ಆದುದರಿಂದ ಪ್ರಾಚೀನ ವೈದಿಕ ಹಾಗೂ ಉತ್ತರವೈದಿಕ ಕಾಲಗಳಿಂದಲೂ ಶ್ರೇಣೀಕೃತ ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣವರ್ಗಗಳು ಮೇಲ್ವರ್ಗದ ಸ್ಥಾನಮಾನವನ್ನು ಗಿಟ್ಟಿಸಿಕೊಂಡಿದ್ದವು. ಇವರುಇಡೀ ಭಾರತವನ್ನು ಆಳಿದ ರಾಜಪ್ರಭುತ್ವಗಳಿಂದ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಹಾಗೂ ಆಡಳಿತಾತ್ಮಕವಾಗಿ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಮಾತ್ರವಲ್ಲದೆ ಇಂತಹ ಹುದ್ದೆಗಳು ತಮ್ಮನ್ನು ಹೊರತುಪಡಿಸಿ ಇನ್ನಿತರ ವರ್ಗಗಳಿಗೆ ದಕ್ಕದಂತೆ ಕಬಳಿಸುವಲ್ಲಿ ಯಶಸ್ವಿಯಾಗಿದ್ದರು. ಇವರ ಈ ಗೋಮುಖ ವ್ಯಾಘ್ರತನದ ಕುತಂತ್ರಗಳ ವಿರುದ್ಧ ಅತೃಪ್ತಗೊಂಡ ಸಮುದಾಯಗಳು ಇಡೀ ದೇಶದಾದ್ಯಂತ ಆಂದೋಲನವನ್ನೇ ಆರಂಭಿಸಿದರು. ಇದೇ ಪ್ರಖ್ಯಾತ 'ಬ್ರಾಹ್ಮಣೇತರ ಚಳವಳಿ'.

## ಬ್ರಾಹ್ಮಣೇತರ ಚಳವಳಿಯ ಐತಿಹಾಸಿಕ ಹಿನ್ನಲೆ

ದೇಶದಾದ್ಯಂತ ಪ್ರಾರಂಭವಾದ ಈ ಚಳವಳಿಯನ್ನು ಬ್ರಾಹ್ಮಣೇತರ ಚಳವಳಿ, ಬ್ರಾಹ್ಮಣ ವಿರೋಧಿ ಚಳವಳಿ, ಅಬ್ರಾಹ್ಮಣ ಚಳವಳಿ, ಆರ್ಯೇತರ ಚಳವಳಿ, ಹಿಂದುಳಿದ ವರ್ಗಗಳ ಚಳವಳಿ, ಶೋಷಿತರ ಚಳವಳಿ, ಶೂದ್ರರ ಚಳವಳಿ, ದಲಿತ ಚಳವಳಿ ಎಂದು ವಿವಿಧ ಹೆಸರುಗಳಿಂದ ಕರೆಯಲಾಗಿದೆ. ಈ ಚಳವಳಿಯು ಭಾರತದಲ್ಲಿ ಮೊಟ್ಟಮೊದಲಿಗೆ ಆರಂಭಗೊಂಡಿದ್ದು ದಖನ್ ಪ್ರದೇಶದ ಪಶ್ಚಿಮಘಟ್ಟ ಮತ್ತು ಮಲಬಾರ್ ಕರಾವಳಿತೀರ ಪ್ರದೇಶಗಳು ಹಾಗೂ ಪೂರ್ವಘಟ್ಟ ಮತ್ತು ಕೋರಮಂಡಲ ಕರಾವಳಿತೀರ ಪ್ರದೇಶಗಳ ನಡುವೆ ವಿಸ್ತರಿಸಿದ್ದ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತಮಿಳುನಾಡು, ತೆಲಂಗಾಣ, ಕೇರಳ, ಮೈಸೂರು ರಾಜ್ಯಗಳಲ್ಲಿ ಎನ್ನಬಹುದು. ಇವುಗಳನ್ನು ಇನ್ನೊಂದು ಹೆಸರಿನಲ್ಲಿ 'ದಕ್ಷಿಣ ಭಾರತದ ರಾಜ್ಯಗಳು' ಎಂದು ಗುರುತಿಸಲಾಗಿದೆ. ಇವುಗಳಲ್ಲಿ ಮಹಾರಾಷ್ಟ್ರವು 'ಬ್ರಾಹ್ಮಣೇತರ ಚಳವಳಿ'ಯ ವಿಕಾಸದ ತವರೂರಾಗಿದೆ.

19ನೇ ಶತಮಾನದ ಪೂರ್ವಾರ್ಧದಲ್ಲಿ ಮಹಾರಾಷ್ಟ್ರದ ಪೂನಾ ಪ್ರಾಂತ್ಯದಲ್ಲಿ ಜ್ಯೋತಿ ಬಾಫುಲೆ(1827–1890)ಯವರಿಂದ ದೇಶದಲ್ಲಿ ಪ್ರಪ್ರಥಮ ಬಾರಿಗೆ ಮನುವಾದಿ ಬ್ರಾಹ್ಮಣ ವಿರೋಧಿ 'ಬ್ರಾಹ್ಮಣೇತರ ಚಳವಳಿ' ಪ್ರಾರಂಭವಾಯಿತು. ಇವರನ್ನು 'ಬ್ರಾಹ್ಮಣೇತರ ಚಳವಳಿಯ ನಿರ್ಮಾತೃ' ಎಂತಲೇ ಕರೆಯಬಹುದು. ಫುಲೆಯವರು ಮಾನವ ಸಮಾಜದಲ್ಲಿ ಬ್ರಾಹ್ಮಣಶಾಹಿಗಳು ಸನಾತನ ಸಂಪ್ರದಾಯಬದ್ಧ ಜಾತೀಯತೆಯ ಶೋಷಣೆ, ಅಸ್ಪೃಶ್ಯತಾಚರಣೆಯ ದೌರ್ಜನ್ಯ, ವಂಚನೆ, ದಬ್ಬಾಳಿಕೆಗಳನ್ನು ಸ್ವತಃ ಅನುಭವಿಸಿ, ತಮ್ಮ ಕಣ್ಣಾರೆ ಕಂಡಿದ್ದರು. ಇದಕ್ಕೆ ಸ್ಪಷ್ಟ ನಿದರ್ಶನವೆಂದರೆ ಇವರಿಗೆ ತನ್ನ ಬ್ರಾಹ್ಮಣ ವರ್ಗದ ಸ್ನೇಹಿತನ ಮದುವೆ ಕಾರ್ಯಕ್ರಮದಲ್ಲಿ ಸವರ್ಣೀಯ ಬ್ರಾಹ್ಮಣರಿಂದಾದ 'ಶೂದ್ರ ನಿಂದನೆ'ಯ ಅವಮಾನ ಹಾಗೂ ಅಸ್ಪೃಶ್ಯ ಜನಾಂಗದವರ ಮೇಲಾಗುತ್ತಿದ್ದ ಅವಮಾನವೀಯವಾದ ಅನಿಷ್ಟ ದೌರ್ಜನ್ಯಾಚರಣೆಗಳು.[7]ಇದರಿಂದ ಚಿಂತಾಕ್ರಾಂತರಾದ ಸುಶಿಕ್ಷಿತ ಫುಲೆಯವರು ಈ ಶೋಷಿತ ಶೂದ್ರಾತಿಶೂದ್ರ ಸಮುದಾಯಗಳನ್ನು ಶೈಕ್ಷಣಿಕವಾಗಿ ಬೆಳೆಸಿ, ಅವರಲ್ಲಿ ಬ್ರಾಹ್ಮಣರ ಸ್ವೇಚ್ಛಾಚಾರದ ನೀತಿ ನಿಯಮಗಳನ್ನು ಪ್ರಶ್ನಿಸುವ ಹಾಗೂ ಹೋರಾಡುವ ಎದೆಗಾರಿಕೆಯನ್ನು ತುಂಬಬೇಕೆಂದು ತೀರ್ಮಾನಿಸಿದರು. ಇದಕ್ಕಾಗಿಯೇ 'ಸತ್ಯಶೋಧಕ ಸಮಾಜ' (1873) ಸಂಘಟನೆಯನ್ನು ಸ್ಥಾಪಿಸುವುದರ ಮೂಲಕ ಈ ಚಳವಳಿಯನ್ನು ಪ್ರಾರಂಭಿಸಿದರು. ಹೀಗೆ ಫುಲೆಯವರ ಹೋರಾಟದ ಪ್ರಭಾವ ಬಾಂಬೆ ಪ್ರಾಂತ್ಯದ ಮಹಾರಾಷ್ಟ್ರ, ಪೂನಾ, ನಾಗ್ಪುರ, ಮದ್ರಾಸ್ ಪ್ರಾಂತ್ಯದ ತಮಿಳುನಾಡು, ಹೈದರಾಬಾದ್ ಪ್ರಾಂತ್ಯದ ಆಂಧ್ರಪ್ರದೇಶ ಮುಂತಾದ ಸ್ಥಳಗಳಿಗೆ ಹರಡಿದ್ದರಿಂದ ಈ ಚಳವಳಿಯು ತೀವ್ರ ಸ್ವರೂಪವನ್ನು ಪಡೆಯಿತು. ಹಾಗೆಯೇ ಮೈಸೂರು ಪ್ರಾಂತ್ಯದಲ್ಲೂ ಕೂಡ ಶೋಷಿತರಿಗೆ ಶೈಕ್ಷಣಿಕ ಅವಕಾಶಗಳನ್ನು ವಂಚಿಸಿ, ಜಾತೀಯತೆಯ ಆರಾಧಕರು ಮತ್ತು ಪಾಲಕರಾಗಿ ಸಂಸ್ಥಾನದ ಆಡಳಿತದಲ್ಲಿ ಉನ್ನತ ಹುದ್ದೆಗಳಲ್ಲಿ ಏಕಸ್ವಾಮ್ಯ ಸಾಧಿಸಿದ್ದ ಬ್ರಾಹ್ಮಣಶಾಹಿಗಳ ವಿರುದ್ಧ ಹಿಂದುಳಿದವರ್ಗಗಳ ಶೂದ್ರನಾಯಕರು ಬ್ರಾಹ್ಮಣೇತರ ಚಳವಳಿಯನ್ನು ಕ್ಷಿಪ್ರಗತಿಯಲ್ಲಿ ಚಾಲನೆಗೊಳಿಸಿದರು.

## ಮೈಸೂರು ಸಂಸ್ಥಾನದ ಆಡಳಿತದ ಉನ್ನತಾಧಿಕಾರಗಳಲ್ಲಿ ಬ್ರಾಹ್ಮಣ ವರ್ಗಗಳ ಪ್ರಾಬಲ್ಯ

ಮೈಸೂರು ಸಂಸ್ಥಾನದ ಅರಸು ಸಂತತಿಯು ಕರ್ನಾಟಕದ ಇತಿಹಾಸದಲ್ಲಿ 'ಮರೆಯಲಾಗದ ಸಾಮ್ರಾಜ್ಯ'ವಾಗಿ ಶಾಶ್ವತ ಅಸ್ಮಿತೆಯನ್ನು ಗಳಿಸಿಕೊಂಡಿರುವ ವಿಜಯನಗರ ಸಾಮ್ರಾಜ್ಯದ 'ಅಮರನಾಯಕ ವ್ಯವಸ್ಥೆ'ಯಲ್ಲಿ ಜನ್ಮ ತಾಳಿತು. ವಿಜಯನಗರದ ಅರಸರು 1565ರಲ್ಲಿ ಬಹುಮನಿ ಸುಲ್ತಾನರ ವಿರುದ್ಧದ 'ತಾಳಿಕೋಟೆ ಕದನ'ದಲ್ಲಿ ತಮ್ಮ ಅಧಿಪತ್ಯವನ್ನು ಕಾಪಾಡಿಕೊಳ್ಳಲು ಎಡವಿ ಅವಮಾನಕರವಾಗಿ ಸೋಲನ್ನು ಅನುಭವಿಸಿತು. ಇದರ ಸೋಲಿನ ಪರಿಣಾಮವೆಂಬಂತೆ ಮೈಸೂರು ಒಡೆಯರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ಮೈಸೂರು ಪ್ರಾಂತ್ಯವನ್ನು ತಮ್ಮ ಆಡಳಿತದ ಕೇಂದ್ರ ಸ್ಥಾನವನ್ನಾಗಿಸಿಕೊಂಡು ರಾಜ್ಯಭಾರವನ್ನು ಪ್ರಾರಂಭಿಸಿದರು. ತದನಂತರ ಮೈಸೂರು ಬ್ರಿಟಿಷರ ಪ್ರಬಲ ಆಡಳಿತದ ಕಪಿಮುಷ್ಠಿಗೆ ಸಿಲುಕಿ 1831 ರಿಂದ 1881ರ ಅವಧಿಯ ಕಮಿಷನ್ನರುಗಳ ಆಳ್ವಿಕೆಯಲ್ಲಿ ತನ್ನ ಭೌಗೋಳಿಕ ಪ್ರದೇಶಗಳ ಅಸ್ತಿತ್ವಕ್ಕೆ ಆಧುನಿಕತೆಯ ಸ್ಪಷ್ಟ ರೂಪವನ್ನು ಪಡೆಯಿತು. ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನವು ಆಡಳಿತದ ಅನುಕೂಲಕ್ಕಾಗಿ ಜಿಲ್ಲೆ, ತಾಲ್ಲೂಕು, ಪಟ್ಟಣ, ಜಾಗೀರುಗಳಾಗಿ ವಿಭಾಗವಾಗಿ ಬ್ರಿಟಿಷರಿಂದ ಒಡೆಯರಿಗೆ ಪುನರ್ದಾನವಾಯಿತು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನ 8 ಜಿಲ್ಲೆಗಳನ್ನು ಹೊಂದಿತ್ತು. ಅವುಗಳೆಂದರೆ –

1. ಮೈಸೂರು 2. ಬೆಂಗಳೂರು 3. ಕೋಲಾರ
4. ತುಮಕೂರು 5. ಹಾಸನ 6. ಚಿತ್ರದುರ್ಗ
7. ಶಿವಮೊಗ್ಗ 8. ಚಿಕ್ಕಮಗಳೂರು (ಕಡೂರು) ಪ್ರಮುಖವಾದವುಗಳಾಗಿದ್ದವು.

ಇಂತಹ ಸಂದರ್ಭದಲ್ಲಿ ಮೈಸೂರಿನ ಮಹಾರಾಜರುಗಳಿಗೆ ಬ್ರಿಟಿಷ್ ಸರ್ಕಾರಕ್ಕೆ ಒಪ್ಪಿಗೆಯಾಗುವಂತೆ ಸಂಸ್ಥಾನದ ಬಹುತೇಕ ಆಡಳಿತ ಕ್ಷೇತ್ರಗಳನ್ನು ಬಹಳ ಅಚ್ಚುಕಟ್ಟಾಗಿ ನಿಭಾಯಿಸಿ ರಾಜ್ಯದ ಬೊಕ್ಕಸವನ್ನು ವೃದ್ಧಿಸುವ ಅನಿವಾರ್ಯತೆ ಎದುರಾಗಿತ್ತು.ಹೀಗಾಗಿ ಬ್ರಿಟಿಷರ ಆಡಳಿತದ ಆದೇಶದಂತೆ ಒಡೆಯರುಗಳು ಸಂಸ್ಥಾನದ ಪರೋಕ್ಷ ಆಡಳಿತದ ನಿರ್ವಹಣೆಯ ಅತ್ಯುನ್ನತ ಅಧಿಕಾರದ ಹೊಣೆಯನ್ನು ಇಂಗ್ಲಿಷ್ ಶಿಕ್ಷಣದಲ್ಲಿ ಅದ್ಭುತ ಪಾಂಡಿತ್ಯವನ್ನು ಪಡೆದು, ಸ್ಥಳೀಯ ಭಾಷೆಗಳಲ್ಲೂ ವಾಗ್ಮಿಗಳಾಗಿದ್ದ ಬ್ರಾಹ್ಮಣ ವರ್ಗಗಳಿಗೆ ನೀಡಿದರು. ಈ ಜವಾಬ್ದಾರಿಯುತ ಸ್ಥಾನವೇ ಮಹಾಗೌರವಕ್ಕೆ ಪಾತ್ರವಾದ 'ದಿವಾನ ಪದವಿ'ಯಾಗಿತ್ತು. ಮೈಸೂರು ಸಂಸ್ಥಾನದಲ್ಲಿ ದಿವಾನ ಪದವಿಯ ಗದ್ದುಗೆಯನ್ನು ಅಲಂಕರಿಸಿದ ಬಹುತೇಕ ಮಂದಿ ಬ್ರಾಹ್ಮಣಶಾಹಿಗಳು ಬ್ರಿಟಿಷರ ನಿರೀಕ್ಷೆಯಂತೆ ಇಂಗ್ಲಿಷ್ ಶಿಕ್ಷಣದಲ್ಲಿ ಮಹಾನ್ ಪರಿಣತಿಯನ್ನು ಹೊಂದಿದ್ದರು. ಮಾತ್ರವಲ್ಲದೆ ಆಯ್ಕೆಯಾದ ದಿವಾನರು ತಮ್ಮ ಪದವಿಗೆ ಚ್ಯುತಿ ಬಾರದಂತೆ ರಾಜ್ಯದ ಆಡಳಿತ ನಿರ್ವಹಣೆ, ಆರ್ಥಿಕಾಭಿವೃದ್ಧಿಯ ತೀವ್ರತೆ, ಹಣಕಾಸು ನೀತಿಗಳ ಕಾರ್ಯಗತಗೊಳಿಸುವಿಕೆ, ಹಣಕಾಸಿನ ಉಳಿತಾಯದಲ್ಲಿನ ಕಾರ್ಯನಿಪುಣತೆ, ಸಾರ್ವಜನಿಕ ಲೋಕೋಪಯೋಗಿ ಕೆಲಸಕಾರ್ಯಗಳು, ಸಂಸ್ಥಾನದ ಪ್ರಧಾನ ಆದಾಯದ ಮೂಲವಾಗಿದ್ದ ಕೃಷಿ ಕ್ಷೇತ್ರದ ವಾಣಿಜ್ಯೀಕರಣ, ಶೈಕ್ಷಣಿಕ ಪ್ರಗತಿ ಹಾಗೂ ರೈಲ್ವೆ ಸಾರಿಗೆ ಸಂಪರ್ಕಗಳನ್ನು ಯಶಸ್ಸಿನೋಪಾದಿಯಲ್ಲಿ ಸಾಗುವಂತೆ ಮಾಡಿದ್ದರು. ಜೊತೆಗೆ ಈ ಸಾಧನೆಯ ಮೂಲಕ ಇವರು ಬ್ರಿಟಿಷರು ಹಾಗೂ ಮೈಸೂರು ಒಡೆಯರುಗಳ ಜೊತೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಇವರುಗಳು ಸ್ಥಳೀಯ ಮೈಸೂರು ಹಾಗೂ ಮದ್ರಾಸ್ ಪ್ರದೇಶಗಳಿಂದ ಆಯ್ಕೆಯಾದ ಬ್ರಾಹ್ಮಣತ್ವ ಪ್ರತಿಪಾದಕ ದಿವಾನರುಗಳಾಗಿದ್ದರು. ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ಅವಧಿಯಲ್ಲಿ ಬಹಳ ಯಶಸ್ವಿ ದಿವಾನರಾಗಿ(1782–1812)ಪೂರ್ಣಯ್ಯರವರು ಗುರುತಿಸಿ ಕೊಂಡಿದ್ದರು. ಇವರ ನಂತರ ಮೈಸೂರಿನ ಹೆಬ್ಬಾರ್ ಅಯ್ಯಂಗಾರ್ ಕುಟುಂಬದ ಕೆಲವು ಸದಸ್ಯರು ಕೂಡ ಸಂಸ್ಥಾನದ ಆಡಳಿತದ ಭೂಮಿಕೆಯಲ್ಲಿ ಉನ್ನತಾಧಿಕಾರ ವನ್ನು ಗಳಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ್ದರು. ಕಾಲಕ್ರಮೇಣ ಬ್ರಿಟಿಷ್ ರೆಸಿಡೆಂಟರುಗಳು ಸಂಸ್ಕೃತ ಭಾಷೆಯಲ್ಲಿ ಹಿಡಿತ ಹೊಂದಿದ್ದ ಸಂಪ್ರದಾಯವಾದಿ ಬ್ರಾಹ್ಮಣವರ್ಗದ ಅಧಿಕಾರಿಗಳನ್ನು ನಿಯಂತ್ರಿಸಿ ಮದ್ರಾಸ್‌ನ ಇಂಗ್ಲಿಷ್ ಭಾಷೆಯಲ್ಲಿ ನುರಿತ ತಜ್ಞರಾಗಿ 'ಸಿವಿಲ್ ಸರ್ವಿಸ್ ಪರೀಕ್ಷೆ'ಗಳನ್ನು ಬೌದ್ಧಿಕ ಪಾಂಡಿತ್ಯದಿಂದ ಪಾಸು ಮಾಡಿದ್ದ ಬ್ರಾಹ್ಮಣ ವರ್ಗಗಳನ್ನು ಉನ್ನತ ಹುದ್ದೆಗಳ ನಿರ್ವಹಣೆಗೆ ಕರೆಸಿಕೊಂಡರು. ಹೀಗಾಗಿ 1881 ರಿಂದ 1947ರ ಅವಧಿಯಲ್ಲಿ ಒಡೆಯರ ಆಡಳಿತದಲ್ಲಿ ಆಯ್ಕೆಯಾದ ಬಹುತೇಕ ದಿವಾನರುಗಳು ಮದ್ರಾಸಿನ ಬ್ರಾಹ್ಮಣರಾಗಿದ್ದರು. ಅವರಲ್ಲಿ ಸಿ. ವಿ. ರಂಗಾಚಾರ್ಲು, ಸರ್. ಕೆ. ಶೇಷಾದ್ರಿ ಅಯ್ಯರ್‌ರವರು 10ನೇ ಚಾಮರಾಜ ಒಡೆಯರ ಕಾಲದಲ್ಲಿ ದಿವಾನರಾಗಿದ್ದರೆ, ಪಿ.ಎನ್. ಕೃಷ್ಣಮೂರ್ತಿ, ವಿ.ಪಿ. ಮಾಧವರಾವ್, ಟಿ. ಆನಂದರಾವ್, ಸರ್. ಎಂ. ವಿಶ್ವೇಶ್ವರಯ್ಯ (ಮೈಸೂರು ಸಂಸ್ಥಾನ ಬ್ರಾಹ್ಮಣರು), ಸರ್. ಆಲ್ಬಿಯನ್ ಬ್ಯಾನರ್ಜಿ (ಬಂಗಾಳಿ ಬ್ರಾಹ್ಮಣರು)ರವರು ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ದಿವಾನರಾಗಿದ್ದರು. ನಂತರದಲ್ಲಿ ಮೈಸೂರು ಸಂಸ್ಥಾನದ ಕೊನೆಯ ಅಂದರೆ 25ನೇ ಮಹಾರಾಜರಾದ ಜಯಚಾಮರಾಜ ಒಡೆಯರ್ ಕಾಲದಲ್ಲಿ ಎನ್. ಮಾದವರಾವ್, ಸರ್ ಆರ್ಕಾಟ್ ರಾಮಸ್ವಾಮಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮೊದಲಿಯಾರ್ ಮುಂತಾದವರು ದಿವಾನರಾಗಿ ಕಾರ್ಯನಿರ್ವಹಿಸಿದ್ದರು. ಹೀಗೆ ಇವರುಗಳು ತಮ್ಮ ಪ್ರಭಾವಿ ಇಂಗ್ಲಿಷ್ ಶಿಕ್ಷಣದ ಪ್ರತಿಭೆಯಿಂದ ಸಂಸ್ಥಾನದ ಬಹುಪಾಲು ಅಂದರೆ ಶೇ. 70.5% ರಷ್ಟು ಉನ್ನತ ಅಧಿಕಾರಿ ಮತ್ತು ಶೇ. 69% ರಷ್ಟು ಗುಮಾಸ್ತರ ಹುದ್ದೆಗಳಲ್ಲಿ ಏಕಸ್ವಾಮ್ಯವನ್ನು ಸ್ಥಾಪಿಸಿ ಸಾಮಾನ್ಯ ಹಾಗೂ ಕೆಳವರ್ಗಗಳನ್ನು ಕೆಲವೇ ಕೆಲವು ಬೆರಳೆಣಿಕೆಯ ಉದ್ಯೋಗಗಳಿಗೆ ಸೀಮಿತಗೊಳಿಸಿದ್ದರು.

ಇದರಿಂದ ಬಹಳ ಕುಪಿತಗೊಂಡ ಪ್ರಜ್ಞಾವಂತ ಹಿಂದುಳಿದ ವರ್ಗಗಳ ಸದಸ್ಯರು 'ಮೈಸೂರು ಸಂಸ್ಥಾನದ 'ನಿಜವಾದ ಮಣ್ಣಿನ ಮಕ್ಕಳು' ನಾವಾಗಿದ್ದೇವೆ. ಆದರೆ ನಮಗೆ ಧಕ್ಕಬೇಕಾದ ಉನ್ನತ ಹುದ್ದೆಗಳು, ಮೂಲಭೂತ ಸೌಲಭ್ಯ, ಸವಲತ್ತುಗಳನ್ನು ವಿದೇಶಿ ಬ್ರಾಹ್ಮಣವರ್ಗಗಳು ಕಬಳಿಸುತ್ತಿದ್ದಾರೆ. ಹೀಗಾಗಿ ಈ ವರ್ಗದ ಪಾರಮ್ಯವನ್ನು ಸಂಸ್ಥಾನದಿಂದ ಮೂಲೋತ್ಪಾಟನೆ ಮಾಡಿ ಇಲ್ಲಿನ ಮೂಲನಿವಾಸಿಗಳಾದ ನಾವುಗಳು ಅವಕಾಶಗಳನ್ನು ಪಡೆದುಕೊಳ್ಳಬೇಕೆಂದು ಬ್ರಾಹ್ಮಣ ವಿರೋಧಿ 'ಬ್ರಾಹ್ಮಣೇತರ ಚಳವಳಿ'ಯನ್ನು ಪ್ರಾರಂಭಿಸಿದರು. ಇವರು 'ಪ್ರಜಾಮಿತ್ರ ಮಂಡಳಿ'ಯನ್ನು ಸ್ಥಾಪಿಸಿ ಸಂಘಟನಾತ್ಮಕ ರೂಪವನ್ನು ಕೊಟ್ಟು ಚಳವಳಿಯನ್ನು ಮೈಸೂರು ಸಂಸ್ಥಾನದಾದ್ಯಂತ ತೀವ್ರಗೊಳಿಸಿದರು.

## ಮೈಸೂರು ಸಂಸ್ಥಾನದಲ್ಲಿ ಪ್ರಜಾಮಿತ್ರ ಮಂಡಳಿಯ ಸ್ಥಾಪನೆ ಬ್ರಾಹ್ಮಣೇತರ ಚಳವಳಿಯ ತೀವ್ರತೆ

ಮೈಸೂರಿಗರಾದ ರಾವ್ ಸಾಹೇಬ್ ಹೆಚ್. ಚೆನ್ನಯ್ಯ, ಎಂ. ಬಸವಯ್ಯ, ಅಬ್ಬಾಸ್ ಖಾನ್ ಹಾಗೂ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಕಟ್ಟಮಂಚಿ ರಾಮಲಿಂಗರೆಡ್ಡಿ (ಸಿ.ಆರ್.ರೆಡ್ಡಿ) ಎಲ್ಲರೂ ಜೊತೆಗೂಡಿ 1917ರಲ್ಲಿ ಮೈಸೂರಿನ ಪ್ರಪ್ರಥಮ ಬ್ರಾಹ್ಮಣೇತರ ಸಂಘಟನೆ 'ಪ್ರಜಾಮಿತ್ರ ಮಂಡಳಿ'ಯನ್ನು ಸ್ಥಾಪಿಸಿದರು. ಮೈಸೂರಿನಲ್ಲಿ ಇದರ ಸ್ಥಾಪನೆಯ ಹಿಂದೆ ತಮಿಳುನಾಡಿನ ಮದ್ರಾಸ್‌ನಲ್ಲಿ 1916ರಲ್ಲಿ ಚಾಲನೆಗೆ ಬಂದ 'ಜಸ್ಟೀಸ್ ಪಾರ್ಟಿ' ಎಂಬ ಬ್ರಾಹ್ಮಣೇತರ ಸಂಘಟನೆಯ ಪ್ರೇರಣೆ ಪ್ರಬಲವಾಗಿತ್ತು. ಏಕೆಂದರೆ ಈ ಜಸ್ಟೀಸ್ ಪಾರ್ಟಿಯು ಥಿಯೋಸೋಫಿಕಲ್ ಸೊಸೈಟಿಯ ಅನಿಬೆಸೆಂಟ್ ಹಾಗೂ ಬಾಲಗಂಗಾಧರ ತಿಲಕರ ನೇತೃತ್ವದಲ್ಲಿ ಇಡೀ ಭಾರತದಾದ್ಯಂತ ನಡೆಯುತ್ತಿದ್ದ ಹೋಂ ರೂಲ್ ಲೀಗ್ ಚಳವಳಿಯಲ್ಲಿ ಕೆಳವರ್ಗಗಳನ್ನು ಹೊರತುಪಡಿಸಿ ಬ್ರಾಹ್ಮಣರೇ ಅಧಿಕವಾಗಿದ್ದನ್ನು ಗಮನಿಸಿತು. ಈ ಬ್ರಾಹ್ಮಣವರ್ಗಗಳು ಲೀಗಿನ ಮೂಲಕ ಗುರುತಿಸಿಕೊಂಡು ಮದ್ರಾಸ್‌ನ ಆಡಳಿತ ವಿಭಾಗದ ಎಲ್ಲಾ ರೀತಿಯ ಉನ್ನತ ಹುದ್ದೆಗಳನ್ನು ತಮ್ಮ ಇಂಗ್ಲಿಷ್ ವಿದ್ವತ್ತಿನಿಂದ ಗಿಟ್ಟಿಸಿಕೊಳ್ಳುತ್ತಿದ್ದರು. ಇದರಿಂದ ಹಿಂದುಳಿದ ಶೂದ್ರ ವರ್ಗಗಳಿಗೆ ಅನ್ಯಾಯವಾಗುತ್ತಿತ್ತು. ಇದನ್ನು ಮನಗಂಡ ಮದ್ರಾಸಿನ ತ್ಯಾಗರಾಜ ಚೆಟ್ಟಿ, ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಹಾಗೂ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರು ಈ ಜಸ್ಟೀಸ್ ಪಾರ್ಟಿಯನ್ನು ಸ್ಥಾಪಿಸಿದರು.

1917ರಲ್ಲಿ ಜಸ್ಟೀಸ್ ಪಾರ್ಟಿಯ ಸಮ್ಮೇಳನ ಮೈಸೂರಿನಲ್ಲಿ ಏರ್ಪಾಡಾಗಿತ್ತು. ಈ ಸಮ್ಮೇಳನದಲ್ಲಿ ಉಪಸ್ಥಿತರಿದ್ದ ಬ್ರಾಹ್ಮಣೇತರ ಗಣ್ಯರು ಸರ್ಕಾರಿ ಹುದ್ದೆಗಳಲ್ಲಿ ಬ್ರಾಹ್ಮಣಶಾಹಿಗಳ ಮೇಲುಗೈ ಸಾಧಿಸಿರುವುದನ್ನು ಕುರಿತು ಮಾತನಾಡುತ್ತಾ 'ಸರ್ಕಾರಿ ನೌಕರಿಯಲ್ಲಿ ಯಾವುದೇ ಒಂದು ಜಾತಿಗೆ ಹೆಚ್ಚು ಅವಕಾಶ, ಪ್ರಾತಿನಿಧ್ಯಗಳು ಲಭಿಸುವುದಾದರೆ ಆ ಜಾತಿಗೆ ಅನುಚಿತ ಪ್ರಾಮುಖ್ಯ ಮತ್ತು ಪ್ರಭಾವಗಳು ದೊರೆಯುತ್ತವೆ. ಇದರರ್ಥ ಸರ್ಕಾರದ ನೌಕರಿಯನ್ನು ಪಡೆಯುವುದೆಂದರೆ ಅಧಿಕಾರ ಕೇಂದ್ರದಲ್ಲಿ ಸಮನಾಗಿ ಪಾಲು ಪಡೆಯುವುದು ಎಂಬುದಾಗಿದೆ' ಎಂದು ತಿಳಿಸಿದರು. ಹೀಗಾಗಿ ಈ ಕಾರ್ಯಕ್ರಮದ ಸಂಪೂರ್ಣವಾದ ವಿವರಗಳು ಜಸ್ಟೀಸ್ ಪಕ್ಷದ ಮುಖವಾಣಿಯಾಗಿ ಕಾರ್ಯನಿರ್ವಹಿಸುತ್ತಿದ್ದ 'ಜಸ್ಟೀಸ್' ಎಂಬ ವಾರ್ತಾ ಪತ್ರಿಕೆಯಲ್ಲಿ ಪ್ರಚಾರವಾಯಿತು. ಇದನ್ನು ಮೈಸೂರಿನ ಎಲ್ಲಾ ಅಬ್ರಾಹ್ಮಣ ಚಳವಳಿಯ ಪರ್ತಕರಿಗೆ ತಿಳಿಯಿತು. ಈ ಸಂದರ್ಭದಲ್ಲಿ ಪ್ರಜಾಮಿತ್ರ ಮಂಡಳಿಯ ಅಧ್ಯಕ್ಷರಾಗಿದ್ದ ರಾವ್ ಸಾಹೇಬ್ ಹೆಚ್. ಚೆನ್ನಯ್ಯರವರು 'ಜಸ್ಟೀಸ್ ಪಾರ್ಟಿಯ ಪ್ರಣಾಳಿಕೆ'ಯನ್ನು ತರಿಸಿಕೊಂಡು ಒಕ್ಕಲಿಗರು, ಲಿಂಗಾಯತರು, ಮುಸ್ಲೀಮರು, ಕ್ರಿಶ್ಚಿಯನ್ ಹಾಗೂ ಇನ್ನಿತರ ಬ್ರಾಹ್ಮಣೇತರ ಮತ್ತು ಹಿಂದೂಯೇತರರನ್ನು ಒಗ್ಗೂಡಿಸಿ ಪ್ರಜಾಮಿತ್ರ ಮಂಡಳಿಯ ಮೂಲಕ ಮೈಸೂರಿನಾದ್ಯಂತ ಬ್ರಾಹ್ಮಣೇತರ ಚಳವಳಿ ತೀವ್ರಗೊಳ್ಳುವಂತೆ ಮಾಡಿದರು. ಜೂನ್, 1918ರಲ್ಲಿ ಮಂಡಳಿಯು ಸದಸ್ಯರ ನಿಯೋಗದ ವತಿಯಿಂದ ತನ್ನದೇ ಆದ ಕೆಲವು ಬೇಡಿಕೆಗಳನ್ನು ಈಡೇರಿಸುವಂತೆ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಬಳಿ 'ಜ್ಞಾಪನಾ ಪತ್ರ'ದ ಮುಖೇನ ಕೇಳಿಕೊಂಡರು. ಆ ಬೇಡಿಕೆಗಳೆಂದರೆ,

1. ಬ್ರಾಹ್ಮಣ ವರ್ಗಗಳಂತೆ ನಮಗೂ ದರ್ಜೆ ಆಧಾರಿತ ಉನ್ನತ ಹುದ್ದೆಗಳ ಸರ್ಕಾರಿ ನೌಕರಿಯನ್ನು ನೀಡುವುದು.
2. ಬ್ರಾಹ್ಮಣ ವರ್ಗಗಳಂತೆ ಸಮಾನವಾದ ಶೈಕ್ಷಣಿಕ ಜ್ಞಾನಾರ್ಜನೆಗಾಗಿ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು.
3. ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಮೇಲು–ಕೀಳಿನ ಭಾವನೆ ಇಲ್ಲದಂತೆ ಮಾಡುವುದು.
4. ಬ್ರಾಹ್ಮಣೇತರರು ಶಾಲಾ ಕಾಲೇಜುಗಳಲ್ಲಿ ಕೊಡಬೇಕಿದ್ದ ಅಧಿಕ ಶುಲ್ಕವನ್ನು ಕಡಿತಗೊಳಿಸುವುದು.
5. ದಲಿತ, ಹಿಂದುಳಿದ ಗ್ರಾಮೀಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುವುದು ಇತ್ಯಾದಿ.

ಇವರ ಬೇಡಿಕೆಗಳ ಮನವಿ ಪತ್ರವನ್ನು ಅಂಗೀಕರಿಸಿದ ನಾಲ್ವಡಿ ಕೃಷ್ಣರಾಜ ಒಡೆಯರು ಎಲ್ಲರಿಗೂ ಸಾಕಷ್ಟು ಪ್ರಾತಿನಿಧ್ಯ ದೊರೆಯುವಂತೆ ಮಾಡಲು ಮುಂದಾದರು. ಇದಕ್ಕಾಗಿ ಬ್ರಾಹ್ಮಣೇತರರಿಗೆ ಆಗುತ್ತಿರುವ ಅನ್ಯಾಯ ಹಾಗೂ ಅಸಮತೋಲನವನ್ನು ಪರಿಶೀಲಿಸಿ ಸರಿಪಡಿಸುವ ಸಲುವಾಗಿ ಸಮಿತಿಯೊಂದನ್ನು ನೇಮಿಸಿದರು. ಅದೇ ಸುಪ್ರಸಿದ್ಧ ಜಸ್ಟೀಸ್ ಸರ್. ಲೆಸ್ಲೀ ಸಿ. ಮಿಲ್ಲರ್ ಸಮಿತಿ.

## ಸರ್. ಲೆಸ್ಲೀ ಸಿ. ಮಿಲ್ಲರ್ ಸಮಿತಿಯ ರಚನೆ ಹಾಗೂ ಇದರ ಶಿಫಾರಸ್ಸುಗಳು

ಜಸ್ಟೀಸ್ ಸರ್. ಲೆಸ್ಲೀ ಸಿ. ಮಿಲ್ಲರ್ ಸಮಿತಿಯು ಪ್ರಜಾಮಿತ್ರ ಮಂಡಳಿಯ ಪ್ರತಿನಿಧಿಗಳ ನಿಯೋಗ ನಾಲ್ವಡಿಯವರಿಗೆ 'ಜ್ಞಾಪನಾ ಪತ್ರ' ಸಲ್ಲಿಸಿದ ಎರಡೇ ತಿಂಗಳಿಗೆ ಅಂದರೆ ಆಗಸ್ಟ್, 1918ರಲ್ಲಿ ನಾಲ್ವಡಿಯರವರ ಆದೇಶದಂತೆ ನೇಮಕವಾಯಿತು. ಈ ಸಮಿತಿಯಲ್ಲಿ ಜಸ್ಟೀಸ್ ಸರ್. ಲೆಸ್ಲೀ ಸಿ. ಮಿಲ್ಲರ್ (ಮೈಸೂರು ಮುಖ್ಯ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು) ಮುಖ್ಯಸ್ಥರಾಗಿದ್ದರು. ಇದು 10 ಮಂದಿ ಸದಸ್ಯರನ್ನು ಹೊಂದಿದ್ದು ಇಬ್ಬರು ಬ್ರಾಹ್ಮಣರು, ನಾಲ್ವರು ಬ್ರಾಹ್ಮಣೇತರರು ಹಾಗೂ ಮತ್ತೆ ನಾಲ್ವರು ಪ್ರಮುಖ ಗಣ್ಯರು ನೇಮಕಗೊಂಡಿದ್ದರು. ಅವರಲ್ಲಿ ಸಿ. ಶ್ರೀಕಂಠೇಶ್ವರ ಅಯ್ಯರ್, ಎಂ. ಮುತ್ತಣ್ಣ, ಎಂ.ಸಿ. ರಂಗೈಯ್ಯಂಗಾರ್, ಎಂ. ಬಸವಯ್ಯ (ಲಿಂಗಾಯತ ಸಮುದಾಯದ ವಕೀಲರು), ರಾವ್ ಸಾಹೇಬ್ ಹೆಚ್. ಚೆನ್ನಯ್ಯ (ಪ್ರಜಾಮಿತ್ರ ಮಂಡಳಿಯ ಅಧ್ಯಕ್ಷರು, ಒಕ್ಕಲಿಗ ಸಮುದಾಯ) ಹಾಗೂ ನವಾಬ್ ಗುಲಾಮ್ ಅಹಮದ್ ಕಲಾಮಿ (ಹಿಂದೂಯೇತರ ಸಮುದಾಯ) ಪ್ರಮುಖರುಗಳಾಗಿದ್ದರು. ಹೀಗಾಗಿ ಈ ಸಮಿತಿಯು 1916ರಿಂದ1918ರವರೆಗೆ ಮೂರು ವರ್ಷಗಳ ಅಧ್ಯಯನ ಕೈಗೊಂಡು ಬ್ರಾಹ್ಮಣರು ಹಾಗೂ ಬ್ರಾಹ್ಮಣೇತರರುಗಳ ಸಮಾಜದ ಆಡಳಿತದಲ್ಲಿನ ಉನ್ನತ ಸ್ಥಾನಮಾನ ಹಾಗೂ ಸ್ಥಿತಿಗತಿಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಆಗಸ್ಟ್, 1919ರಲ್ಲಿ ಸರ್ಕಾರಕ್ಕೆ ವರದಿಯನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಲ್ಲಿಸಿತು. ಇದನ್ನು ಸರ್ಕಾರ 25 ಮೇ, 1921ರಲ್ಲಿ ಒಪ್ಪಿತು. ಇದರ ವರದಿಯಲ್ಲಿ ಬ್ರಾಹ್ಮಣೇತರರಿಗೆ ಮೀಸಲಾತಿಯನ್ನು ನೀಡುವುದರ ಮೂಲಕ ಸಾರ್ವಜನಿಕ ಸೇವೆಗಳು(10) ಮತ್ತು ಶೈಕ್ಷಣಿಕ ವಿಭಾಗಗಳಿಗೆ (19)ಸಂಬಂಧಿಸಿದಂತೆ ಒಟ್ಟು 29 ಶಿಫಾರಸ್ಸುಗಳನ್ನು ಮಾಡಲಾಗಿತ್ತು. ಇವುಗಳಲ್ಲಿ ಬಹುಮುಖ್ಯವಾದ 10 ಶಿಫಾರಸ್ಸುಗಳನ್ನು ಕೆಳಕಂಡಂತೆ ತಿಳಿಸಲಾಗಿದೆ.

1. ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದೆಲ್ಲಾ ಸಮುದಾಯಗಳು ಹಿಂದುಳಿದ ಜನಾಂಗದವರೆಂದು ಗುರುತಿಸಿತು (1911ರ ಜನಗಣತಿಯ ಪ್ರಕಾರ ಶೇ.5ಕ್ಕೂ ಕಡಿಮೆ ಸಾಕ್ಷರತೆ ಹೊಂದಿದ್ದ ಎಲ್ಲಾ ಜಾತಿಗಳು).
2. ಹಿಂದುಳಿದ ವರ್ಗಗಳಿಗೆ ಶಿಕ್ಷಣ ಒಳಗೊಂಡಂತೆ ಉದ್ಯೋಗಗಳಲ್ಲಿ ಮೀಸಲಾತಿಯನ್ನು ನೀಡುವುದು.
3. ರಾಜ್ಯದ ಜನಸಂಖ್ಯೆಯನ್ನು ಬ್ರಾಹ್ಮಣರು ಹಾಗೂ ಇತರರು ಎಂದು ವಿಭಾಗಿಸಿ ಎಲ್ಲಾ ಹಿಂದುಳಿದ ಜಾತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
4. ಸರ್ಕಾರದ 1/2 ಭಾಗದಷ್ಟು ಉನ್ನತ ದರ್ಜೆಯ ಹುದ್ದೆಗಳು, 2/3 ಭಾಗದಷ್ಟು ಕೆಳದರ್ಜೆಯ ಹುದ್ದೆಗಳನ್ನು 7 ವರ್ಷಗಳ ಅವಧಿಯವರೆಗೆ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಂದ ತುಂಬುವುದು.
5. ಇದು ಸಾಧ್ಯವಾಗುವಂತೆ ಮಾಡಲು ಆಡಳಿತದಲ್ಲಿ ಸೇವೆ ಸಲ್ಲಿಸಲು ಬಯಸುವ ಅಭ್ಯರ್ಥಿಗಳ ಗರಿಷ್ಠ ವಯೋಮಿತಿಯನ್ನು 25ರಿಂದ28 ವರ್ಷಗಳಿಗೆ ಹೆಚ್ಚಿಸುವುದು.
6. ಗ್ರಾಮೀಣ ಪ್ರದೇಶಗಳಲ್ಲಿ ಶಾಲೆಗಳನ್ನು ತೆರೆಯಲು ಹಾಗೂ ಹಿಂದುಳಿದ ವರ್ಗಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಲು 2 ಲಕ್ಷ ರೂಪಾಯಿಗಳನ್ನು ಆಯವ್ಯಯದ ಮೂಲಕ ಒದಗಿಸುವುದು.
7. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಪ್ರಾಶಸ್ತ್ಯ ನೀಡಿ ಹೆಚ್ಚುಹೆಚ್ಚು ಶಾಲೆಗಳನ್ನು ತೆರೆಯುವುದು.
8. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹೆಚ್ಚು ಆಧ್ಯತೆ ಸಿಗುವಂತೆ ಮಾಡಲು ತಾಲ್ಲೂಕು ಮಟ್ಟದಲ್ಲಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣವನ್ನು ಪಡೆದುಕೊಳ್ಳುವಂತೆ ಮಾಡುವುದು.
9. ಪ್ರತಿ ಹಂತದ ಶಾಲಾ–ಕಾಲೇಜುಗಳಲ್ಲಿ ಅರ್ಧದಷ್ಟು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಇರತಕ್ಕದೆಂದು ಸೂಚಿಸಿತು.
10. ಸರ್ಕಾರಿ ನೌಕರಿಗಳನ್ನು ಪಡೆಯುವಲ್ಲಿ ಅಭ್ಯರ್ಥಿಯೊಬ್ಬ ವಿಶ್ವವಿದ್ಯಾಲಯದ ಪದವಿಯನ್ನು ಹೊಂದಿರುವುದು ಅಪೇಕ್ಷಣೀಯ ವಾದರೂ ಅದು ತೀರ ಅಗತ್ಯವೆಂದು ಭಾವಿಸುವುದು ಸರಿಯಲ್ಲ ಎಂದು ತಿಳಿಸಿತು.

ಇವುಗಳು ಹಿಂದುಳಿದ ವರ್ಗಗಳ ಆಸೆ, ಆಶೋತ್ತರಗಳ ಬೇಡಿಕೆಗೆ ಪೂರಕವಾಗಿ ಸಮಿತಿಯ ಶಿಫಾರಸ್ಸುಗಳು ಬೆನ್ನೆಲುಬಾದವು.ಇದರಿಂದ ಸಿಕ್ಕ ಮೀಸಲಾತಿಯ ಕೊಡುಗೆಯಿಂದ ಸುಂದರವಾದ ಗರಿ ಬಿಚ್ಚಿ ಕುಣಿಯುವ ನವಿಲಿನಂತೆ ಖುಷಿಗೊಂಡು ಬ್ರಾಹ್ಮಣೇತರರು ಕೂಡ ಸರ್ಕಾರದ ಗೌರವಾನ್ವಿತ ಹುದ್ದೆಗಳ ಪಾಲುದಾರಿಕೆಯನ್ನು ಪಡೆದುಕೊಂಡರು. ಮಿಲ್ಲರ್ ಸಮಿತಿಯ ಮೀಸಲಾತಿಯ ಅನುದಾನವನ್ನು 'ದಿ ಮೈಸೂರು ಸ್ಟಾರ್' ಹಾಗೂ 'ವೃತ್ತಾಂತ' ಪತ್ರಿಕೆಗಳು ಮೆಚ್ಚುಗೆಯನ್ನು ಅಭಿವ್ಯಕ್ತಿಸಿದರೆ, ಮತ್ತೆ ಕೆಲವು ಪತ್ರಿಕೆಗಳು ಅಸಮಾಧಾನವನ್ನು ಹೊರಹಾಕಿದ್ದವು. ಮೈಸೂರು ಸಂಸ್ಥಾನದ ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ಉನ್ನತ ದರ್ಜೆಯ ಪದವಿಗಳನ್ನು ಹೊಂದಿದ್ದ ಮೈಸೂರು ಹಾಗೂ ಮದ್ರಾಸಿನ ಬ್ರಾಹ್ಮಣವರ್ಗಗಳು ತಮ್ಮಗಳ ನಡುವೆ ಮೈಸೂರಿನಲ್ಲಿ ಉಚ್ಚಾರ್ಯ ಹುದ್ದೆಗಳಿಗೆ ಸಂಬಂಧಿಸಿದಂತೆ ಪ್ರಾಂತೀಯ ಭಿನ್ನಾಭಿಪ್ರಾಯಗಳಿದ್ದರೂ ಸಹ ಒಟ್ಟಾಗಿ ಬ್ರಾಹ್ಮಣೇತರ ಜಾತಿಗಳಿಗೆ ಮಿಲ್ಲರ್ ಸಮಿತಿ ನೀಡಿದ್ದ ಮೀಸಲಾತಿಯ ವಿರುದ್ಧ ತೀವ್ರತರವಾದವಿರೋಧದ ಅಪಸ್ವರವನ್ನು ಎತ್ತಿದ್ದರು.

ಇದೇ ಸಂದರ್ಭದಲ್ಲಿ ಮೈಸೂರಿನ ಅಪ್ರತಿಮ ತಾಂತ್ರಿಕ ಜ್ಞಾನ, ಬೌದ್ಧಿಕ ಸಾಮರ್ಥ್ಯ, ವಿದ್ವಾಂಸ ತನದಿಂದ ದಿವಾನ ಪದವಿಯನ್ನು ಅಲಂಕರಿಸಿದ್ದ ಸರ್. ಎಂ. ವಿಶ್ವೇಶ್ವರಯ್ಯರವರು (1912–1918)ಹಿಂದುಳಿದ ವರ್ಗಗಳ ಮೀಸಲಾತಿಯ ಜನಕರಾದ ನಾಲ್ವಡಿಯವರಿಗೆ 'ಬ್ರಾಹ್ಮಣೇತರ ವರ್ಗಗಳು ಬೌದ್ಧಿಕ ಅರ್ಹತೆಯಲ್ಲದಿದ್ದರೂ ಮಿಲ್ಲರ್ ಸಮಿತಿಯ ಶೇ.50ರಷ್ಟು ಮೀಸಲಾತಿಯನ್ನು ಪಡೆದು ಸಂಸ್ಥಾನದ ಆಡಳಿತಾತ್ಮಕ ಅಧಿಕಾರಕ್ಕೆ ಬರುತ್ತಾರೆ. ಇದರಿಂದ ಉತ್ತಮವಾಗಿ ಬೌದ್ಧಿಕ ಪ್ರತಿಭೆಯನ್ನು ಹೊಂದಿರುವ ಬ್ರಾಹ್ಮಣರ ಸ್ಥಾನಗಳಿಗೆ ಕಂಠಕವಾಗುತ್ತದೆ' ಎಂದು ಮೀಸಲಾತಿಯನ್ನು ವಿರೋಧಿಸಿದರು. ಮುಂದುವರಿದು ಇದಕ್ಕೆ ಪ್ರತಿಯಾಗಿ ಬ್ರಾಹ್ಮಣವರ್ಗಗಳಿಗೆ 6 ಉಪವಿಭಾಗಾಧಿಕಾರಿಗಳ (ಅಸಿಸ್ಟೆಂಟ್ ಕಮಿಷನರ್) ಹುದ್ದೆಗಳನ್ನು ಕಾಯ್ದಿರಿಸಬೇಕೆಂದು ನಾಲ್ವಡಿಯವರಿಗೆ ಒತ್ತಾಯಿಸಿದರು. ಆಗ ನಾಲ್ವಡಿಯವರು ಇದನ್ನು ಒಪ್ಪದೆ 'ಸರ್ಕಾರಿ ಸೇವೆಗೆ ಅರ್ಹತೆಯೊಂದೇ ಆಧಾರವಾಗಿರದೆ ಕೆಳಜಾತಿಗಳ ಸಾಮಾಜಿಕ ಸ್ಥಿತಿಗತಿಗಳು ಮುಖ್ಯ ವಾಗಿರುತ್ತವೆ. ಹೀಗಾಗಿ ಅವಕಾಶ ವಂಚಿತ ಬ್ರಾಹ್ಮಣೇತರರಿಗೂ ಅಧಿಕಾರಯುತ ಹುದ್ದೆಗಳನ್ನು ನೀಡಬೇಕು' ಎಂದು ಪ್ರತಿಪಾದಿಸಿದರು. ಇದೇ ಭಿನ್ನಾಭಿಪ್ರಾಯದಿಂದಾಗಿ ವಿಶ್ವೇಶ್ವರಯ್ಯರವರು ತಮ್ಮ ದಿವಾನ ಪದವಿಗೆ ರಾಜೀನಾಮೆ ನೀಡಿದರು. ಹೀಗೆ ಬ್ರಾಹ್ಮಣೇತರರ ಚಳವಳಿಯ ತೀವ್ರತೆಯಿಂದ ಮೈಸೂರಿನಲ್ಲಿ ಬ್ರಾಹ್ಮಣರ ಅಧಿಕಾರ ಸ್ಥಾನಗಳಿಗೆ ಹಿನ್ನಡೆಯುಂಟಾಗಿ ಸಂಸ್ಥಾನದ ಪ್ರಪ್ರಥಮ ಬ್ರಾಹ್ಮಣೇತರ ದಿವಾನರಾಗಿ ಎಂ. ಕಾಂತರಾಜ ಅರಸು (1918–1922)ರವರು ಆರಿಸಿ ಬಂದರು. ಇದು ಬ್ರಾಹ್ಮಣರ ವಿರುದ್ಧ ಬ್ರಾಹ್ಮಣೇತರರಿಗೆ ಚಳವಳಿಯ ಮೂಲಕ ಸಿಕ್ಕ ಜಯ.

## ಮೈಸೂರು ಸಂಸ್ಥಾನದ ಬ್ರಾಹ್ಮಣೇತರ ದಿವಾನರಾಗಿ ಎಂ. ಕಾಂತರಾಜ ಅರಸು–ಬ್ರಾಹ್ಮಣೇತರರ ಏಳಿಗೆ

ಮೈಸೂರಿನ ಮೊದಲ ಬ್ರಾಹ್ಮಣೇತರ ದಿವಾನರಾದ ಎಂ. ಕಾಂತರಾಜ ಅರಸರವರು ಅಧಿಕಾರ ವಹಿಸಿಕೊಂಡ ತಕ್ಷಣದಿಂದಲೇ ಮಿಲ್ಲರ್ ಸಮಿತಿಯ ವರದಿಯನ್ನು ಆಧರಿಸಿ ಹಿಂದುಳಿದ ವರ್ಗಗಳಿಗೆ ಉಚಿತ ಶಾಲಾ ಪ್ರವೇಶ, ಶಾಲೆಗಳಿಗೆ ಅನುದಾನ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಕನ್ನಡ ಭಾಷೆಯಲ್ಲಿ ಪರೀಕ್ಷೆಗಳು ನಡೆಯುವಂತೆ ಮಾಡಿದರು. ಜೊತೆಗೆ ಹಿಂದುಳಿದ ವರ್ಗಗಳ ಉತ್ತಮ ಜೀವನೋಪಾಯದ ನಿರ್ವಹಣೆಗೆ ವಿವಿಧ ರೀತಿಯ ಸವಲತ್ತುಗಳನ್ನು ಒದಗಿಸಿಕೊಟ್ಟರು. ಇದೇ ಸಂದರ್ಭದಲ್ಲಿ 'ಶೃಂಗೇರಿ ಸುತ್ತೋಲೆ'ಯನ್ನು ಅನುಷ್ಠಾನಕ್ಕೆ ತಂದು 3000 ಪಂಚಮ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸಾರ್ವಜನಿಕ ಶಾಲೆಗಳಲ್ಲಿ ಪ್ರವೇಶವನ್ನು ನೀಡುವಂತೆ ಮಾಡಿದರು. ಈಗಾಗಲೇ ಬ್ರಾಹ್ಮಣೇತರ ಬಲಿಷ್ಠ ಕೋಮುಗಳಾಗಿದ್ದ ಲಿಂಗಾಯತರು (ವೀರಶೈವ ಲಿಂಗಾಯತ ಸಂಘ 1905), ಒಕ್ಕಲಿಗರು (ಒಕ್ಕಲಿಗರ ಸಂಘ 1906), ಕುರುಬರ ಸಂಘ, ಮಹಮದಿಯರ ಮುಸ್ಲಿಂ ಸಂಘ, ಕ್ರಿಶ್ಚಿಯನ್ನರು 'ದಿ ಇಂಡಿಯನ್ ಕ್ರಿಶ್ಚಿಯನ್ ಅಸೋಸಿಯೇಷನ್', ಸಿದ್ದಪ್ಪ ಕಂಬಳಿಯವರಿಂದ 'ಬ್ರಾಹ್ಮಣೇತರ ಪರಿಷತ್ತು'ಗಳನ್ನು ಸ್ಥಾಪಿಸಿಕೊಂಡು ಬ್ರಾಹ್ಮಣರ ವಿರುದ್ಧ ತಮ್ಮ ರಾಜಕೀಯ ಅಧಿಕಾರವನ್ನು ಪಡೆಯುವ ಸಲುವಾಗಿ ಒಗ್ಗಟ್ಟನ್ನು ಪ್ರದರ್ಶಿಸಿದ್ದರು. ಇದಕ್ಕೆ ಪುಷ್ಠಿ ಎಂಬಂತೆ ಈ ದಿವಾನರ ಆಡಳಿತಾವಧಿಯಲ್ಲಿ 'ಸಂವಿಧಾನ ಸುಧಾರಣಾ ಸಮಿತಿ'ಯು

1921ರಲ್ಲಿ ನೇಮಕಗೊಂಡು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಾತಿನಿಧ್ಯವನ್ನು ಪಡೆದುಕೊಳ್ಳಲು ಸಮಾಜದ ಎಲ್ಲಾ ವರ್ಗಗಳಿಗೂ ಹಕ್ಕಿದೆ ಎಂಬುದನ್ನು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತ್ತು. ಇದರ ಸದುಪಯೋಗಪಡಿಸಿಕೊಳ್ಳಲು ಮಿಲ್ಲರ್ ಸಮಿತಿಯ ಮೀಸಲಾತಿ ನೀತಿಯು ಬ್ರಾಹ್ಮಣೇತರರಿಗೆ ವರದಾನವಾಗಿ ಸಿಕ್ಕಿತು. ಹೀಗಾಗಿ ಹಿಂದುಳಿದ ವರ್ಗಗಳು ಬ್ರಾಹ್ಮಣೇತರ ಚಳವಳಿಯ ಫಲವಾಗಿ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯಲ್ಲೂ ಸದಸ್ಯತ್ವವನ್ನು ಪಡೆಯುವುದರ ಮೂಲಕ ಬಹುಬೇಗನೇ ಏಳಿಗೆಗೆ ಬಂದರು. ಆದರೆ 1928ರಲ್ಲಿ ಬ್ರಾಹ್ಮಣೇತರರು ಹಾಗೂ ಹಿಂದೂಯೇತರ ನಡುವೆ ಉದ್ಭವಿಸಿದ ಕೋಮುದಳ್ಳುರಿಯ ಬಿಕ್ಕಟ್ಟು ಚಳವಳಿಯನ್ನು ಹಾದಿ ತಪ್ಪುವಂತೆ ಮಾಡಿತು.

## ಬ್ರಾಹ್ಮಣೇತರರ ನಡುವೆ ಆಂತರಿಕ ಬಿಕ್ಕಟ್ಟು–ಹಾದಿ ತಪ್ಪಿದ ಚಳವಳಿ

ಮೈಸೂರಿನ ಬ್ರಾಹ್ಮಣೇತರ ಚಳವಳಿಯು ಕಾಡ್ಗಿಚ್ಚಿನಂತೆ ಸಂಸ್ಥಾನದಾದ್ಯಂತ ಹರಡಿ 1926–1928ರ ಅವಧಿಯಲ್ಲಿ ಸಮಾಜದ ಮುಖ್ಯವಾಹಿನಿಯಲ್ಲಿ ಬ್ರಾಹ್ಮಣರ ವಿರುದ್ಧ ತೊಡೆತಟ್ಟಿ ಅಕಾಡಕ್ಕಿಳಿದಿತ್ತು. ಈ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಲಿಂಗಾಯತರು ಹಾಗೂ ಒಕ್ಕಲಿಗರ ನಡುವೆ ಶೈಕ್ಷಣಿಕವಾಗಿ ಪೈಪೋಟಿ ಪ್ರಾರಂಭವಾಗಿ ಲಿಂಗಾಯತರು ಮೇಲುಗೈ ಸಾಧಿಸಿದ್ದರು. ಹೀಗಾಗಿ ಲಿಂಗಾಯತರಿಗೆ ಹಿಂದೂಯೇತರ ಮುಸ್ಲಿಂ ಸಮುದಾಯದ ಅಬ್ಬಾಸ್‌ಖಾನ್ ಎಂಬುವವರ ಭದ್ರವಾದ ಬೆಂಬಲ ಸಿಕ್ಕಿದ್ದರಿಂದ ಇಬ್ಬರೂ ಸೇರಿ ಪ್ರಜಾಮಿತ್ರ ಮಂಡಳಿಯ ಬ್ರಾಹ್ಮಣ ವಿರೋಧಿ ಕಾರ್ಯಚಟುವಟಿಕೆಗಳನ್ನು ಮುಂದುವರಿಸಿದರು. ಇದರಿಂದಾಗಿಯೇ ದಿವಾನ ಪದವಿಯಿಂದ ಬಂಗಾಳಿ ಬ್ರಾಹ್ಮಣ ಆಲ್ಬಿಯನ್ ಬ್ಯಾನರ್ಜಿ ನಿರ್ಗಮಿಸುವಂತಾಯಿತು. ತಕ್ಷಣ ಸಂಸ್ಥಾನದ ದಿವಾನರ ಸ್ಥಾನಕ್ಕೆ ಹಿಂದೂಯೇತರ ಮುಸ್ಲೀಂ ವರ್ಗದಿಂದ ಮೊದಲ ಬಾರಿಗೆ ಸರ್. ಮಿರ್ಜಾ ಇಸ್ಮಾಯಿಲ್‌ರವರು (1926–1941) ಆಯ್ಕೆಯಾದರು. ಇವರು ಪ್ರಜಾಮಿತ್ರ ಮಂಡಳಿಯ ಅಬ್ಬಾಸ್ ಖಾನ್‌ರವರಿಗೆ ತುಂಬಾ ಆಪ್ತರಾಗಿದ್ದರಲ್ಲದೆ, ನಾಲ್ವಡಿಯುವರ ಆತ್ಮೀಯ ಸ್ನೇಹಿತರು ಮತ್ತು ತರಗತಿಯ ಸಹಪಾಠಿಯಾಗಿದ್ದರು. ಹೀಗಾಗಿ ಇವರು ಸಂಸ್ಥಾನದ ದಿವಾನರಾಗಿದ್ದು ಅಲ್ಲಿನ ಬ್ರಾಹ್ಮಣರು ಹಾಗೂ ಒಕ್ಕಲಿಗರಿಗೆ ನಿಧಾನವಾಗಿ ಚಳವಳಿಗೆ ಬಂದ ಅಲ್ಪಸಂಖ್ಯಾತರ ಮುಸ್ಲೀಮನೊಬ್ಬ ದಿವಾನನಾದನಲ್ಲ ಎಂಬ ಅಸಹನೀಯ ಕೋಮುಭಾವನೆ ಒಕ್ಕಲಿಗರಲ್ಲಿ ಭುಗಿಲೆದ್ದಿತು.

1927ರ ವೇಳೆಗೆ ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ಸದಸ್ಯತ್ವ ಸ್ಥಾನಕ್ಕೆ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ಒಕ್ಕಲಿಗರು ಬಹುತೇಕ ಸ್ಥಾನಗಳಲ್ಲಿ ಆರಿಸಿಬಂದರು. ಇದೇ ಸಮಯದಲ್ಲಿ ಸರ್. ಮಿರ್ಜಾ ಇಸ್ಮಾಯಿಲ್‌ರವರು ದಿವಾನರಾಗಿದ್ದರಿಂದ ಅವರ ಆಡಳಿತಕ್ಕೆ ಅಡಚಣೆ ಉಂಟಾಗುವಂತೆ ಒಕ್ಕಲಿಗ ನಾಯಕರು ಬೆಂಗಳೂರಿನಲ್ಲಿ 'ಗಣಪತಿ ಗಲಾಟೆ'ಯನ್ನು ಬ್ರಾಹ್ಮಣೇತರರು ಹಾಗೂ ಹಿಂದೂಯೇತರ ಮುಸ್ಲಿಮರ ನಡುವೆ ಎಬ್ಬಿಸಿದರು. ಜುಲೈ, 1928ರಲ್ಲಿ ನಡೆದ ಈ ಘಟನೆಯಲ್ಲಿ ಹಿಂದೂ ವಿದ್ಯಾರ್ಥಿಗಳು ಮುಸ್ಲೀಮರು ವಾಸವಿದ್ದ ತಮ್ಮ ಶಾಲೆಯ ಕಾಂಪೌಂಡ್ ಬಳಿ ಸಿಕ್ಕ ಗಣಪತಿ ವಿಗ್ರಹವನ್ನು ಮಸೀದಿಯ ಹತ್ತಿರವೇ ದೇವಸ್ಥಾನವನ್ನು ನಿರ್ಮಿಸಿ ಪ್ರತಿಷ್ಠಾಪಿಸಬೇಕೆಂದು ಹಠ ಹಿಡಿದದ್ದು ಈ ಎರಡೂ ಸಮುದಾಯಗಳ ನಡುವೆ ಕೋಮು ಘರ್ಷಣೆಯ ಪ್ರವಾಹಕ್ಕೆ ಕಾರಣವಾಯಿತು. ಮುಂದೆ ಈ ಘಟನೆ ಬ್ರಾಹ್ಮಣೇತರ ಚಳವಳಿ ದಾರಿ ತಪ್ಪುವಂತೆ ಮಾಡಿತು.

ಮುಂದೆ 1930ರ ಸಮಯದಲ್ಲಿ ಬ್ರಾಹ್ಮಣೇತರ ಹಾಗೂ ಹಿಂದೂಯೇತರರ ನಡುವೆ ಭಿನ್ನಾಭಿಪ್ರಾಯಗಳ ಘರ್ಷಣೆ ಅತಿಯಾಗಿ, ಚಳವಳಿ ಮಿಲ್ಲರ್ ಸಮಿತಿ ಶಿಫಾರಸ್ಸು ಮಾಡಿದ್ದರೂ ಅಸ್ಪೃಶ್ಯರಿಗೆ ಯಾವುದೇ ರೀತಿಯ ಸರ್ಕಾರಿ ನೌಕರಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಆದ್ಯತೆಯನ್ನು ದೊರಕಿಸಿಕೊಡುವಲ್ಲಿ ನಿರ್ಲಕ್ಷ್ಯ ವಹಿಸಿತ್ತು. ಇದರಿಂದ ಜಾಗೃತಗೊಂಡ ಹರಿಜನ ಸಮುದಾಯ ಪ್ರಜಾಮಿತ್ರ ಮಂಡಳಿಯಿಂದ ದೂರ ಸರಿಯಿತು. ಇದೇ ಸಂದರ್ಭದಲ್ಲಿ ಮೈಸೂರಿನ ಬ್ರಾಹ್ಮಣರೂ ಕೂಡ ಪ್ರಜಾಮಿತ್ರ ಮಂಡಳಿಯ ಬ್ರಾಹ್ಮಣೇತರರ ವಿರುದ್ಧವಾಗಿ ಹರಿಜನರನ್ನು ಕರುಣೆಯಿಂದ ತಮ್ಮೆಡೆ ಸೆಳೆದುಕೊಂಡು ಸಂಸ್ಥಾನದಲ್ಲಿ ಅಧಿಕಾರವನ್ನು ಪುನಃ ಮರಳಿ ಪಡೆಯುವಲ್ಲಿ ಯಶಸ್ವಿಯಾದರು. ಆದರೆ ಪ್ರಜಾಮಿತ್ರ ಮಂಡಳಿಯು ಬ್ರಾಹ್ಮಣೇತರ ಚಳವಳಿಯ ಕಾವನ್ನು ಕಳೆದುಕೊಂಡು 1930ರಲ್ಲಿ ಪ್ರಜಾಪಕ್ಷ ಎಂಬ ರಾಜಕೀಯ ಸಂಘಟನೆಯನ್ನು ರಚನೆ ಮಾಡಿತು. 1935ರ ವೇಳೆಗೆ ಇವೆರಡೂ ರಾಜಕೀಯ ಸಂಘಟನೆಗಳು ಪ್ರಜಾ ಸಂಯುಕ್ತ ಪಕ್ಷದ ಜೊತೆ ವಿಲೀನಗೊಂಡು ಚಳವಳಿಯನ್ನು ಹಾದಿ ತಪ್ಪಿಸಿದವು. ಮಾತ್ರವಲ್ಲದೆ ಬ್ರಾಹ್ಮಣೇತರ ಚಳವಳಿಯ ಬಹುತೇಕ ಶೂದ್ರವರ್ಗದ ನಾಯಕರು ಬೇರೆಬೇರೆ ರಾಜಕೀಯ ಪಕ್ಷಗಳ ಮೊರೆಹೋಗಿ ಸರ್ವರ ಪ್ರಗತಿವಿರೋಧಿ ಜಾತಿರಾಜಕಾರಣ ಮಾಡುವಲ್ಲಿ ನಿರತರಾದರು.

## ಸಮಾರೋಪ

ಬ್ರಾಹ್ಮಣೇತರ ಚಳವಳಿಯ ಶೂದ್ರವರ್ಗದ ಮುಂದಾಳುಗಳು ನಾಲ್ವಡಿ ಕೃಷ್ಣರಾಜ ಒಡೆಯರ ಕೃಪಕಟಾಕ್ಷದಿಂದ ಮಿಲ್ಲರ್ ಸಮಿತಿಯ ಮೂಲಕ ಸಿಕ್ಕ ಮೀಸಲಾತಿಯ ವರಪ್ರಸಾದವನ್ನು ತಮ್ಮ ಸ್ವಹಿತ, ಸ್ವರಕ್ಷಣೆಗಾಗಿ ಬಳಸಿಕೊಂಡು ಸರ್ಕಾರದಿಂದ ಸಿಗಬೇಕಾದ ಬಹುಪಾಲು ಸೌಕರ್ಯಗಳನ್ನು ಪಡೆದರು. ಆದರೆ ತಾವು ಸರ್ಕಾರದಿಂದ ಪಡೆಯುತ್ತಿದ್ದ ಈ ತೆರನಾದ ಅವಕಾಶಗಳನ್ನು ಅತಿಶೂದ್ರರಿಗೆ ಅಂದರೆ ಹರಿಜನರಿಗೆ ತಲುಪದಂತೆ ಮಾಡಿ ತಾವೇ ಕಬಳಿಸಿಕೊಂಡು ಆ ಕಾಲದ ಜಾತಿವಾದಿ ಬ್ರಾಹ್ಮಣಶಾಹಿ ವರ್ಗಗಳಂತೆ ಆಧುನಿಕ ಮೈಸೂರು ರಾಜ್ಯದಲ್ಲಿ ಪ್ರಬಲ ಶೋಷಕರಾದರು. ಜೊತೆಗೆ ಮೈಸೂರು ರಾಜ್ಯ ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವ ಮಾದರಿಯ ಆಡಳಿತ ವ್ಯವಸ್ಥೆಯನ್ನು 1947ರ ಪೂರ್ವಾರ್ಧದಲ್ಲಿ ಅಳವಡಿಸಿಕೊಂಡಿತು. ಈ ಸಮಯದಲ್ಲೂ ಬ್ರಾಹ್ಮಣೇತರ ಪ್ರಬಲ ಮೇಲ್ವರ್ಗದ ಕೋಮುಗಳು ಜಾತೀಯತೆ ಮತ್ತು ಜಾತಿರಾಜಕಾರಣವನ್ನು ಶರವೇಗದಲ್ಲಿ ಮಾಡುತ್ತ ಕರ್ನಾಟಕ ದಲಿತ ಚಳವಳಿ ಪ್ರಾರಂಭಕ್ಕೆ ನಾಂದಿ ಹಾಡಿದರು.

## ಕೊನೆ ಟಿಪ್ಪಣಿಗಳು

1. ಲಕ್ಷ್ಮಣ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು, ಏಕೀಕರಣೋತ್ತರ ಕರ್ನಾಟಕ, ಸಂಪುಟ5, 1999, ಪುಟ23.
2. Bjorn Hettne, (1977) The Political Economy of Indirect Rule Mysore 1881-1947, Ambika Publications, Pp141.
3. Lelah Duskin, The Non-Brahmin Movement in Princely Mysore, University of Pennsylvania, Ph.D., 1974, Pp59-68.
4. ಲಕ್ಷ್ಮಣ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು, ಏಕೀಕರಣೋತ್ತರ ಕರ್ನಾಟಕ, ಸಂಪುಟ5, 1999, ಪುಟ2.
5. ಎಸ್. ಚಂದ್ರಶೇಖರ್, ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ, 2001, ಪುಟ37.
6. J.H. Hutton, Caste in India, Oxford University Press, 1946, Pp10.
7. ದಯಾನಂದ ಮಾನೆ (2007), ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿಗಳು, ಡಾ. ಬಿ.ಆರ್. ಅಂಬೇಡ್ಕರ್ ರಿಸರ್ಚ್ ಅಕಾಡೆಮಿ ಪ್ರಕಾಶನ, ಪುಟ34.

– 27ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಗ್ರಾಫಾಲಾಜಿ; ಕೈಬರಹದಮೂಲಕ ವ್ಯಕ್ತಿತ್ವ ವಿಶ್ಲೇಷಣೆ

✍ ಡಾ. ಗಿರೀಶ್ ಟಿ. ಪ್ರಾಂಶುಪಾಲರು, ಎಸ್. ಎಸ್. ಕೆ. ಎಸ್. ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ.

ಮಾನವ ಇತಿಹಾಸದ ಸಾಂಸ್ಕೃತಿಕ ಪರಂಪರೆ ಹಾಗೂ ಜ್ಞಾನ ರಾಶಿಯನ್ನು ಎಲ್ಲ ಸಮಾಜಗಳಿಗೂ, ಎಲ್ಲ ಕಾಲಕ್ಕೂ ಪ್ರಸಾರ ಮಾಡುವ ಕಾರ್ಯ ಬರವಣಿಗೆಯಿಂದ ಸಾಧ್ಯವಾಗಿದೆ. ಭಾಷೆಯು ಕಾಲ ಮತ್ತು ದೂರವನ್ನು ಗೆದ್ದು ಎಲ್ಲರನ್ನು ತಲುಪುವುದು ಬರವಣಿಗೆಯ ಮೂಲಕ. ಬರಹ ಒಂದು ಸಂಕೀರ್ಣ ಕೌಶಲ. ರೇಖಾ ವಿನ್ಯಾಸಗಳನ್ನು ಕ್ರಮಬದ್ಧವಾಗಿ, ಅರ್ಥಬದ್ಧವಾಗಿ ಜೋಡಿಸಿ ಬರೆದಾಗ ಬರವಣಿಗೆ ಆಗುತ್ತದೆ. ಬರವಣಿಗೆಯಲ್ಲಿ ಪ್ರಭುತ್ವ ಪಡೆಯಲು ವರ್ಣವಿನ್ಯಾಸ, ಭಾಷೆಯ ನಿಯಮ, ಕೈ ಬೆರಳುಗಳ ಸ್ನಾಯು ಕೌಶಲಗಳು ಸಂಯುಕ್ತವಾಗಿ ಸಹಕರಿಸಬೇಕು. ಓದಿಗಿಂತ ಬರಹ ಹೆಚ್ಚು ಸಂಕೀರ್ಣಕ್ರಿಯೆ. ಬರಹಕ್ಕೆ ಲಿಪಿಗಳ ಪರಿಚಯ, ರೇಖಾವಿನ್ಯಾಸ ಕ್ರಮ, ಅಕ್ಷರಗಳ ರಚನೆ ಹಾಗೂ ಸಂಯೋಜನೆ, ಕಾಗುಣಿತ, ಲೇಖನ ಚಿಹ್ನೆಗಳು ಮತ್ತು ವಾಕ್ಯರಚನೆಯ ಜ್ಞಾನವಿರಬೇಕು. ಬರಹದಲ್ಲಿ ಮಾನಸಿಕಶಿಸ್ತು, ಸ್ಮರಣೆ, ಅಕ್ಷರಗಳ ಪರಿಚಯ, ಸ್ನಾಯುಪಟುತ್ವ ಹಾಗೂ ಕಣ್ಣು, ಮನಸ್ಸು, ಬೆರಳುಗಳು ಒಂದಕ್ಕೊಂದು ಸಮನ್ವಯಗೊಂಡಿರುತ್ತದೆ. ಅರ್ಥಪೂರ್ಣವಾಗಿ, ಸುಂದರ ಮತ್ತು ವೇಗವಾಗಿ ಬರೆಯುವುದು ಒಂದು ಕೌಶಲ ಹಾಗೂ ಕಲೆ. ಮಾನವನ ಆವಿಷ್ಕಾರಗಳಲ್ಲಿ ಬರವಣಿಗೆಯೂ ಒಂದು.

ಭಾಷೆಯ ಅಭಿವ್ಯಕ್ತಿ ಸಾಧನ ಬರವಣಿಗೆ. ನಾವು ನಮ್ಮ ಆಲೋಚನೆ, ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ಮುಖ್ಯವಾಗಿ ಎರಡು ರೂಪದಲ್ಲಿ ಅಭಿವ್ಯಕ್ತಗೊಳಿಸುತ್ತೇವೆ. ಒಂದು ಬರವಣಿಗೆ ಮತ್ತೊಂದು ಧ್ವನಿ (ಮಾತು). ಮಾತುಗಾರಿಕೆಯ ಕೌಶಲದ ಮೂಲಕ ವ್ಯಕ್ತಿಯ ಬೌದ್ಧಿಕ ಶಕ್ತಿ, ಮಾತಿನಲ್ಲಿ ಸೃಜನಶೀಲತೆ, ವಿಚಾರವಂತಿಕೆ ಮತ್ತು ವ್ಯಕ್ತಿತ್ವ ಮುಂತಾದ ಗುಣಗಳನ್ನು ಸಹಜವಾಗಿಯೆ ಗುರುತಿಸುತ್ತೇವೆ. ಅದೇ ರೀತಿಯಾಗಿ ಲಿಪಿಯಿಂದ ಕೂಡಿದ ಬರವಣಿಗೆಯ ಮೂಲಕವು ಸಹ ವ್ಯಕ್ತಿಯ ವಿಚಾರವಂತಿಕೆ ಮತ್ತು ವ್ಯಕ್ತಿತ್ವದ ಸಂಬಂಧಿತ ಗುಣಗಳನ್ನು ಗುರುತಿಸಲಾಗುವುದು.ಕೈಬರಹದ ಮೂಲಕ ವ್ಯಕ್ತಿತ್ವ ವಿಶ್ಲೇಷಿಸುವ ಅಧ್ಯಯನಕ್ಕೆ ಗ್ರಾಫಾಲಜಿ ಎಂದು ಕರೆಯುತ್ತೇವೆ. ಗ್ರಾಫಾಲಜಿಯು ವ್ಯಕ್ತಿಯ ಕೈಬರಹದ ಮೂಲಕ ವ್ಯಕ್ತಿತ್ವವನ್ನು ಅಳೆಯುವ / ಮೌಲ್ಯಮಾಪನ ಮಾಡುವ ವೈಜ್ಞಾನಿಕ ವಿಧಾನವಾಗಿದೆ. ಗ್ರಾಫಾಲಜಿಯು ಒಂದು ವ್ಯವಸ್ಥಿತ ವಿಜ್ಞಾನವಾಗಿದೆ.ಮೊಟ್ಟಮೊದಲು ಗ್ರಾಫಾಲಜಿಯನ್ನು ಆಳವಾಗಿ ಅಧ್ಯಯನ ಮಾಡಿದ ಕ್ಯಾಮಿಲ್ಲೊ ಬಾಲ್ಡಿಯನ್ನು (Camillo Baldi) ಗ್ರಾಫಾಲಜಿ ಶಾಸ್ತ್ರದ ಪಿತಾಮಹಾ ಎಂದು ಕರೆಯಲಾಗಿದೆ.

ಕೈಬರಹ ತಮ್ಮದೇ ಆದ ಅನನ್ಯತೆಯ ಸಂಕೇತವೂ ಸಹ ಆಗಿದೆ. ಅದು ನಮ್ಮ ಮನೋಧರ್ಮ, ಮನಸ್ಥಿತಿಯ ಕನ್ನಡಿಯೂ ಹೌದು. ಇಂದಿನ ಡಿಜಿಟಲ್ ಯುಗದ ಸಂವಹನದಲ್ಲಿ ತಂತ್ರಜ್ಞಾನವೇ ಎಲ್ಲಡೆ ಮೇಲುಗೈ ಸಾಧಿಸುತ್ತಿರುವಾಗ ಕೈಬರಹ ಇನ್ನು ಅಪ್ರಸ್ತುತ ಎನ್ನುವುದು ಕೆಲವರ ವಾದ. ಓದು, ಬರಹ, ಪರೀಕ್ಷೆ ಎಲ್ಲವೂ ಡಿಜಿಟಲ್ ಸಾಧನಗಳ ಮೂಲಕ ನಡೆಯುತ್ತಿರುವಾಗ ಕೈಬರಹ ಎಷ್ಟು ಪ್ರಸ್ತುತ ಎನ್ನುವ ಪ್ರಶ್ನೆ ಎದುರಾಗುತ್ತದೆ. ಆದರೆ, ಕೈಬರಹ ಮತ್ತು ಬೆರಳಚ್ಚು ಮುದ್ರಿತ ಬರಹಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿದ ಸಂಶೋಧಕರು, ನರಶಾಸ್ತ್ರಜ್ಞರು, ವಿಜ್ಞಾನಿಗಳು ಮತ್ತು ಮನಃಶಾಸ್ತ್ರಜ್ಞರು ಈ ಮೇಲಿನ ವಾದವನ್ನು ಒಪ್ಪುವುದಿಲ್ಲ. ಕೈಬರಹವು ಸ್ನಾಯು ಮತ್ತು ನರಗಳ ಸುಸಂಬದ್ಧ ಸಂಯೋಜನೆಗಳ ವಿವಿಧ ಕೌಶಲಗಳು ಸೇರಿವೆ ಎನ್ನುತ್ತಾರೆ. ಕೈಯಿಂದ ಬರೆಯುವ ಪ್ರಕ್ರಿಯೆಯು ಸಂವೇದನೆಯನ್ನು, ಸೃಜನಶೀಲತೆಯನ್ನು ಮತ್ತು ಉತ್ತಮ ಚಲನಾ ಕೌಶಲವನ್ನು ಪ್ರಚೋದಿಸುವ ಅರಿವಿನ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಕೀಬೋರ್ಡ್‌ನಲ್ಲಿ ಬೆರಳಚ್ಚು ಮಾಡುವುದಕ್ಕಿಂತ ಹೆಚ್ಚು ಸಹಕಾರಿ ಎನ್ನುವುದು ಸಂಶೋಧನೆಗಳಿಂದ ವ್ಯಕ್ತವಾದ ಅಂಶವಾಗಿದೆ. ಕೈಬರಹ ವ್ಯಕ್ತಿಯ ಆಂತರ್ಯ, ಬಾಹ್ಯ ವ್ಯಕ್ತಿತ್ವ ಅರಿಯುವ ಸಾಧನವಾಗಿದೆ. ನಮ್ಮ ಅರಿವಿಗೆ ಬಾರದಂತೆ ನಮ್ಮ ಮನಸ್ಸು ಸದಾ ಜಾಗೃತದಲ್ಲಿರುತ್ತದೆ, ಅದರೊಳಗೆ ಆಲೋಚನೆಗಳು, ದುಗುಡ–ದುಮ್ಮಾನ, ನೋವು–ನಲಿವು, ಭಯ, ಆತಂಕ, ಹಿಂಜರಿಕೆಗಳು, ನಮಗೆ ನಿಲುಕುವುದು ಕಷ್ಟಸಾಧ್ಯ. ಈ ಎಲ್ಲ ಗುಣಗಳು ಕೈಬರಹದ ಮೂಲಕ ತಿಳಿದುಕೊಳ್ಳಬಹುದಾಗಿದೆ ಹಾಗೂ ಅಗತ್ಯ ಮಾರ್ಗದರ್ಶನ ಪಡೆಯಬಹುದಾಗಿದೆ, ಇದನ್ನೇ ಕೈಬರಹ ವಿಶ್ಲೇಷಣೆ ಎಂದು ಕರೆಯಲಾಗುತ್ತದೆ.

ಕೈಬರವಣಿಗೆಯನ್ನು ಮೌಲ್ಯಮಾಪನ ಮಾಡಲು ಅತ್ಯಂತ ಮಹತ್ವವಾಗಿರುವ ಅಂಶಗಳೆಂದರೆ – ಅಕ್ಷರಗಳ ಗಾತ್ರ, ಸ್ಲ್ಯಾಂಟ್‌ನೆಸ್, ಅಕ್ಷರ–ಅಕ್ಷರಗಳ ನಡುವೆ ಮತ್ತು ಸಾಲುಗಳ ನಡುವಿನ ಅಂತರ, ಮಾರ್ಜಿನ್, ಬರವಣಿಗೆಯ ಒತ್ತಡ ಮತ್ತು ಪ್ಯಾರಾಗ್ರಾಫ್‌ಗಳ ರಚನೆ, ಇವುಗಳ ಆಧಾರದ ಮೇಲೆ ವ್ಯಕ್ತಿತ್ವ ಮಾಪನ ಅಥವಾ ವಿಶ್ಲೇಷಣೆ ಸಾಧ್ಯವಾಗುತ್ತದೆ. ಈ ಲೇಖನದಲ್ಲಿ ಕೈಬರಹದ ಸ್ಲ್ಯಾಂಟ್‌ನೆಸ್ (ಅಕ್ಷರಗಳ ಓರೆ ಬರಹ – Slant writing) ಮತ್ತು ಸಾಲುಗಳ ನಡುವಿನ ಅಂತರ (Spacing between lines) ಬರಹವನ್ನು ವಿವಿಧ ಆಯಾಮಗಳಲ್ಲಿ ಬರೆಯುವವರ ವ್ಯಕ್ತಿತ್ವವನ್ನು ವಿಶ್ಲೇಷಿಸಲಾಗಿದೆ.

## 1. ಅಕ್ಷರಗಳ ಓರೆ ಬರಹ (Slant writing) ಮತ್ತು ವ್ಯಕ್ತಿತ್ವ

ಕೆಲವರು ಬರೆಯುವಾಗ ಅಕ್ಷರಗಳನ್ನು ಬಲಗಡೆಗೆ ಬಾಗಿಸಿ ಬರೆದರೆ ಮತ್ತೆ ಕೆಲವರು ಎಡಗಡೆಗೆ ಬಾಗಿಸಿ ಬರೆಯುವುದು ಕಂಡುಬರುತ್ತದೆ. ಮತ್ತೆ ಕೆಲವರು ನೇರವಾಗಿ ಬರೆಯುತ್ತಾರೆ. ಗ್ರಾಫಾಲಜಿಯ ನಿಯಮಗಳಿಗೆ ಅನುಗುಣವಾಗಿ ಬರವಣಿಗೆಯನ್ನು ನೇರ ಬರಹ (Vertical writing), ಬಲಗಡೆಗೆ ಓರೆಯಾಗಿ ಬರೆಯುವುದು (Right Slant), ಹಾಗೂ ಎಡಭಾಗಕ್ಕೆ ಓರೆಯಾಗಿ ಬರೆಯುವುದು (Left Slant)ಎಂದು ಮೂರು ವಿಧವಾಗಿ ವಿಂಗಡಿಸಲಾಗಿದೆ. ಈ ಮೂರು ಶೈಲಿಯಲ್ಲಿ ಬರೆಯುವವರ ವ್ಯಕ್ತಿತ್ವದ ಗುಣಗಳನ್ನು ಇಲ್ಲಿ ಚರ್ಚಿಸಲಾಗಿದೆ.

### ನೇರ ಬರಹ (Vertical writing)



ನೇರ ಬರಹವು ವರ್ತಮಾನ ಸ್ಥಿತಿಯನ್ನು ಸೂಚಿಸುತ್ತದೆ. ಇಂತಹ ಬರಹಗಾರರು ಸ್ವತಂತ್ರ ಚಿಂತನೆ, ಉತ್ತಮ ಜವಾಬ್ದಾರಿ ಗುಣ ಹೊಂದಿರುತ್ತಾರೆ, ಸೂಕ್ತ ನಿರ್ಧಾರ ಕೈಗೊಳ್ಳುವವರು, ಮನೋಭಾವನೆಗಳಲ್ಲಿ ನಿಯಂತ್ರಣ ಹೊಂದಿದವರಾಗಿರುತ್ತಾರೆ, (ಜಾನ್ ಆಂಟೋನಿ, 2008). ಇವರು ಅಂತರ್‌ಶಕ್ತಿ, ಸ್ವಾವಲಂಬನೆ, ಸ್ವನಿಯಂತ್ರಣ, ಸ್ವತಂತ್ರ ಚಟುವಟಿಕೆಯ ಗುಣವನ್ನು ಹೊಂದಿರುತ್ತಾರೆ, (ಕರೆನ್ ಅಹಮದ್ ಮತ್ತು ಮೇರಿ ಎಸ್.ರುಜ್, 1980). ನೇರ ಬರಹ ತಮ್ಮನ್ನು ತಾವು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಂಪೂರ್ಣ ಭಾವನಾತ್ಮಕ ನಿಯಂತ್ರಣ ಹೊಂದಿದೆ, ಹೆಚ್ಚು ತೋರ್ಪಡಿಕೆಯಲ್ಲದ ಗುಣವಿದ್ದು, ಸ್ವತಂತ್ರ, ಪ್ರಾಯೋಗಿಕ ಮನೋಭಾವನೆಯನ್ನು ಹೊಂದಿದೆ, (ಆಂಡ್ರಿಯಾ ಮೆಕ್ನಿಕೊಲ್ ಮತ್ತು ಜೆಫ್ರಿ ಎ. ನೆಲ್ಸನ್, 1994). ಅಕ್ಷರಗಳನ್ನು ನೇರವಾಗಿ ಬರೆಯುವವರಲ್ಲಿ ಹೆಚ್ಚು ಉಭಯಮುಖಿ ವ್ಯಕ್ತಿತ್ವ ಹೊಂದಿರುತ್ತಾರೆ ಮತ್ತು ಭಾವ ಸಮತೋಲನ ವ್ಯಕ್ತಿತ್ವದವರಾಗಿರುತ್ತಾರೆ. ಇದರ ಋಣಾತ್ಮಕ ಗುಣಗಳೆಂದರೆ ನಿರಾಸಕ್ತಿ, ಸಹಾನುಭೂತಿಯ ಕೊರತೆ ಮತ್ತು ಸೋಮಾರಿತನ, (ಜಾನ್ ಆಂಟೊನಿ, 2008).

### ಬಲಗಡೆಗೆ ಓರೆಯಾಗಿ ಬರೆಯುವುದು (Right Slant writing)



ಬಲಗಡೆಗೆ ಬಾಗಿದಂತೆ ಬರೆಯುವುದು ಭವಿಷ್ಯತ್ ಕಾಲವನ್ನು ಸೂಚಿಸುತ್ತದೆ. ಇವರು ಬಹಿರ್ಮುಖಿ ವ್ಯಕ್ತಿತ್ವದವರಾಗಿರುತ್ತಾರೆ. ಇವರು ಸಹಾನುಭೂತಿ, ಭಾವನಾತ್ಮಕ ಅಭಿವ್ಯಕ್ತಿ ಗುಣವನ್ನು ಹೊಂದಿದ್ದು, ಇತರರ ಜೊತೆ ಬೆರೆತು ಸ್ನೇಹಮಹಿಯಾಗಿರುತ್ತಾರೆ. ಕೆಲವೊಮ್ಮೆ ದುಡುಕುತನದ ಸ್ವಭಾವ ಹೊಂದಿರುವವರಾಗಿರುತ್ತಾರೆ. ಪರೋಪಕಾರಿ, ಸಹಾನುಭೂತಿ, ಅನುಕಂಪ, ಆಸಕ್ತಿ ಮತ್ತು ಉತ್ಸುಕತೆಯ ಗುಣವನ್ನು ಹೊಂದಿರುತ್ತಾರೆ. ಇವರ ಋಣಾತ್ಮಕ ಗುಣಗಳೆಂದರೆ ಅವಸರ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದು, ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತದೆ, (ಜಾನ್ ಆಂಟೊನಿ, 2008).

### ಎಡಭಾಗಕ್ಕೆ ಓರೆಯಾಗಿ ಬರೆಯುವುದು (Left Slant writing)



ಎಡಗಡೆಗೆ ಓರೆಯಾಗಿ ಬರೆಯುವುದು ಭೂತಕಾಲವನ್ನು ಸೂಚಿಸುತ್ತದೆ. ಇವರು ಅಂತರ್ಮುಖಿ ವ್ಯಕ್ತಿತ್ವ, ಪ್ರತಿಭಟಿಸುವ ಸ್ವಭಾವ ಹೊಂದಿರುತ್ತಾರೆ. ಎಲ್ಲರೊಟ್ಟಿಗೆ ಪಾಲ್ಗೊಳ್ಳುವಿಕೆಯಲ್ಲಿ ಕೊರತೆ, ಆತ್ಮಪ್ರತಿಷ್ಠೆ ಹೊಂದಿರುತ್ತಾರೆ (ಕರೆನ್ ಅಹಮದ್ ಮತ್ತು ಮೇರಿ ಎಸ್. ರುಜ್, 1980). ಆತ್ಮಾವಲೋಕನ, ಸ್ವಯಂ ತ್ಯಾಗದ ವ್ಯಕ್ತಿತ್ವ ಇವರಲ್ಲಿ ಕಂಡು ಬರುತ್ತದೆ, ಮತ್ತು ಋಣಾತ್ಮಕ ಗುಣಗಳೆಂದರೆ ಭಾವನಾತ್ಮಕ ಅಪ್ರಬುದ್ಧತೆ, ಅಪ್ರಾಮಾಣಿಕತೆ, ಜವಾಬ್ದಾರಿಯಿಂದ ಹಿಂದೆ ಸರಿಯುವ ಗುಣದವರಾಗಿರುತ್ತಾರೆ. ಬಲಗಡೆ ಓರೆಯಾಗಿ ಬರೆಯುವುದರ ವಿರುದ್ಧವಾದ ಗುಣವನ್ನು ಹೊಂದಿರುತ್ತಾರೆ. (ಜಾನ್ ಆಂಟೊನಿ 2008, ಆಂಡ್ರಿಯಾ ಮೆಕ್ನಿಕೊಲ್ ಮತ್ತು ಜೆಫ್ರಿ ನೆಲ್ಸನ್, 1994). ಅಕ್ಷರಗಳನ್ನು ಎಡಭಾಗಕ್ಕೆ ಓರೆಯಾಗಿ ಬರೆಯುವವರಲ್ಲಿ ಕೆಲವರು ಅಂತರ್ಮುಖಿ ವ್ಯಕ್ತಿತ್ವದವರು, ಮತ್ತೆ ಕೆಲವರು ಬಹಿರ್ಮುಖಿ ವ್ಯಕ್ತಿತ್ವ ಹೊಂದಿರುತ್ತಾರೆ.

### 2. ಬರವಣಿಗೆಯ ಸಾಲಿನ ನಡುವಿನ ಅಂತರ (Spacing between lines)

ಕೈಬರಹ ಸ್ಪಷ್ಟವಾಗಿ ಅರ್ಥವಾಗಬೇಕಾದರೆ ಬರಹದ ಪ್ರತಿಯೊಂದು ಸಾಲುಗಳಿಗೂ ಔಚಿತ್ಯಪೂರ್ಣ ಸ್ಥಳಾವಕಾಶ ಬಿಟ್ಟು ಬರೆದಿರಬೇಕು. ಆಗ ಅದು ಉತ್ತಮ ಬರಹವಾಗಲು ಸಾಧ್ಯ. ಹೀಗೆ ಬರೆದ ಬರವಣಿಗೆ ಸುಂದರವಾಗಿ ಕಂಡು ಓದುಗರಲ್ಲಿ ಆಕರ್ಷಣೆಯನ್ನು ಉಂಟುಮಾಡುತ್ತದೆ. ಪ್ರಸ್ತುತ ಬರವಣಿಗೆಯ ವಿಶ್ಲೇಷಣೆಗೆ ಸಮಾನಾಂತರವಾದ ಸಾಲುಗಳ ಬರಹ, ಸಾಲುಗಳ ನಡುವೆ ಹೆಚ್ಚು ಅಂತರದ ಬರಹ ಮತ್ತು ಸಾಲುಗಳ ನಡುವೆ ಅಂತರವಿಲ್ಲದೆ ಬರೆಯುವ ಬರಹ ಎಂದು ವಿಂಗಡಿಸಲಾಗಿದೆ.ಈ ಮೂರು ಶೈಲಿಯಲ್ಲಿ ಬರೆಯುವವರ ವ್ಯಕ್ತಿತ್ವದ ಗುಣಗಳನ್ನು ಇಲ್ಲಿ ಚರ್ಚಿಸಲಾಗಿದೆ. ಬರವಣಿಗೆಯ ಸಾಲಿನ ಮಧ್ಯದ ಅಂತರ ವ್ಯಕ್ತಿ ಇತರರ ಬಗ್ಗೆ ಹೊಂದಿರುವ ಭಾವನೆ, ಸಾಮಾಜಿಕ ವರ್ತನೆ ಸೂಚಿಸುತ್ತದೆ. (ಆಂಡ್ರಿಯಾ ಮೆಕ್ನಿಕೊಲ್ ಮತ್ತು ಜೆಫ್ರಿ ನೆಲ್ಸನ್ 1994, ಐರಿನ್ ಮಾರ್ಕ್ಯೂಸ್, 1971), ಇತರರೊಂದಿಗೆ ಆತ್ಮೀಯತೆ, ಗೊಂದಲತೆ, ಬುದ್ಧಿಶಕ್ತಿ, ಉತ್ಸಾಹ, ಉದಾರತೆ ಮತ್ತು ಮುಕ್ತಮನಸ್ಸಿಸ ಗುಣಗಳನ್ನು ಸೂಚಿಸುತ್ತದೆ, (ಜಾನ್ ಆಂಟೊನಿ 2008).

### ಅ. ಸ್ಥಿರ ಅಂತರದ ಬರಹ (Stable Spacing Writing)



ಕೈಬರಹದಲ್ಲಿ ಸಾಲುಗಳ ಮಧ್ಯೆ ಸ್ಥಿರವಾದ ಅಂತರದಲ್ಲಿ ಬರೆಯುವವರು ಸಾಮಾಜಿಕ ಪರಿಪಕ್ವತೆ, ಬುದ್ಧಿಶಕ್ತಿ, ಆಂತರಿಕ ಸಂಘಟನೆಯ ಗುಣ ಹೊಂದಿದ್ದು, ಇತರರೊಂದಿಗೆ ಮೃದುವಾಗಿ ಮತ್ತು ವಸ್ತುನಿಷ್ಠವಾಗಿ ಎದುರಿಸುವ ಸಾಮರ್ಥ್ಯ ಹೊಂದಿರುತ್ತಾರೆ, (ಕರೆನ್ ಅಹಮದ್ ಮತ್ತು ಮೇರಿ ಎಸ್. ರುಜ್, 1980). ಈ ಬರಹವು ಸಾಮಾನ್ಯ ವ್ಯಕ್ತಿಯಲ್ಲಿ ಹೆಚ್ಚು ಆಲೋಚನೆ ಅಥವಾ ಉಪಾಯದ ಗುಣ ಹೊಂದಿರುವುದನ್ನು ತಿಳಿಸುತ್ತದೆ. (ಆಂಡ್ರಿಯಾ ಮೆಕ್ನಿಕೊಲ್ ಮತ್ತು ಜೆಫ್ರಿ ನೆಲ್ಸನ್, 1994). ಬರವಣಿಗೆಯ ಸಾಲು ಸಾಲುಗಳ ಮಧ್ಯೆಸ್ಥಿರ ಅಂತರದಲ್ಲಿ ಬರೆಯುವವರು ಹೆಚ್ಚು ಮಂದಿ ಉಭಯ ಮುಖಿ ವ್ಯಕ್ತಿತ್ವ ಹೊಂದಿದ್ದು, ಇವರಲ್ಲಿ ಭಾವ ಸಮತೋಲನ ವ್ಯಕ್ತಿತ್ವದ ಮಂದಿಯೂ ಸಹ ಇರುತ್ತಾರೆ.

### ಹೆಚ್ಚು ಅಂತರದ ಬರಹ (Wide spacing writing)



ಕೈಬರಹ ಬರೆಯುವಾಗ ಸಾಲುಗಳ ಮಧ್ಯೆ ಹೆಚ್ಚು ಸ್ಥಳವನ್ನು ಬಿಟ್ಟು ಬರೆಯುವವರು ಉತ್ತಮ ಸದಭಿರುಚಿ ಮತ್ತು ಸ್ವಾತಂತ್ರ್ಯ ಗುಣಗಳನ್ನು ಸೂಚಿಸುತ್ತದೆ, (ಜಾನ್ ಆಂಟೊನಿ, 2008). ಇವರು ಅತಿಯಾದ ಮತ್ತು ಉತ್ಪ್ರೇಕ್ಷಿತ ಮನೋಭಾವ ಹೊಂದಿರುವರು, (ಕರೆನ್ ಅಹಮದ್ ಮತ್ತು ಮೇರಿ ಎಸ್. ರುಜ್, 1980). ಬರೆಯುವಾಗ ಸಾಲು ಸಾಲುಗಳ ಮಧ್ಯೆ ಹೆಚ್ಚು ಅಂತರದಲ್ಲಿ ಬರೆಯುವವರು ಹೆಚ್ಚು ಉಭಯಮುಖಿ ವ್ಯಕ್ತಿತ್ವ ಹೊಂದಿದವರಾಗಿದ್ದು, ಸ್ವಲ್ಪ ಮಂದಿ ಬಹಿರ್ಮುಖಿ ವ್ಯಕ್ತಿತ್ವ ಹೊಂದಿದವರಾಗಿರುತ್ತಾರೆ. ಋಣಾತ್ಮಕ ಗುಣಗಳೆಂದರೆ ಪ್ರತ್ಯೇಕತಾ ಮನೋಭಾವ, ಒಂಟಿತನ, ಒಣಜಂಬ ಮತ್ತು ಹೆಮ್ಮೆ, (ಜಾನ್ ಆಂಟೊನಿ, 2008).

### ಅಂತರವಿಲ್ಲದ ಬರಹ (Narrow spacing writing)

ಕೈಬರಹ ಬರೆಯುವಾಗ ಸಾಲುಗಳ ಮಧ್ಯೆ ಅಂತರವಿಲ್ಲದೆ ಬರೆಯುವವರು ಅನುಕಂಪ ಮತ್ತು ಉದ್ವೇಗ ಗುಣವನ್ನು ಹೊಂದಿದ್ದು ಹಾಗೂ ಋಣಾತ್ಮಕ ಗುಣಗಳೆಂದರೆ ಕಡಿಮೆ ಸದಭಿರುಚಿ ಹೊಂದಿದವರಾಗಿದ್ದು, ಇವರು ಒಂಟಿಯಾಗಿರುತ್ತಾರೆ, (ಜಾನ್ ಆಂಟೊನಿ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712



2008). ಇವರು ಬೇರೆಯವರಮೇಲೆ ಅವಲಂಬಿತವಾಗಿದ್ದು, ಭಯ ಹೊಂದಿದವರಾಗಿರುತ್ತಾರೆ, ಬೇರೆಯವರಿಂದ ಒತ್ತಡವನ್ನು ಅನುಭವಿಸುತ್ತಾರೆ. ಸಾಲು ಸಾಲುಗಳ ನಡುವೆ ಅಂತರವಿಲ್ಲದೆ ಬರೆಯುವವರಲ್ಲಿ ಉಭಯಮುಖಿ ವ್ಯಕ್ತಿತ್ವದವರು ಹಾಗೂ ಅಂತರ್ಮುಖಿ ವ್ಯಕ್ತಿತ್ವದ ಎರಡೂ ಗುಂಪಿನವರು ಕಂಡು ಬರುತ್ತಾರೆ,

ಈ ಲೇಖನದ ಸಹಾಯದಿಂದ ಈ ಹಿಂದೆ ಯಾವಾಗಲೋ ಬರೆದಂತಹ ನಮ್ಮ ಕೈಬರಹದ ಮಾದರಿಯನ್ನು ತೆಗೆದುಕೊಂಡು, ನಾವು ಯಾವ ಶೈಲಿಯ ಕೈಬರಹಗಾರರಾಗಿದ್ದೇವೆ, ನಮ್ಮ ಕೈಬರಹ ಯಾವ ವಿಧಾನದಲ್ಲಿದೆ ಎಂಬುದನ್ನು ವಿಂಗಡಣೆ ಮಾಡಿಕೊಂಡು, ಆ ಗುಂಪಿನ ವ್ಯಕ್ತಿತ್ವಗಳ ವ್ಯಕ್ತಿತ್ವ ಗುಣಲಕ್ಷಣಗಳೇನು ಎಂಬುದನ್ನು ತಿಳಿಯಬಹುದಾಗಿದೆ. ಕೈಬರವಣಿಗೆ ವಿಶ್ಲೇಷಣೆಯು ಮೂಲಕ ಇತರರನ್ನು ಕೂಡ ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ಕುಟುಂಬದಲ್ಲಿ ಇತರರನ್ನು, ಸ್ನೇಹಿತರ ಆಯ್ಕೆ, ಅವರನ್ನು ಅರ್ಥಮಾಡಿಕೊಳ್ಳುವಿಕೆಯಂತಹ ಈ ವಿಧಾನದ ಮೂಲಕ ಶೀಘ್ರವಾಗಿ ತಿಳಿದುಕೊಳ್ಳಬಹುದಾದ ಸಾಧನವಾಗಿದೆ. ಇತ್ತೀಚಿಗೆ ಕೈಬರಹ ವಿಶ್ಲೇಷಣೆಯು ಒಂದು ಚಿಕಿತ್ಸಕ ಶಾಸ್ತ್ರವಾಗಿ (ಗ್ರಾಫೋತೆರಪಿ) ಬಳಕೆಯಾಗುತ್ತಿದೆ. ಅಪರಾಧ ಪತ್ತೆ ಹಚ್ಚಲು ಸಹ ಕೈಬರಹದ ಮಾದರಿಯನ್ನು ಹಾಗೂ ವಿಶ್ಲೇಷಣೆಯನ್ನು ಬಳಸಲಾಗುತ್ತದೆ. ಕೈಬರಹವು ಶೈಕ್ಷಣಿಕವಾಗಿ ವಿದ್ಯಾರ್ಥಿಗಳ ಕಲಿಕೆಯ ಮೇಲೆ ವ್ಯಕ್ತಿತ್ವ, ಬುದ್ಧಿಶಕ್ತಿ, ಸಂವೇಗಗಳು, ಸೃಜನಶೀಲತೆ, ಹಾಗೂ ಸಾಧನಾ ಅಭಿಪ್ರೇರಣೆ ಅಂಶಗಳು ಪ್ರಮುಖವಾಗಿ ಪಾತ್ರ ವಹಿಸುತ್ತವೆ. ಶಿಕ್ಷಕರು ಮಕ್ಕಳ ಕೈಬರಹವನ್ನು ವಿಶ್ಲೇಷಿಸುವ ಮೂಲಕ ಅವರ ವ್ಯಕ್ತಿತ್ವ, ಆಸಕ್ತಿ, ಧನಾತ್ಮಕ ಹಾಗೂ ಋಣಾತ್ಮಕ ಲಕ್ಷಣಗಳೇನು ಎಂಬುದನ್ನು ಪತ್ತೆಹಚ್ಚಿ, ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಬಹುದಾಗಿದೆ.ಕೈಬರಹ ವಿಶ್ಲೇಷಣೆಯು ನಮ್ಮ ಕೈಬರಹದ ಸುಧಾರಣೆ, ಶಿಸ್ತು, ಏಕಾಗ್ರತೆ ಹಾಗೂ ಮಾನಸಿಕ ಸಿದ್ಧತೆಗಳನ್ನು ಹೆಚ್ಚಿಸುತ್ತದೆ. ಕೈಬರಹವನ್ನು ವಿಶ್ಲೇಸುವ ಶಿಕ್ಷಕರು ವಿದ್ಯಾರ್ಥಿಗಳ ಮನೋವೈಜ್ಞಾನಿಕ ಹಾಗೂ ಶೈಕ್ಷಣಿಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

## ಆಕರ ಗ್ರಂಥಗಳು


- **ಗಿರೀಶ್ ಟಿ. (2019) :** ಕನ್ನಡ ಕೈ ಬರವಣಿಗೆಯ ಮೂಲಕ ವ್ಯಕ್ತಿತ್ವದ ವಿಶ್ಲೇಷಣೆ, ಶಿಕ್ಷಣ ಸೌಧ, ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ, Vol : 9, ISSUE - 9, pp - 7 & 34.
- **ಕನ್ನಡ ಶೈಲಿ ಕೈಪಿಡಿ (2006) :** ಕನ್ನಡ ವಿಶ್ವದ್ಯಾಲಯ, ಹಂಪಿ ಮತ್ತು ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು, ಹಂಪಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- **ನಾರಾಯಣ ಕೆ. ವಿ. (2007) :** ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ಭಾಷೆ–1, ಹಂಪಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- **ಯಂಡಮೂರಿ ವೀರೇಂದ್ರನಾಥ್ (2012) :** ಗ್ರಾಫಾಲಜಿ, ಕನ್ನಡಕ್ಕೆ ರಾಜಾ ಚೆಂಡೂರ್, ಬೆಂಗಳೂರು ಸುಧಾ ಎಂಟರ್ ಪ್ರೈಸಸ್.
- **Andrea McNichol and Jeffrey A Nelson (1994) :** Handwriting Analysis: Putting It to Work for You, McGraw-Hill Publisher.
- **Girisha T. & Dange J. K. (2017) :** Development of Kannada Handwriting Analysis Scale, Asian Journal of Multidimensional Research, pp.15-26.
- **Girisha T, Dange, J. K., & Nagaraj S.H. (2016) :** Teaching Handwriting Analysis in Teacher Training programme. Aayushi International Interdisciplinary Research Journal, pp.76-80.


■■

– 24 ನೇ ಪುಟದಿಂದ ಮುಂದುವರೆದುದು


8. ಬಿ. ಗೋಪಾಲ್ (2010) ಸಮಾಜ ಪರಿವರ್ತನಕಾರ ಮಹಾತ್ಮ ಜ್ಯೋತಿ ಬಾಫುಲೆ, ಪುಟ21–26.
9. Gail Omvedt, Dalit's and the Democratic Revolution, SAGE Publication, 1994, Pp205.
10. ಕೆ. ಸದಾಶಿವ, ಮಧ್ಯಕಾಲೀನ ಭಾರತದ ಇತಿಹಾಸ, ಪ್ರಿಯದರ್ಶಿನಿ ಪ್ರಕಾಶನ, ಪುಟ616–617.
11. Lelah Duskin, The Non-Brahmin Movement in Princely Mysore, University of Pennsylvania, Ph.D., 1974, Pp41.
12. Bjorn Hettne, The Political Economy of Indirect Rule Mysore 1881-1947, Ambika Publications,1977, Pp34.
13. Ibid……., Pp31-32.
14. Ibid……., Pp49-50, 73.
15. Ibid……., Pp69.
16. Lelah Duskin, The Non-Brahmin Movement in Princely Mysore, University of Pennsylvania, Ph.D., 1974, Pp54
17. ಸೂರ್ಯನಾಥ್ ಕಾಮತ್, ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಎಂ.ಸಿ.ಸಿ ಪಬ್ಲಿಕೇಷನ್, ಬೆಂಗಳೂರು, 1973, ಪುಟ272.
18. ಸೂರ್ಯನಾಥ್ ಕಾಮತ್ (1997), ತ್ಯಾಗವೀರ ಕಾರ್ನಾಡ್ ಸದಾಶಿವರಾಯ, ಪುಟ 30.
19. Lelah Duskin, (1974), The Non-Brahmin Movement in Princely Mysore, University of Pennsylvania, Ph.D., Pp95.
20. ಎಸ್. ಚಂದ್ರಶೇಖರ್ (2001), ಆಧುನಿಕ ಕರ್ನಾಟಕದ ಆಂದೋಲನಗಳು, ನಮ್ಮ ಪ್ರಕಾಶನ, ಪುಟ42.
21. Lelah Duskin (1974), The Non-Brahmin Movement in Princely Mysore, University of Pennsylvania, Ph.D., Pp95.
22. ಲಕ್ಷ್ಮಣ ತೆಲಗಾವಿ (1999), ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು, ಏಕೀಕರಣೋತ್ತರ ಕರ್ನಾಟಕ, ಸಂ.5, ಪುಟ33–35.
23. ಅಭಿರುಚಿ ಗಣೇಶ್, ತಿಂಗಳು ಕನ್ನಡ ಮಾಸಿಕ, ಲೇಖನ–ನಾಲ್ವಡಿ ಕೃಷ್ಣರಾಜ ಭೂಪ ಮನೆಮನೆ ದೀಪ, ಜೂನ್, 2010, ಪುಟ37.
24. ಎಸ್. ಚಂದ್ರಶೇಖರ್, ಸಾಮಾಜಿಕ ಹಿನ್ನಲೆಯಲ್ಲಿ ಮೈಸೂರು ರಾಜಕೀಯ ಕೆಲವು ಒಳನೋಟಗಳು (1881–1940), 1983, ಪುಟ46.
25. Bjorn Hettne (1977), The Political Economy of Indirect Rule Mysore 1881-1947, Ambika Publications, Pp71.
26. Lelah Duskin (1974), The Non-Brahmin Movement in Princely Mysore, University of Pennsylvania, Ph.D., Pp118.
27. Gail Omvedt (1994), Dalit's and the DemocrAtic Revolution, SAGE Publication, Pp127.
28. ದಯಾನಂದ ಮಾನೆ (2007), ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿಗಳು, ಡಾ. ಬಿ.ಆರ್. ಅಂಬೇಡ್ಕರ್ ರಿಸರ್ಚ್ ಅಕಾಡೆಮಿ ಪ್ರಕಾಶನ, ಪುಟ63–64.
29. Bjorn Hettne (1977), The Political Economy of Indirect Rule Mysore 1881-1947, Ambika Publications, Pp151-152.
30. Gail Omvedt (1994), Dalit's and the DemocrAtic Revolution, SAGE Publication, Pp129.
31. Bjorn Hettne (1977), The Political Economy of Indirect Rule Mysore 1881-1947, Ambika Publications, Pp157.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸಂಸ್ಕೃತ – ಸಂಸ್ಕೃತಿಯ ಪರಿಕಲ್ಪನಾತ್ಮಕ ಚರ್ಚೆ

✍ **ಶ್ರೀ ಧರ್ಮಪಾಲನಾಥ ಸ್ವಾಮೀಜಿ,** ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾಮಠ, ಮಂಗಳೂರು ಶಾಖೆ, ಕಾವೂರು ಮಂಗಳೂರು

ಮಾನವನು ವಿಕಾಸ ಹೊಂದುತ್ತಾ ನಾಗರಿಕತೆಯು ಬದಲಾವಣೆ ಪರ್ವವನ್ನು ಕಾಣುತ್ತಾ ಸಾಗುತ್ತದೆ. ಹೊಸ ಮನ್ವಂತರದ ಭಾವನೆಗಳು ನವಚೈತನ್ಯವನ್ನು ವೃದ್ಧಿಸುತ್ತವೆ. ಅದರ ನಡುವೆ ವ್ಯಕ್ತಿಯ ಬೆಳವಣಿಗೆಗಳು ಸಾಗಬೇಕಾಗುತ್ತದೆ. ಆಧುನಿಕ ಭರಾಟೆಯಲ್ಲಿ ತನ್ನ ಸ್ವಚಿಂತನೆಗಳನ್ನು ಮರೆಯುತ್ತಾ ಸಾಗುತ್ತಾನೆ. ಅನಾಗರಿಕತೆ ಸ್ವಂತ ಮನೆಯಿಂದಲೇ ಆರಂಭಿಸಲು ತೊಡಗುತ್ತದೆ. ಅದರಿಂದ ತನ್ನ ಮನೆ, ಊರು, ರಾಜ್ಯ, ದೇಶಕ್ಕೆ ಮಾರಕವಾಗುತ್ತದೆ. ಇದನ್ನು ಸರಿಪಡಿಸುವ ಹೊಣೆ ಪ್ರಜ್ಞಾವಂತ ಸಮಾಜಕ್ಕೆ ಇರುತ್ತದೆ. ಆ ನಿಟ್ಟಿನಲ್ಲಿ ಸರಿಯಾದ ಜ್ಞಾನದ ಬೆಳಕು ಬೇಕಾಗುತ್ತದೆ. ಆ ದೃಷ್ಟಿಯಿಂದ ಸಂಸ್ಕೃತ–ಸಂಸ್ಕೃತಿ ಮಾನವನ ವಿಕಾಸದ ಮೇಲೆ ಬೀರುವ ಪರಿಣಾಮವನ್ನುಂಟುಮಾಡುತ್ತದೆ. ಎಳವೆಯಲ್ಲಿಯೇ ಸಂಸ್ಕಾರದ ಜೊತೆಜೊತೆಗೆ ಸಂಸ್ಕೃತವನ್ನು ಕಲಿಸಬೇಕು. ಅದರಿಂದ ನೋಡುವ, ಮಾಡುವ, ಕೇಳುವ, ಗೌರವಿಸುವ ಸಾವದಾನದ ಪ್ರಜ್ಞೆ ಜಾಗೃತವಾಗುತ್ತದೆ. ಇದರ ತರುವಾಯ, ವ್ಯವಹರಿಸುವ ಬಗೆ, ನಡೆ, ನುಡಿ, ರೀತಿ, ನೀತಿಗಳು ಬದಲಾಗುತ್ತಾ ಸಂವರ್ಧನೆಯತ್ತ ವಿಕಾಸ ಹೊಂದುತ್ತಾ ಸಾಗುತ್ತದೆ. ಇದರ ವಿಸ್ತೃತವಾದ ಚರ್ಚೆ ಅಗತ್ಯವಾಗಿದೆ. ಸಂಸ್ಕೃತ–ಸಂಸ್ಕೃತಿ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಅದರ ಅಂತರ್ಹಿತವನ್ನು ಅರುಹಿಕೊಂಡಾಗ ಪ್ರಜ್ಞಾವಂತ ನಾಗರಿಕ ಸಮಾಜ ಕಾಣಲು ಸಾಧ್ಯ.

ತನ್ನ ಅಸ್ತಿತ್ವ ಹಾಗೂ ಸಾರ್ವಭೌಮತ್ವವನ್ನು ಉಳಿಸಿಕೊಂಡು ಇಂದಿಗೂ ಮೇಲ್‌ಸ್ಥರದಲ್ಲಿರುವ ಪೂಜ್ಯನೀಯ ಭಾಷೆ ಎಂದರೆ ಅದುವೇ ಸಂಸ್ಕೃತ. ಇದು ಚಿಂತಕರು, ವಿಮರ್ಶಕರು, ದಾರ್ಶನಿಕರ ಅಭಿಪ್ರಾಯದಂತೆ ಸಂಸ್ಕೃತವು ಅನಾದಿಯೆಂದೂ, ಅಪೌರುಷೇಯವೆಂದು ಹಿಂದುಗಳು ಒಪ್ಪಿಕೊಂಡು ಬಂದವರು. ವೇದವು ಸಂಸ್ಕೃತವಾಣಿಯಲ್ಲಿದೆ ಪರಂತು ಸಂಸ್ಕೃತವು ಅನಾದಿಯಾದ ಭಾಷೆಯೇ ಆಗುವುದು ಎಂಬುದು ಭಾಷಾಶಾಸ್ತ್ರಜ್ಞರ ಮತ್ತು ವಿದ್ವಾಂಸರ ಅಭಿಮತವಾಗಿದೆ. "ಸಂಸ್ಕೃತ" ಎಂಬ ಶಬ್ದದಲ್ಲೇ ಗುಣವಿಶೇಷವಿದೆ. "ಸಂಸ್ಕೃತ" ಎಂಬ ಶಬ್ದಕ್ಕೆ ಸಂಸ್ಕರಿಸಲ್ಪಟ್ಟ, ಪರಿಶುದ್ಧವಾದ, ಸಂಸ್ಕಾರದಿಂದ ಕೂಡಿದ ಎಂಬರ್ಥ. ಸುರಭಾಷಾ, ಸುರಭಾರತೀ, ಬ್ರಾಹ್ಮೀಭಾಷಾ, ನೀರ್ವಾಣವಾಣೀ, ದೇವಭಾಷೆ ಎಂದು ಕರೆಯಲ್ಪಡುವ ಸಂಸ್ಕೃತ ಭಾಷೆಯು ಸಂಸ್ಕೃತಿಯನ್ನು ಪ್ರತಿಬಿಂಬಿಸುವ, ಪ್ರಶಸ್ತವಾದ ಎಂಬ ಹತ್ತು ಹಲವಾರು ವ್ಯಾಖ್ಯೆಗಳಿದ್ದು ಸುಶಿಕ್ಷಿತರ, ಸಂಸ್ಕಾರವಂತರ ಭಾಷೆ ಎಂದು ಪರಿಗಣಿಸಲ್ಪಟ್ಟಿದೆ. "ಸಂಸ್ಕೃತ" ಎಂಬ ಪದಕ್ಕೆ ಇನ್ನೊಂದು ಪದ ಸಾಟಿಯೇ ಇಲ್ಲ. ಸಂಸ್ಕೃತ ಸಂಸ್ಕೃತವಾಗಿಯೇ ಜೀವಂತವಾಗಿ ಅನಾದಿಯಾಗಿ ಉಳಿದಿದೆ. ಎಲ್ಲ ಭಾಷೆಗಳ ಉಗಮಸ್ಥಾನ, ಮಗು ಜನನಕ್ಕೆ ತಾಯಿಯ ಗರ್ಭವೇ ಮೂಲಾಧಾರವಾಗಿದೆಯೋ ಹಾಗೆಯೇ ಎಲ್ಲಾ ಭಾಷೆಗಳ ತಾಯಿಬೇರು. ಮರ ಬೆಳೆಯುತ್ತಾ, ಬೆಳೆಯುತ್ತಾ ರೆಂಬೆಕೊಂಬೆಗಳು ಅಧಿಕವಾಗುತ್ತಾ ಹೋಗುತ್ತದೆ, ಹಾಗೆಯೇ ಸಂಸ್ಕೃತ ಭಾಷೆಯಿಂದ ಹಲವು ಮಜಲುಗಳು ಬೆಳೆಯುತ್ತ ಕವಲು ಒಡೆಯುತ್ತಾ ಬದಲಾವಣೆ ಕಾಣಲು ತೊಡಗಿದವು. ಯಾವುದು ಒಳ್ಳೆಯದೋ ಅದನ್ನು ಸರ್ವರೂ ಒಪ್ಪಿಕೊಳ್ಳುತ್ತಾ ಹೋಗುತ್ತಾರೆ. ಆದ್ದರಿಂದಲೇ ದೇವವಾಣೀ, ಅಮರವಾಣೀ ಇತ್ಯಾದಿ ಹೆಸರುಗಳಿಂದ ಕೂಡಿರುವ ಈ ಭಾಷೆ ಭಾರತೀಯ ಸಂಸ್ಕೃತಿಯ ಔಚಿತ್ಯವನ್ನು ಸಾರುತ್ತಿದೆ. ಸಂಸ್ಕೃತವು ಪುರಾತನ ಹಾಗೂ ಶಾಸ್ತ್ರೀಯ ಭಾಷೆಯಾಗಿದೆ. ಭಾರತೀಯ ಸಂಪ್ರದಾಯದ ಪ್ರಕಾರ ಸಂಸ್ಕೃತ ಭಾಷೆಗೆ ಆರಂಭವಿಲ್ಲ ಮತ್ತು ಅಂತ್ಯವಿಲ್ಲ, ಕಾರಣ ಇದು ಶಾಶ್ವತವಾಗಿದೆ. ಇದು ದೇವರಿಂದ ಜನ್ಯವಾದ ಭಾಷೆಯಾಗಿದೆ. ಮೊದಲು ವೇದಗಳಲ್ಲಿ ಬಳಸಲಾಗುತ್ತಿತ್ತು, ನಂತರದ ದಿನಗಳಲ್ಲಿ ಇತರ ಕ್ಷೇತ್ರಗಳಲ್ಲಿ ತನ್ನ ಬಾಹುಳ್ಯವನ್ನು ವಿಸ್ತರಿಸುತ್ತಾ ಅಭಿವ್ಯಕ್ತಿಯ ಸಾಧನವಾಗಿ ಬೆಳಗಿತು.

ಜನರ ಭಾಷೆ, ಭಾವನೆ, ಆಯಾಪ್ರಾಂತ್ಯಗಳಲ್ಲಿ ತನ್ನದೇ ಆದ ಅಸ್ತಿತ್ವವನ್ನುಳಿಸಿಕೊಂಡಿದೆ ಅಷ್ಟು ಮಾತ್ರವಲ್ಲ ಆಚಾರ, ವಿಚಾರಗಳ ಆಚರಣೆಯು ಅನೂಚಾನವಾಗಿ ಬೆಳೆದುಕೊಂಡು ಸಮಷ್ಟಿಯಂತೆ ಪ್ರತಿನಿಧಿತವಾಗಿರುವುದೆ ಸಂಸ್ಕೃತಿ. ಜ್ಞಾನವಾಹಿನಿಯಾಗಿ, ಜೀವನದ ಸಂಜೀವಿನಿಯಾಗಿ ಸಂಸ್ಕೃತಿಯು ನಮ್ಮೊಂದಿಗಿದೆ. 'ಸಂಸ್ಕೃತಿ' ಎಂಬುವುದಕ್ಕೆ ಅನೇಕ ವ್ಯಾಖ್ಯೆ, ವಿಮರ್ಶೆಗಳು, ಸಂಶೋಧನಾ ಪ್ರಬಂಧಗಳು ತಮ್ಮದೇ ಆದ ದೃಷ್ಟಿಕೋನದಿಂದ ಮಂಡಿಸಿದ್ದಾರೆ. ಪ್ರಾಚೀನಕಾಲದಲ್ಲಿ ಸಂಸ್ಕಾರಗಳು ಮಾತ್ರವಿದ್ದವು ಕಾಲಕ್ರಮೇಣ ಸಂಸ್ಕಾರವು ಸಂಸ್ಕೃತಿಯಾಗಿ ಪರಿವರ್ತನೆಗೊಂಡಿತು. ಇತ್ತೀಚೆಗೆ ಸಂಸ್ಕೃತಿಗೆ culture ಎಂಬ ಪದಬಳಕೆ ಸರ್ವೇಸಾಮಾನ್ಯವಾಗಿ ವ್ಯಾಪಿಸಿಕೊಂಡಿದೆ. ಇಂಗ್ಲಿಷ್‌ನ ಈ ಪದವು 'ಕೊಲರೆ' ಎಂಬ ಲ್ಯಾಟಿನ್ ಶಬ್ದದಿಂದ ಬಂದಿದೆ. ಇದರ ಅರ್ಥ "ಕೃಷಿ ಮಾಡು" ಎಂದು ಕೃಷಿ ಎಂಬರ್ಥಕ್ಕೆ ಅನೇಕ ಅರ್ಥಗಳನ್ನು ತಿಳಿಯಬಹುದು. "ಕೃಷಿ" ಶಬ್ದಕ್ಕೆ "ಸಾಗುವಳಿ", "ಬೇಸಾಯ", "ಪ್ರಯತ್ನ" ಎಂಬರ್ಥವಿದೆ. ಬದುಕು ಹಸನಾಗಬೇಕಾದರೆ ಬೇಸಾಯ, ಪ್ರಯತ್ನ ಬಹು ಮುಖ್ಯ ಪಾತ್ರವಹಿಸುತ್ತವೆ. ಇದನ್ನು ಲೌಕಿಕ ಮತ್ತು ಪಾರಮಾರ್ಥಿಕ ಎರಡಕ್ಕೂ ಬಳಸಬಹುದು. ರೈತರು ಮತ್ತು ಇತರೇ ಸಾಮಾನ್ಯರು ಶ್ರಮಸಂಸ್ಕೃತಿಯಿಂದ ಬೇಸಾಯ ಮಾಡುತ್ತಾ ಪ್ರಯತ್ನಶೀಲರಾಗಿ ಯಶಸ್ಸು ಕಾಣುವರು. ಋಷಿಸಂಸ್ಕೃತಿಯಿಂದ ಜ್ಞಾನ ಮಾರ್ಗ ಹಾಗೂ ಸಂಸ್ಕಾರಶಿಕ್ಷಣವನ್ನು ಸಾಧನಾಮಾರ್ಗದಲ್ಲಿ ಕಂಡುಕೊಳ್ಳುವ ಜೀವನದ ಮೂಲ ಉದ್ದೇಶವನ್ನರಿತು ಈ ನಿಗೂಢಾರ್ಥವನ್ನು ಅರ್ಥೈಸುವುದಾದರೆ ಸಂಸ್ಕಾರವನ್ನೇ ಸಂಸ್ಕೃತಿ ಎಂಬರ್ಥದಲ್ಲಿ ಪ್ರತಿಪಾದಿಸಲಾಗಿದೆ. ಪರಂತು ಸಂಸ್ಕೃತ ಭಾಷೆ ಸಂಸ್ಕಾರವನ್ನು ಸಂವರ್ಧಿಸುತ್ತದೆ.

ಆಚಾರ, ವಿಚಾರ, ಸಂಸ್ಕಾರಗಳು ಅನೂಚಾನವಾಗಿ ನಡೆದುಬಂದಿವೆ. ಮಾತ್ರವಲ್ಲ ಜೊತೆಗೆ ಬೌದ್ಧಿಕ, ಮಾನಸಿಕ, ಭೌತಿಕ, ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ ಇತ್ಯಾದಿಗಳಿಂದ ಅಂತರಂಗ, ಬಹಿರಂಗದಲ್ಲಿ ಸ್ವಭಾವತಃ ಬದಲಾವಣೆ ಕಾಣಲು ತೊಡಗಿತು. ಆದ್ದರಿಂದಲೇ ಸಂಸ್ಕೃತ ಮತ್ತು ಸಂಸ್ಕೃತಿ ಭಾರತದ ಎರಡು ಪ್ರತಿಷ್ಠೆಗಳೆಂದು ಹೆಸರುಗಳಿಸಿವೆ. ಭಾಷೆಗಳಲ್ಲಿ ಮಧುರವೂ, ದಿವ್ಯವೂ ಆದದ್ದೇ ಈ ಗೀರ್ವಾಣವಾಣೀ. ಸಂಸ್ಕೃತವು ವೇದಕಾಲೀಕ ಭಾಷೆ, ಪುರಾಣ ಮತ್ತು ಶಾಸ್ತ್ರೀಯ ಭಾಷೆಯಾಗಿ ಭಾರತದ ಸಾಹಿತ್ಯೇತಿಹಾಸ ವಿಶ್ವಗಳಲ್ಲೆಲ್ಲ ಖ್ಯಾತಿ ಹೊಂದಿದೆ ಮಾತ್ರವಲ್ಲ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು, ಉಳಿದ ಭಾಷೆಗಳ ಉಳಿವಿಗೆ ಕಾರಣವಾಗಿದೆ. ಈ ಭಾಷೆಯು ಅತೀ ಶ್ರೀಮಂತವೂ, ಉತ್ಕೃಷ್ಟವೂ, ಅತೀ ಶ್ರೇಷ್ಟವೂ ಆಗಿರುವುದನ್ನು ಪಾಶ್ಚಾತ್ಯ ವಿದ್ವಾಂಸರುಗಳೇ ಒಮ್ಮತದಿಂದ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಂಸ್ಕೃತ ಭಾಷೆ ಬೆಳವಣಿಗೆಯು ಇಂಡೋ–

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಆರ್ಯನ್ ಅಥವಾ ಇಂಡೋ ಜರ್ಮನ್ ಕುಟುಂಬದ ಭಾಷೆಗಳಲ್ಲಿ ಸೇರಿದ್ದು, ಇದರಲ್ಲಿ ಗ್ರೀಕ್, ಲ್ಯಾಟಿನ್ ಮತ್ತು ಇತರ ಭಾಷೆಗಳು ಸೇರಿವೆ. ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳೊಂದಿಗೆ ಈಗಾಗಲೇ ಪರಿಚಿತವಾಗಿರುವ ವಿಲಿಯಂ ಜೋನ್ಸ್ ಸಂಸ್ಕೃತದೊಂದಿಗಿನ ಸಂಪರ್ಕಕ್ಕೆ ಬಂದಾಗ ಸಂಸ್ಕೃತವು ಗ್ರೀಕ್‌ಗಿಂತ ಹೆಚ್ಚು ಪರಿಪೂರ್ಣವಾಗಿದೆ, ಮತ್ತು ಲ್ಯಾಟಿನ್‌ಗಿಂತಲೂ ಹೆಚ್ಚು ಉತ್ಕೃಷ್ಟವಾಗಿದೆ ಜೊತೆಗೆ ಹೆಚ್ಚು ಪರಿಷ್ಕೃತವಾಗಿದೆ ಎಂಬುದು ಅವರ ಅಭಿಮತವಾಗಿದೆ.

"ಭಾರತಸ್ಯ ಪ್ರತಿಷ್ಠೇ ದ್ವೇ ಸಂಸ್ಕೃತಂ ಸಂಸ್ಕೃತಿಸ್ತಥಾ" ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ಸಂರಕ್ಷಣೆ, ಸಂವರ್ಧನೆಗೋಸ್ಕರ ತಮ್ಮ ಜೀವನವನ್ನೇ ಮುಡುಪಾಗಿ ಇಟ್ಟವರು ಅನೇಕರು ಇದ್ದಾರೆ.

ಜನರು ಅಲೆಮಾರಿತನವನ್ನು ಬಿಟ್ಟು ಒಂದು ಪ್ರದೇಶದಲ್ಲಿ ನೆಲೆನಿಂತು ಮೂಲಭೂತ ಅವಶ್ಯಕತೆಗಾಗಿ ಆಹಾರ ಧಾನ್ಯಗಳನ್ನು ಬಿತ್ತಿ ಬೆಳೆಯುವ ನಿಟ್ಟಿನಲ್ಲಿ ಮಣ್ಣಿನ ಮಕ್ಕಳಾಗಿ ಮಣ್ಣಿನ ಸಂಸ್ಕೃತಿಯನ್ನು, ಶ್ರಮಸಂಸ್ಕೃತಿಯನ್ನಾಗಿಸಿಕೊಂಡು ಕೃಷಿ ಬದುಕನ್ನು ಆರಂಭಿಸಿದ ಮೇಲೆ ಪ್ರಕೃತಿಯೊಂದಿಗೆ ಸಂಬಂಧವನ್ನು ಜೊತೆ ಅನನ್ಯವಾಗಿ ಬೆಳೆಸಿಕೊಂಡು ತಮ್ಮ ಭಯ, ಸಂಕಟ, ಸಂತೋಷವನ್ನೆಲ್ಲಾ ಪ್ರಕೃತಿಯ ಜೊತೆ ಬೆಸೆಯುತ್ತಾ ಬದಲಾವಣೆ ಕಾಣಲು ತೊಡಗಿದರು. ಮಾನವ ಹಾಗೂ ಪ್ರಕೃತಿಯ ನಿಗೂಢ ಸಂಬಂಧಗಳು ಆರಾಧನೆಯಾಗಿ ಪರಿವರ್ತನೆಗೊಂಡವು. ಈ ತಾತ್ವಿಕ ನಿಲುವುಗಳೇ ದೇವರ, ದೈವ, ನಂಬಿಕೆ, ಶ್ರದ್ಧೆ, ಆಚಾರ, ವಿಚಾರಗಳು ಆಚರಣೆಯು ಮೂಲಭೂತವಾದವು. ಇದರಿಂದ ಬದುಕಿನ ವಿಧಾನಪರ್ವವನ್ನು ಕಂಡುಕೊಂಡರು. ಈ ರೀತಿಯಲ್ಲಿ ಹುಟ್ಟಿಕೊಂಡ ಬದುಕಿನ ಸಂಕೇತವೇ ಸಂಸ್ಕೃತಿ ಎಂದು ಕರೆಯಬಹುದು.

ಸಂಸ್ಕೃತಿಯ ವ್ಯಾಪ್ತಿ ಬಾಹುಳ್ಯ ವಿಶಾಲವಾದದ್ದು. ಅದರ ವಿಶ್ಲೇಷಣೆಯು ವ್ಯಕ್ತಿಯ ಮನೋವೃತ್ತಿಗನುಗುಣವಾಗಿ ವಿಮರ್ಶಿಸಲು ತೊಡಗುತ್ತದೆ. ಮನುಷ್ಯರು ಎಲ್ಲೆಲ್ಲಿ ವಾಸಿಸುವರೋ ಅಲ್ಲೆಲ್ಲ ಸಂಸ್ಕೃತಿಯ ಅನಾವರಣಗೊಳ್ಳುತ್ತದೆ. ಸಂಸ್ಕೃತಿಯ ಸಾತ್ವಿಕ ಜೀವನ ಸ್ವರೂಪವನ್ನು ತಾಳುತ್ತದೆ. ಆದ್ದರಿಂದ ಭಾರತೀಯ ಸಂಸ್ಕೃತಿ ವೈಶಿಷ್ಟ್ಯವೂ ಹೌದು, ವೈವಿಧ್ಯವೂ ಹೌದು. ಸಂಸ್ಕೃತಿ ಮಾನವನ ಮನೋದರ್ಪಣವು ಶುಚಿಗೊಳ್ಳುತ್ತದೆ. "ಸಂಸ್ಕೃತಿ" ಯ ಮೂಲ ಅರ್ಥವೇ "ನಾಗರೀಕತೆ, ಸಭ್ಯತೆ, ವಿನಯಶೀಲತೆ, ಗುಣಗ್ರಾಹಕತೆ, ಕೃತಜ್ಞತೆ, ರಸಿಕತೆ, ವಿಚಾರಪರತೆ ಇಂಗಿತಜ್ಞತೆ, ಕರ್ತವ್ಯಧಕ್ಷತೆ, ಸತ್ಯಶೀಲತೆ, ಗುರುದೇವತಾಭಕ್ತಿ, ದೇಶಭಾಷಾಭಿಮಾನ, ತ್ಯಾಗಗುಣ, ಶುಚಿತ್ವ, ಸ್ನೇಹಪರತೆ ಇತ್ಯಾದಿ ಎಲ್ಲಾ ಸದ್ಗುಣ ಸಂಪತ್ತಿನ ಸಾರಸತ್ವವೇ "ಸಂಸ್ಕೃತಿ" ಎಂಬುದು ಕೆ.ಪಿ ರಾಮನಾಥಯ್ಯನವರ ಅಭಿಪ್ರಾಯವಾಗಿದೆ. ಸಂಸ್ಕೃತಿಯು ಅಸಂಸ್ಕೃತವಾದ ಮನವನ್ನು ಸುಸಂಸ್ಕೃತವಾಗಿಸುತ್ತದೆ. ಅನಾಗರಿಕರು ನಾಗರಿಕರಾಗುವರು, ಇದರಿಂದ ಧರ್ಮ ಮತ್ತು ಸಂಸ್ಕೃತಿ, ಸಂಸ್ಕೃತ ಎರಡಕ್ಕೂ ತನ್ನ ಸಾರ್ವಭೌಮತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. "ಸಂಸ್ಕಾರ", "ಸಂಸ್ಕೃತಿ"ಯಾಗಿ ರೂಪಾಂತರಗೊಳ್ಳುತ್ತದೆ. 'ಸಂಸ್ಕಾರ' ಅಂದರೆ ಪರಿಶುದ್ಧವಾಗಿ ಮಾಡುವುದು, ದೋಷವನ್ನು ಪರಿಹರಿಸಿ ಶುದ್ಧಮಾಡುವುದು ಎಂಬರ್ಥವಿದೆ. "ಸಂಸ್ಕೃತಿ" ಇದಕ್ಕೆ "ಸಂಸ್ಕಾರ" ಪದದ ಅರ್ಥವೂ ಇದೆ. ಸಂಪ್ರದಾಯ, ಪದ್ಧತಿ, ಅವರವರಿಗೆ ಸೇರಿದ ಆಚಾರ, ವ್ಯವಹಾರ, ಆಹಾರ, ನಡತೆ ಮುಂತಾದ ಸಂಪ್ರದಾಯ ಎಂಬರ್ಥವಿದೆ. ಅರ್ಥಾತ್, ಮಾನವ ಸಮಾಜ ಇರುವ ಕಡೆಯೆಲ್ಲ ಸಂಸ್ಕೃತಿ ಇರುತ್ತದೆ. ಸಂಸ್ಕೃತಿಯು ಮನುಷ್ಯನ ಸಮಾಜದ ಮುಖ್ಯ ಲಕ್ಷಣವಾಗಿರುತ್ತದೆ. ಅದು ಸರ್ವವ್ಯಾಪಿಯಾಗಿ ಆವರಿಸಿದೆ. ತನ್ನದೇ ಆದ ಸಮಷ್ಠಿ ರೂಪವಾಗಿ ಬೆಳಗುತ್ತಿದೆ. ವೃಷ್ಟಿಜೀವನದ ವಿಕಾಸಕ್ಕೆ ಕಾರಣವಾದ ಸಂಸ್ಕಾರದವರೆಗೆ ಈ ಪದ ಅರ್ಥದ ಬಾಹುಳ್ಯ ಬೆಳೆದು ನಿಂತಿದೆ. ಸಂಸ್ಕಾರ, ಸಂಸ್ಕೃತಿ ಯಾಕೆ ಈ ಸ್ಥಾನ ಪಡೆದಿದೆ ಎಂಬುದು ವಿಮರ್ಶಾತ್ಮಕವಾದ ವಿಚಾರ. ಇದನ್ನು ಸರಿಯಾಗಿ ಅರ್ಥೈಸುವುದಾದರೆ ನಾಗರಿಕ ಸಮಾಜದಲ್ಲಿ ಬದುಕುವವರಿಗೆ, ಜೀವನಪದ್ಧತಿ ಮತ್ತು ನಂಬಿಕೆ ಇರುವ ಮಾನವರಿಗೆ ಮಾತ್ರ ಅನ್ವಯಿಸುವುದು. 'ಸಮಾಜ' ಎಂದರೆ ಮಾನವಸಮೂಹ 'ಸಮಜ' ಎಂದರೆ ಪಶುಗಳ ಸಮೂಹ ಎಂಬರ್ಥದಲ್ಲಿ ಯಾರಿಗೆ, ಮಾತನಾಡುವ ಕೇಳಿ, ನೋಡಿ, ಕಲಿಯುವವರಿಗೆ ಸಾಮರ್ಥ್ಯವಿದೆಯೋ/ಇನ್ನೊಬ್ಬರ ಜೊತೆಗೂಡಿ ಬಾಳಿ ಬದುಕುವ ಆಚರಣೆಗೆ ಒಳಪಡುವ ಸಮಾಜದ ಗುಂಪಿಗೆ ಸೇರಿದವರಿಗೆ, ಸಂಸ್ಕಾರ ಹೊಂದಿದವರಿಗೆ, ಸಂಸ್ಕಾರಕ್ಕೆ ಒಳಪಟ್ಟವರಿಗೆ ತನ್ನತನ, ತನ್ನ ಧರ್ಮ, ತನ್ನ ನೆಲ, ಜಲವನ್ನು ಉಳಿಸಿಕೊಂಡು ಸುಸಂಸ್ಕೃತನಾಗಿ ಬದುಕುವ ಮನುಕುಲವೇ ನಾಗರಿಕ ಸಮಾಜವಾಗುತ್ತದೆ. ಆದರೆ ಸಮಜ ಪಶುಗಳ, ಗುಂಪು ಅನಾಗರಿಕತೆ, ಅಸುರಕ್ಷತೆ, ಅಸಂಸ್ಕೃತಿಯ ಪಶುತ್ವ ಭಾವನೆಯುಳ್ಳವರಿಗೆ ಸಂಸ್ಕಾರದ ಕೊರತೆ ಇದ್ದವರನ್ನು ಸಂಸ್ಕಾರವಂತರನ್ನಾಗಿಸುವುದೇ ಸಂಸ್ಕೃತಿ.

ಸಂಸ್ಕಾರ ಭಾಷೆ ಎಂದರೆ ಅದು ಸಂಸ್ಕೃತ, ಪ್ರಾಚೀನ ಭಾಷೆಯಾದ ಸಂಸ್ಕೃತವನ್ನು ಜನಸಾಮಾನ್ಯರ ಆಡುವ ಭಾಷೆಯಾದರೆ ದೇಶದ ಸಂಸ್ಕೃತಿ ಉತ್ತುಂಗಕ್ಕೇರುತ್ತದೆ. ಸಂಸ್ಕೃತವು ಭೂಮಂಡಲದಲ್ಲೆಲ್ಲಾ ಅತ್ಯಂತ ಪರಿಪೂರ್ಣ ಗುಣಯುಕ್ತವಾದ ಭಾಷೆ ಸಂಸ್ಕಾರವನ್ನು ನೀಡುತ್ತದೆ ಮಾತ್ರವಲ್ಲ ಪ್ರತಿಯೊಂದು ಸಂಸ್ಕೃತ ಪದ್ಯವು ಮನಸ್ಸಿನ ಮೇಲೆ ಪ್ರಭಾವ ಪರಿಣಾಮ ಬೀರುತ್ತದೆ. ಡಾ. ವಿಲಿಯಮ್ ನಾರ್ಮನ್ ಬ್ರೌನ್ ಸಂಸ್ಕೃತ ಪ್ರಾಧ್ಯಾಪಕರು, ಅಮೇರಿಕನ್ ಇನ್ಸ್ಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ಅಧ್ಯಕ್ಷರು ಹೇಳುತ್ತಾರೆ. ಪ್ರತಿಯೊಬ್ಬ ವಿದ್ಯಾವಂತನು ತನ್ನ ದೇಶದ ಮೂಲಭೂತ ಭಾಷೆಯನ್ನು ಆದೇಶದ ಚರಿತ್ರೆ, ಸಂಸ್ಕೃತಿ ಮತ್ತು ವೇದಾಂತಗಳ ಗುಣ ಗ್ರಹಣ ಮಾಡಲು ಅವಶ್ಯ ಕಲಿತಿರಬೇಕು. ಎಲ್ಲಾ ಸಂಸ್ಕೃತ ಮೂಲ ಉದ್ಗ್ರಂಥಗಳನ್ನು ಅಧ್ಯಯನ ಮಾಡಿದ ಮೇಲೆ ಇವುಗಳ ಭಾಷಾಂತರವು ನಿಜವಾದ ತತ್ತ್ವವನ್ನು ಹೊರಗೆಡಹಲಾರದೆಂಬ ತೀರ್ಮಾನಕ್ಕೆ ನಾನು ಬಂದಿರುವೆನೆಂದು (IE. 5–2–64) ಹೇಳಿದ್ದಾರೆ. ದೇವನಾಗರಿಕ ಭಾಷೆಯ ಬರಹ ಮತ್ತು ಭಾವನೆ ಒಂದಾದರೆ ಸಂಸ್ಕೃತಿ–ಸಂಸ್ಕೃತ ಶ್ರೀಮಂತಗೊಳ್ಳುತ್ತದೆ.

ಯಾವುದೇ ಭಾಷೆಯು ತನ್ನ ಅಸ್ತಿತ್ವವನ್ನು ತೋರ್ಪಡಿಸಬೇಕಾದರೆ ಅದರ ಸಂಸ್ಕೃತಿ ಕೈಗನ್ನಡಿಯಾಗಿರುತ್ತದೆ. ಹಾಗೆ ಸಂಸ್ಕೃತವು ಸಹ ತನ್ನ ಸಾರ್ವಭೌಮತ್ವನ್ನು ಭಾರತೀಯ ಸಂಸ್ಕೃತಿಯಾಗಿ ತೋರ್ಪಡಿಸುತ್ತದೆ. ಅಷ್ಟು ಮಾತ್ರವಲ್ಲ ತನ್ನದೇ ಆದ ವಿಭಿನ್ನ ವೈಶಿಷ್ಟ್ಯ ಪರಂಪರೆಯ ಚೌಕಟ್ಟಿನ ನಡಾವಳಿಗಳಿಂದ ನೋಡುಗರ ಮೆಚ್ಚುಗೆಗೆ ಕೈಗನ್ನಡಿಯಾಗಿದೆ. ದೇಶದ ಸಾರ್ವಭೌಮತ್ವವನ್ನು ಹೆಚ್ಚಿಸಿದೆ. ಆದ್ದರಿಂದಲೇ "ಸಂಸ್ಕೃತ ಮತ್ತು ಸಂಸ್ಕೃತಿ" ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಂಸ್ಕೃತದ ಭದ್ರಬುನಾದಿಯ ಮೇಲೆ ಸಂಸ್ಕೃತಿಯ ಭವ್ಯಸೌಧ ನೆಲೆಗೊಂಡಿದೆ.

■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ
ದೂರವಾಣಿ : 08372–237527, 277527
e-mail : vidyanidhiprakashana@gmail.com.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಶಾಲಾ ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಯನ್ನು ಅರ್ಥೈಸುವಲ್ಲಿ ಶಿಕ್ಷಕರ ಪಾತ್ರ

✍ ರೇಶ್ಮ ಎಂ. ವೈ. (ಪಿ.ಎಚ್.ಡಿ) ಸಂಶೋಧನಾ ವಿದ್ಯಾರ್ಥಿ, (ಚರಿತ್ರೆ ವಿಭಾಗ).

ಶಿಕ್ಷಣ ಎಂಬುವುದು ನಿರಂತರ ಪ್ರಕ್ರಿಯೆ. ಮಗು ಪ್ರಗತಿಯ ಹಾದಿಯಲ್ಲಿ ಸಾಗಬೇಕಾದರೆ ಶಿಕ್ಷಣ ಅತ್ಯಾವಶ್ಯಕವಾಗಿದೆ. ಮಗುವಿನ ಸರ್ವತೋಮುಖ ಬೆಳವಣಿಗೆಯಾಗಬೇಕಾದರೆ ಮಗುವಿನಲ್ಲಿ ಸಾಮರ್ಥ್ಯವನ್ನು ಗುರುತಿಸುವುದು ಇಂದಿನ ಸಮಾಜದ ಪ್ರಮುಖ ಕಾಳಜಿಯಾಗಿದೆ. ಪ್ರತಿಯೊಂದು ಮಗುವು ಅದ್ವಿತೀಯ ಯಾಕೆಂದರೆ ದೈಹಿಕವಾಗಿ, ಮಾನಸಿಕವಾಗಿ ಭಿನ್ನತೆಯನ್ನು ಕಾಣುತ್ತೇವೆ. ಒಂದು ತರಗತಿಯಲ್ಲಿ ಕಲಿಯುವ ವಿದ್ಯಾರ್ಥಿಗಳ ನಡುವೆ ಸ್ಮರಣ ಶಕ್ತಿ, ಸಂವೇದನಶೀಲತೆ, ಸಮಸ್ಯೆ ಪರಿಹಾರ ಶಕ್ತಿ ನಿವೇದನೆ, ಆಸಕ್ತಿ, ಸೃಜನಶೀಲತೆ ಅಭಿಕ್ಷಮತೆ ಸಾಧನೆ ಇತ್ಯಾದಿಗಳ ವ್ಯತ್ಯಾಸವಿರುತ್ತದೆ. ಈ ವೈವಿಧ್ಯತೆಯೇ ಮಗು ಇತರರಿಂದ ಹೇಗೆ ಭಿನ್ನ ಎಂಬುವುದನ್ನು ನಿರ್ಧರಿಸುತ್ತದೆ. ವೈಯುಕ್ತಿಕ ಭಿನ್ನತೆಗೆ ಅನುವಂಶೀಯತೆ ಮತ್ತು ಪರಿಸರದ ಪ್ರಭಾವವವು ಪ್ರಮುಖ ಕಾರಣವಾಗಿರುತ್ತದೆ. ಆದುದರಿಂದ ವಿದ್ಯಾರ್ಥಿಗಳ ಶಾರೀರಿಕ, ಭಾವನಾತ್ಮಕ ಹಾಗೂ ಬೌದ್ಧಿಕ ನಡವಳಿಕೆಗಳಲ್ಲಿ ಕಂಡುಬರುವ ವ್ಯತ್ಯಾಸಗಳ ಅರಿವು ಶಿಕ್ಷಕನಿಗೆ ಇರುವುದು ಅತೀ ಅಗತ್ಯವಾಗಿದೆ.

ಎಲ್ಲರೂ ಹುಟ್ಟುವಾಗಲೇ / ಅನುವಂಶೀಯ ಗುಣಗಳನ್ನು ಹೊಂದಿರುತ್ತಾರೆ. ಅದು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಹರಿದುಬರುತ್ತದೆ. ಆದುದರಿಂದ ಅನುವಂಶೀಯತೆ ವ್ಯಕ್ತಿತ್ವದ ವಿವಿಧ ಕ್ಷೇತ್ರಗಳಲ್ಲಿನ ವಿಕಾಸವನ್ನು ನಿಯಂತ್ರಿಸುತ್ತದೆ. ಅನುವಂಶೀಯತೆ ದೇಹದ ಬಾಹ್ಯ ಮತ್ತು ಆಂತರಿಕ ಅಂಗಗಳ ರಚನೆ ಮತ್ತು ಕಾರ್ಯಗಳ ಭಿನ್ನತೆಗೆ ಮಾತ್ರ ಕಾರಣವಾಗದೇ ವ್ಯಕ್ತಿಯ ಲಿಂಗ, ಬುದ್ಧಿಶಕ್ತಿ, ನಿರ್ದಿಷ್ಟ ಅಂತರ್ಗತ ಸಾಮರ್ಥ್ಯಗಳ ಮೂಲಕ ವೈಯಕ್ತಿಕ ಭಿನ್ನತೆಗೆ ಕಾರಣವಾಗುತ್ತದೆ. ಅದೇ ರೀತಿ ಪರಿಸರದ ಅಂಶಗಳು ಪ್ರಭಾವ ಬೀರುತ್ತದೆ. ಮಗು ತಾಯಿಯ ಗರ್ಭದಲ್ಲಿದ್ದಾಗ ಮತ್ತು ಮಗು ಹುಟ್ಟುವಾಗ ಇರುವ ವಿಭಿನ್ನ ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ ಅಂಶಗಳು ಇತ್ಯಾದಿ ಮಕ್ಕಳ ವ್ಯಕ್ತಿಗತ ಲಕ್ಷಣ ಮತ್ತು ವರ್ತನಾ ವಿನ್ಯಾಸಗಳು ಭಿನ್ನತೆಗಳಿಗೆ ಕಾರಣವಾಗುತ್ತದೆ.

## ವೈಯಕ್ತಿಕ ಭಿನ್ನತೆಯ ಕ್ಷೇತ್ರಗಳು

ವ್ಯಕ್ತಿ ಭಿನ್ನತೆ ಎಂಬುದು ಗುಣಲಕ್ಷಣಗಳ ಮೊತ್ತವಾಗಿದ್ದು ಒಬ್ಬರಿಂದ ಒಬ್ಬರು ವಿಭಿನ್ನರಾಗಿ ಕಾಣಲು ಮೂಲಭೂತ ಕಾರಣವಾಗಿರುತ್ತದೆ. ಕೆಲವೊಂದು ಸಂದರ್ಭದಲ್ಲಿ ಈ ಭಿನ್ನತೆ ಕಣ್ಣಿಗೆ ಗೋಚರವಾಗುವಂತೆ ತೋರಿ ಬಂದರೆ ಕೆಲವೊಮ್ಮೆ ಅತಿ ಸೂಕ್ಷ್ಮವಾಗಿದ್ದು ಸುಪ್ತವಾಗಿರುತ್ತದೆ. ಸಾಮಾನ್ಯವಾಗಿ ವ್ಯಕ್ತಿಗಳಲ್ಲಿ ಕಂಡು ಬರುವ ಭಿನ್ನತೆ ಈ ಕೆಳಗಿನಂತಿವೆ.

- ದೈಹಿಕ ಪ್ರತಿಯೊಬ್ಬರು ಎತ್ತರ, ಗಾತ್ರ ಮೈ ಬಣ್ಣ, ಕೂದಲಿನ ರಚನೆ, ಕೈ ಕಾಲುಗಳ ರಚನೆ, ಮುಖ ಲಕ್ಷಣ ಇತ್ಯಾದಿಗಳಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ.
- **ಮಾನಸಿಕ ಭಿನ್ನತೆ :** ವ್ಯಕ್ತಿಯ ಆಲೋಚನೆ, ವಿವೇಚನೆ, ತಾರ್ಕಿಕತೆ, ಬುದ್ದಿಶಕ್ತಿ, ಸ್ಮರಣೆ, ಕಲ್ಪನೆ, ಚಿಂತನೆ ಇತ್ಯಾದಿ ಭಿನ್ನತೆ ಕಂಡು ಬರುತ್ತದೆ.
- **ಸಂವೇಗಾತ್ಮಕ ಭಿನ್ನತೆ :** ಪ್ರೀತಿ, ದಯೆ, ಕರುಣೆ, ಸಹಕಾರ, ತಾಳ್ಮೆ, ಸಹನೆ, ಉದಾರತೆ, ಸಂಕೋಚ, ಇತ್ಯಾದಿಗಳನ್ನು ವ್ಯಕ್ತಿ ಅಭಿವ್ಯಕ್ತಿಸುವಲ್ಲಿ ಭಿನ್ನತೆಯನ್ನು ಗುರುತಿಸಬಹುದು.
- **ಚಾಲನ ಸಾಮರ್ಥ್ಯದಲ್ಲಿ ಭಿನ್ನತೆ :** ವ್ಯಕ್ತಿಯ ದಕ್ಷತೆ, ಕೌಶಲ್ಯ, ಕಾರ್ಯತತ್ಪರತೆ, ನಿಶ್ಚಲತೆ ಮುಂತಾದವುಗಳು ವಿಭಿನ್ನವಾಗಿರುತ್ತದೆ.

## ಅಭಿರುಚಿ ಮತ್ತು ಅಭಿಕ್ಷಮತೆಯಲ್ಲಿ ಭಿನ್ನತೆ

ವ್ಯಕ್ತಿ ವ್ಯಕ್ತಿಗಳಲ್ಲಿ ವಿಶಿಷ್ಟವಾದ ಅಭಿರುಚಿ ಹಾಗೂ ಅಭಿಕ್ಷಮತೆಗಳಲ್ಲಿ ವಿಭಿನ್ನತೆ ಇರುತ್ತದೆ. ಕೆಲವರು ಸಾಮಾಜಿಕ ಸಭೆ ಸಮಾರಂಭಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಆಸಕ್ತಿ ಇದ್ದರೆ ಮತ್ತೆ ಕೆಲವರು ಅದರಿಂದ ದೂರವಿರಲು ಇಷ್ಟಪಡುತ್ತಾರೆ. ಪ್ರವಾಸ, ಜಾತ್ರೆಗಳಲ್ಲಿ ಭಾಗವಹಿಸಲು ಆಸಕ್ತಿ ತೋರಿದರೆ ಕೆಲವರು ಅನಾಸಕ್ತಿ ತೋರುವರು. ಕೆಲವರಿಗೆ ಸಂಗೀತದಲ್ಲಿ ಅಭಿಕ್ಷಮತೆ ಇದ್ದರೆ ಕೆಲವರಿಗೆ ತಂತ್ರಜ್ಞಾನದಲ್ಲಿ ಅಭಿಕ್ಷಮತೆ ತೋರುವರು.

**ಬೌದ್ದಿಕತೆಯಲ್ಲಿ ಭಿನ್ನತೆ :** ಕಲಿಯುವಿಕೆಯಲ್ಲಿ ಹಾಗೂ ಮಕ್ಕಳ ಬೌದ್ಧಿಕ ಮಟ್ಟದಲ್ಲಿ ವ್ಯತ್ಯಾಸಗಳನ್ನು ಗುರುತಿಸಬಹುದು. ಕೆಲವರು ಹೆಚ್ಚು ಬುದ್ದಿಶಕ್ತಿಯನ್ನು ಹೊಂದಿದ್ದರೆ ಇನ್ನು ಕೆಲವರು ಕಡಿಮೆ ಬುದ್ಧಿಶಕ್ತಿಯನ್ನು ಹೊಂದಿರುತ್ತಾರೆ. ಆದ್ದರಿಂದ ಶಿಕ್ಷಕ ಅವರವರ ಬುದ್ಧಿಮಟ್ಟಕ್ಕೆ ಅನುಗುಣವಾಗಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

**ಕೌಟುಂಬಿಕ ಭಿನ್ನತೆ :** ಪ್ರತಿಯೊಂದು ವ್ಯಕ್ತಿಯ ಕೌಟುಂಬಿಕ ಹಿನ್ನಲೆ ವಿಭಿನ್ನವಾಗಿರುವುದರಿಂದ ಅಲ್ಲಿ ಪಡೆದುಕೊಂಡ ಸಂಸ್ಕಾರಗಳು ವಿಭಿನ್ನವಾಗಿರುತ್ತದೆ. ಇದು ವ್ಯಕ್ತಿಯ ಭಿನ್ನತೆಯನ್ನು ಗುರುತಿಸುತ್ತದೆ.

**ವ್ಯಕ್ತಿತ್ವದ ಭಿನ್ನತೆ:** ವ್ಯಕ್ತಿಯ ಅಮೂಲ್ಯ ಗುಣ ಸಾಮರ್ಥ್ಯಗಳು, ವರ್ತನಾ ಮಾದರಿ, ನೈತಿಕತೆ, ಸಂಸ್ಕೃತಿ, ಆಸಕ್ತಿ, ಅಧಿಕ್ಷಮತೆ, ದೈಹಿಕ ಲಕ್ಷಣಗಳು, ಬೌದ್ಧಿಕ ಸಾಮರ್ಥ್ಯ ಮುಂತಾದವು ವ್ಯಕ್ತಿತ್ವದ ಅನೇಕ ಪರಿಕಲ್ಪನೆಗಳಲ್ಲಿ ವಿಭಿನ್ನತೆಯನ್ನು ಗುರುತಿಸಬಹುದು.

## ವೈಯಕ್ತಿಕ ಭಿನ್ನತೆಯಲ್ಲಿ ಶಿಕ್ಷಕನ ಪಾತ್ರ

ಆಧುನಿಕ ಶಿಕ್ಷಣದ ಪ್ರಮುಖ ಉದ್ದೇಶವೇ ಮಗುವಿನ ಸರ್ವತೋಮುಖ ವಿಕಾಸವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಕ ವಿದ್ಯಾರ್ಥಿಗಳ ವೈಯುಕ್ತಿಕ ಭಿನ್ನತೆಯ ಬಗ್ಗೆ ಪರಿಪೂರ್ಣವಾದ ಅರಿವನ್ನು ಹೊಂದಿ ಅದಕ್ಕೆ ಸೂಕ್ತವಾಗಿ ತನ್ನ ಬೋಧನಾ ಶೈಲಿಯಲ್ಲಿ ಗುರುತರವಾದ ಬದಲಾವಣೆ ತರಬೇಕಾಗಿದೆ. ತರಗತಿಯಲ್ಲಿ ವೈವಿಧ್ಯಮಯ ಸಾಮರ್ಥ್ಯ ಹೊಂದಿರುವ ವಿದ್ಯಾರ್ಥಿಗಳ ಅಗತ್ಯತೆಗಳನ್ನು ಪೂರೈಸುವ ದೃಷ್ಟಿಯಿಂದ ಶಿಕ್ಷಕ ತನ್ನ ಬೋಧನಾ ಉದ್ದೇಶಗಳು ಪಠ್ಯವಸ್ತು, ಬೋಧನಾ ಸಾಧನಗಳು, ತಂತ್ರಗಳನ್ನು ಅಗತ್ಯಕ್ಕೆ ಶಿಕ್ಷಕರು ಹೊಂದಿಸಿಕೊಳ್ಳಬೇಕು. ಇದಕ್ಕೆ ವಿದ್ಯಾರ್ಥಿಗಳ ಪ್ರಗತಿಯ ಮೇಲೆ ಅತ್ಯಮೂಲ್ಯವಾದ ಪ್ರಭಾವ ಬೀರುತ್ತದೆ.

– 38ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕುವೆಂಪು ಅವರ ಜಲಗಾರ ನಾಟಕ : ಅದ್ವೈತ ತತ್ವ

✍ ಡಾ. ಚೈತಾಲಿ ಕೆ. ಎಸ್., ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ, ತುಮಕೂರು ಜಿಲ್ಲೆ.

ಕನ್ನಡ ಸಾರಸ್ವತ ಲೋಕ ಕಂಡ ಧೀಮಂತ ಕವಿ ಕುವೆಂಪು. "ಕಾಡಿನ ಕೊಳಲಿದು ಕಾಡ ಕವಿಯು ನಾ; ನಾಡಿನ ಜನರೊಲಿದಾಲಿಪುದು" ಎಂಬ ಬಿನ್ನಹದೊಂದಿಗೆ ಕನ್ನಡ ಸಾಹಿತ್ಯ ಜಗತ್ತನ್ನು ಪ್ರವೇಶಿಸಿದ ಕುವೆಂಪು ಕನ್ನಡ ಸಾಹಿತ್ಯಕ್ಕೆ ಹೊಸ ವಿಸ್ತರಣೆಗಳನ್ನು ತಂದುಕೊಟ್ಟವರು. ಮಲೆನಾಡಿನ ಪರಿಸರದ ಪ್ರಭಾವದಲ್ಲಿ ಬೆಳೆದು ತಮ್ಮನ್ನು ಕಾಡಿನ ಕೊಳಲೆಂದು ಕರೆದುಕೊಂಡರೂ ತಮ್ಮ ಅದ್ವಿತೀಯ ಸಾಹಿತ್ಯ ಸೃಷ್ಟಿ ಮತ್ತು ಹೊಸ ದೃಷ್ಟಿಕೋನಗಳ ಮೂಲಕ ಕನ್ನಡದ ವ್ಯಾಪ್ತಿಯನ್ನು ನಾಡಿನಾಚೆಗೂ ವಿಸ್ತರಿಸಿದವರು.

ಕುವೆಂಪು ಮೂಲತಃ ಕವಿಯಾದರೂ ಸಾಹಿತ್ಯದ ಎಲ್ಲ ಪ್ರಭೇಧಗಳಲ್ಲಿಯೂ ತಮ್ಮ ಅನನ್ಯತೆಯನ್ನು ಮೆರೆದವರು. ಕಾವ್ಯ, ನಾಟಕ, ಕಥೆ, ಕಾದಂಬರಿ, ವಿಮರ್ಶೆ, ಜೀವನ ಚರಿತ್ರೆ, ವಿಚಾರ ಸಾಹಿತ್ಯ ಮುಂತಾದ ಪ್ರಕಾರಗಳಲ್ಲಿ ನಿರಂತರವಾಗಿ ಸಾಹಿತ್ಯ ಸೃಷ್ಟಿ ನಡೆಸಿ ತಮ್ಮ ಮೌಲ್ಯಯುತ ಸಂದೇಶಗಳನ್ನು ಜನರಿಗೆ ತಲುಪಿಸಬಲ್ಲ ಪ್ರಬಲ ಮಾಧ್ಯಮಗಳಾಗಿ ತಮ್ಮ ಅಭಿವ್ಯಕ್ತಿ ಮಾರ್ಗವನ್ನು ಬಳಸಿಕೊಂಡವರು.

ಅವರ ವಿಸ್ತಾರ ಮತ್ತು ವಿಪುಲವಾದ ಸಾಹಿತ್ಯ ಸೃಷ್ಟಿಯಲ್ಲಿ ನಾಟಕಗಳಿಗೂ ವಿಶೇಷ ಸ್ಥಾನವಿದೆ. ಒಟ್ಟು ಹದಿನಾಲ್ಕು ನಾಟಕಗಳನ್ನು ರಚಿಸಿರುವ ಕುವೆಂಪು ತಮ್ಮ ನಾಟಕಗಳಲ್ಲಿ ವೈದಿಕ ಪುರಾಣಗಳನ್ನು ಮುರಿದು ಕಟ್ಟುವ, ಚರಿತ್ರೆಯ ವಿಶೇಷ ಸಂಗತಿಗಳನ್ನು ದಾಖಲಿಸುವ, ವೈಚಾರಿಕ ಪ್ರಜ್ಞೆಯನ್ನು ಮೂಡಿಸುವ, ಪರಂಪರೆಯನ್ನು ಸಮಕಾಲೀನಗೊಳಿಸುವ ಮಹತ್ವದ ಪ್ರಯತ್ನಗಳನ್ನು ಮಾಡಿದ್ದಾರೆ. ವಸ್ತು, ಭಾಷೆ, ತಂತ್ರ ಎಲ್ಲರಲ್ಲೂ ನಾವೀನ್ಯತೆಯನ್ನು ಪಡೆದಿರುವ ಇವರ ಪ್ರಮುಖ ನಾಟಕಗಳಲ್ಲಿ 'ಜಲಗಾರ' ನಾಟಕವೂ ಒಂದು.

'ಜಲಗಾರ' – 1928ರಲ್ಲಿ ರಚನೆಗೊಂಡ ನಾಟಕ. ಶೂದ್ರತಪಸ್ವಿ, ಬೆರಳ್ ಗೆ ಕೊರಳ್, ಸ್ಮಶಾನ ಕುರುಕ್ಷೇತ್ರ ನಾಟಕಗಳಲ್ಲಿ ಪ್ರತಿಪಾದಿತವಾಗಿರುವ ವೈಚಾರಿಕ ಪ್ರಜ್ಞೆ ಮತ್ತು ಸಿದ್ಧ ಪ್ರತಿಮೆಗಳನ್ನು ಒಡೆದು ಹೊಸ ಆಕೃತಿಗಳನ್ನು ಕಟ್ಟುವ ಪ್ರಯತ್ನವನ್ನು ಇಲ್ಲಿಯೂ ಕಾಣಬಹುದಾಗಿದ್ದು, ವಿಮರ್ಶಾ ವಲಯದ ಕಣ್ಸೆಳೆದಿರುವ ಈ ನಾಟಕವನ್ನು ಅನೇಕ ದೃಷ್ಟಿಕೋನಗಳ ಮೂಲಕ ಈಗಾಗಲೇ ವಿವೇಚಿಸಲಾಗಿದೆ.

ವರ್ಣ–ವರ್ಗ ಸಂಘರ್ಷದ ನೆಲೆಯಾಗಿ, ದೇವಾಲಯಗಳ ಸ್ಥಾಪಿತ ಮನೋಧರ್ಮವನ್ನು ವಿರೋಧಿಸುವ ಅಂಶವಾಗಿ, ವರ್ಣವ್ಯವಸ್ಥೆಯೆಂಬ ಅಸಮಾನತೆಯ ಕಸವನ್ನು ಗುಡಿಸಿ ಹಾಕಿ ಹೊಸ ಸಮಾಜವನ್ನು ಕಟ್ಟ ಬಯಸುವ ಆಶಯವಾಗಿ, ದುಡಿಮೆಯೇ ದೇವರು ಎಂಬ ಕರ್ಮಯೋಗದ ಸಿದ್ಧಾಂತದ ಮೂಲಕವಾಗಿ, ಶೋಷಿತವರ್ಗವೂ ಅಸಾಮಾನ್ಯವಾದದ್ದನ್ನು ಸಾಧಿಸಬಲ್ಲದೆಂಬುದನ್ನು ಧ್ವನಿಸುವ ಕೃತಿಯಾಗಿ, ಸ್ಥಾವರಕ್ಕೆ ವಿರುದ್ಧವಾಗಿ ಜಂಗಮ ಕಲ್ಪನೆಯನ್ನು ಪ್ರತಿಪಾದಿಸುವ ಕೃತಿಯಾಗಿ ವಿವೇಚನೆಗೆ ಒಳಪಟ್ಟಿದೆ. 'ಪಠ್ಯ' ಒಂದೇ ಆದರೂ ಅದನ್ನು ಅರ್ಥೈಸುವ ಆಯಾಮಗಳು ಬೇರೆಬೇರೆಯಾಗಿರುವಂತೆ ಈ ಮೇಲಿನ ಎಲ್ಲ ಅಂಶಗಳನ್ನು ಒಪ್ಪಿಕೊಳ್ಳುತ್ತಲೇ ಇವುಗಳನ್ನು ಮೀರಿ 'ಜಲಗಾರ' ನಾಟಕದ ತಾತ್ವಿಕ ನೆಲೆಯನ್ನು ಕಂಡುಕೊಳ್ಳುವುದು ಅಗತ್ಯವೆನಿಸುತ್ತದೆ. ಇಡೀ ನಾಟಕವನ್ನು ಕುವೆಂಪು 'ಅದ್ವೈತ ತತ್ವ'ದ ಹಿನ್ನೆಲೆಯಲ್ಲಿ ರಚಿಸಿದ್ದು ಅದ್ವೈತ ತತ್ವ ನಾಟಕದುದ್ದಕ್ಕೂ ಹೇಗೆ ರೂಪು ಪಡೆದಿದೆಯೆಂಬುದನ್ನು ಪರಿಶೀಲಿಸುವುದು ಮುಖ್ಯವೆನಿಸುತ್ತದೆ.

ಕುವೆಂಪು ಮೂಲತಃ ಆಧ್ಯಾತ್ಮವಾದಿ, ಸಾಹಿತ್ಯದ ಎಲ್ಲ ಆಯಾಮಗಳನ್ನು ಆತ್ಯಂತಿಕವಾಗಿ ಆಧ್ಯಾತ್ಮದ ಮೂಸೆಯಲ್ಲಿ ಕರಗಿಸುವವರು. ಅದು ಪ್ರಕೃತಿಯ ವರ್ಣನೆಯೇ ಆಗಿರಲಿ; ಸಂಸ್ಕೃತಿ ಚಿಂತನೆಯೇ ಆಗಿರಲಿ; ಮಾನವೀಯತೆಯ ಶೋಧವೇ ಆಗಿರಲಿ; ವೈಚಾರಿಕ ಬರವಣಿಗೆಗಳಾಗಿರಲಿ – ಎಲ್ಲದರ ಹಿಂದೆ ಆಧ್ಯಾತ್ಮದ ಸೆಲೆಯೊಂದು ಕೆಲಸ ಮಾಡುತ್ತಿರುತ್ತದೆ. ಧ್ಯಾನ,ತಪಸ್ಸು, ಪ್ರಾರ್ಥನೆ, ದರ್ಶನ ಮುಂತಾದ ಪರಿಭಾಷೆಗಳು ಅವರ ಕೃತಿಗಳಲ್ಲಿ ಸರ್ವೇಸಾಮಾನ್ಯವಾಗಿದ್ದು ರಾಮಕೃಷ್ಣ ಮಠದ ಪ್ರಭಾವ, ವಿವೇಕಾನಂದರ ತತ್ವಾದರ್ಶಗಳು, ಉಪನಿಷತ್ತುಗಳ ಆಳವಾದ ಪರಿಚಯ ಕುವೆಂಪುರವರ ಈ ಬಗೆಯ ಆಧ್ಯಾತ್ಮಿಕ ಆಸಕ್ತಿಗೆ ಕಾರಣಗಳಾಗಿವೆ.

ಕುವೆಂಪುರವರ ವಿಶಿಷ್ಟತೆ ಇರುವುದು ಆಧ್ಯಾತ್ಮಿಕತೆ – ವೈಚಾರಿಕತೆಯ ನಡುವೆ ಅವರು ಹೊಂದಿರುವ ಸಮನ್ವಯದಲ್ಲಿ. ತೀವ್ರ ವೈಚಾರಿಕ ಪ್ರಜ್ಞೆಯ ಕುವೆಂಪು ವಿಚಾರವಂತಿಕೆಗೆ ಅವರ ಆಧ್ಯಾತ್ಮಿಕ ಮನೋಭಾವ ಎಂದಿಗೂ ತೊಡಕಾಗಲಿಲ್ಲ. "ಕುವೆಂಪುರವರದು ಮತೀಯವಲ್ಲದ ಆಧ್ಯಾತ್ಮ" ಎಂದು ಶಿವರಾಮ ಕಾಡನಕುಪ್ಪೆಯವರೂ "ಕುವೆಂಪು ಅವರದು ಧರ್ಮಬದ್ದ ಮಾನವತಾವಾದ" ಎಂದು ಎನ್. ಎಸ್. ಹಿರೇಮಠರವರೂ ಅವರ ಸಮನ್ವಯ ವ್ಯಕ್ತಿತ್ವವನ್ನು ಕುರಿತು ಉಲ್ಲೇಖಿಸುತ್ತಾ ಹೇಳಿದ್ದಾರೆ.

**"ಹಳೆಮತದ ಕೊಳೆಮತದ ಸಹವಾಸ ಸಾಕಿನ್ನು**
**ಸಾಕಿನ್ನು ಸೇರಿರೈ ಮನುಜ ಮತಕೆ – ವಿಶ್ವಪಥಕೆ"**

ಎಂದು ಕರೆ ನೀಡುವಲ್ಲಿ ಮತಗಳನ್ನು ನಿರಾಕರಿಸುವ ಅವರ ಧೋರಣೆಯನ್ನು ಕಾಣಬಹುದು. ಮೌಢ್ಯತೆಯನ್ನು ವಿರೋಧಿಸುತ್ತಲೇ ಆಧ್ಯಾತ್ಮವನ್ನು ಒಪ್ಪಿಕೊಳ್ಳುವ ಅವರಲ್ಲಿ ಎಂದೂ ಪ್ರಗತಿಪರತೆ ಮತ್ತು ಆಧ್ಯಾತ್ಮದ ನಡುವೆ ಸಂಘರ್ಷವೇರ್ಪಡಲಿಲ್ಲ.

ಏಕತೆಗೆ ಬದಲಾಗಿ ಅನೇಕತೆಯನ್ನು, ಕೇಂದ್ರೀಕರಣದ ಸ್ಥಾನದಲ್ಲಿ ವಿಕೇಂದ್ರೀಕರಣವನ್ನು ಪ್ರತಿಪಾದಿಸುವ ಇಂದಿನ ಸಂದರ್ಭದಲ್ಲಿ 'ಜಲಗಾರ' ನಾಟಕದಲ್ಲಿ ಪ್ರತಿಪಾದಿತವಾಗಿರುವ ಅದ್ವೈತ ತತ್ವದ ಚರ್ಚೆ ವಿರೋಧಾಭಾಸವೆನಿಸಿದರೂ ಕುವೆಂಪುರವರ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಇದೊಂದು ಕುತೂಹಲಕರವಾದ ಅಧ್ಯಯನವಾಗಬಲ್ಲದು.

"ಮನಸ್ಸು ತುಮುಲಕ್ಕೆ ಒಳಗಾದಾಗ ವಾಸ್ತವತೆಯ ಬಹುತ್ವ ಉದ್ಭವವಾಗುತ್ತದೆ; ಆದರೆ ಮನಸ್ಸು ತಿಳಿಯಾದಾಗ ಆ ಬಹುತ್ವವೂ ಮಾಯವಾಗುತ್ತದೆ" ಎನ್ನುತ್ತದೆ ಬೌದ್ಧ ತತ್ವಶಾಸ್ತ್ರ.

ಉಪನಿಷತ್ತಿನ ಪ್ರಕಾರ, ಅದ್ವೈತವೆಂದರೆ, ಏಕತ್ವವಾದವಲ್ಲ. ಅದ್ವೈತವೆಂದರೆ – ಎರಡಲ್ಲದ್ದು. ದೇವರು–ಜಗತ್ತು, ದೇವರು–ಮನುಷ್ಯ ಹೀಗೆ ಎರಡು ಸ್ಥಿತಿಗಳಿರುವುದಿಲ್ಲ. 'ಆತ್ಮ' ಎಂದರೆ 'ತಾನು'. ಬ್ರಹ್ಮವನ್ನು ಶೋಧಿಸುವುದೆಂದರೆ ತನ್ನೊಳಗಿನ ಆತ್ಮದ ಶೋಧನೆ. ಆತ್ಮ ತಾನು ಬ್ರಹ್ಮನೆಂಬ ಅರಿವು ಪಡೆಯುವುದೇ ಮೋಕ್ಷ. ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುವನು. ಇದನ್ನೇ ಶಂಕರಾಚಾರ್ಯರು 'ಅಹಂ ಬ್ರಹ್ಮಾಸ್ಮಿ' ಎಂದು ಕರೆದಿರುವುದು.

ಈ ತತ್ವವೇ ಕುವೆಂಪು ಅವರ 'ಜಲಗಾರ' ನಾಟಕದ ಕೇಂದ್ರ ತತ್ವವಾಗಿದೆ.

**ಪ್ರಕೃತಿ : ಕುವೆಂಪು : ಅದ್ವೈತ** – ಅದ್ವೈತ ತತ್ವದ ಪ್ರಕಾರ ಪ್ರಕೃತಿ ಮತ್ತು ಮಾನವ ಪ್ರತ್ಯೇಕವಲ್ಲ. ಪ್ರಕೃತಿಯು ಮಾನವನ ಒಟ್ಟು ವ್ಯಕ್ತಿತ್ವದ ಹಾಗೂ ವಿಕಾಸದ ಅವಿಭಾಜ್ಯ ಅಂಗ. ಪ್ರಕೃತಿಯನ್ನು ಮಾನವ ತನ್ನ ಜೀವನ ಪರಿಧಿಯ ಹೊರಗಿಟ್ಟು ನೋಡಲು ಸಾಧ್ಯವಿಲ್ಲ.

ಕುವೆಂಪುರವರಿಗೆ ಪ್ರಕೃತಿಯ ಆರಾಧನೆಯೆಂದರೆ ಪರಮನ ಆರಾಧನೆಯೇ. 'ಸೂರ್ಯೋದಯ ಚಂದ್ರೋದಯ ದೇವರ ದಯೆಕಾಣೋ' ಎನ್ನುವಲ್ಲಿ, 'ಶಿವನಿಲ್ಲದ ಸೌಂದರ್ಯವೇ ಶವ ಮುಖದ ಕಣ್ಣೋ' ಎನ್ನುವಲ್ಲಿ ಕುವೆಂಪುರವರ ಧೋರಣೆ ವ್ಯಕ್ತವಾಗುತ್ತದೆ.

ಈ ನಾಟಕದಲ್ಲಿ ಶಿವನ ಗುಡಿಗೆ ತೆರಳಲು ರೈತನಿತ್ತ ಆಹ್ವಾನವನ್ನು ನಯವಾಗಿ ನಿರಾಕರಿಸುವ ಜಲಗಾರ

**"ಮುನ್ನೀರು ತೊರೆ ಕೆರೆಗಳೇ ಪಂಚಪಾತ್ರೆ**
**ಬಿತ್ತರದ ಬಾಂದಳವೆ ಗೋಪುರಂ । ಹೊಳೆಗಳಲಿ**
**ಹರಿವ ಸಲಿಲವೆ ತೀರ್ಥ । ಸುಮಗಂಧವೇ ಧೂಪ**
**ಹಕ್ಕಿಯಿಂಚರವೆ ಸುಸ್ವರ ಮೇಳ ।**
**ತಿರೆಗಿಂತ ದೇಗುಲವದೊಳದೇನು ?"**

ಎಂದು ಪ್ರಶ್ನಿಸುತ್ತಾನೆ. ಪ್ರಕೃತಿ ಮತ್ತು ದೇವರ ನಡುವಿನ ಅಬೇಧ ಕಲ್ಪನೆಯನ್ನು ಇಲ್ಲಿ ಕಾಣಬಹುದು.

ಪ್ರಕೃತಿಯೆಡೆಗಿನ ಅವರ ಪ್ರೀತಿ ಕೇವಲ ಸೌಂದರ್ಯನಿಷ್ಟವಾದುದು ಮಾತ್ರವಲ್ಲದೇ ಅದಕ್ಕೂ ಮೀರಿದ ಆಧ್ಯಾತ್ಮಿಕ ಭಾವ ಅದರಲ್ಲಿರುತ್ತದೆ. ಪರಿಸರ ನಾಶದ ತಲ್ಲಣಗಳನ್ನು ಎದುರಿಸುತ್ತಿರುವ ಇಂದಿನ ದಿನಗಳಲ್ಲಿ ಕುವೆಂಪುರವರ ನಿಲುವು ನಮಗೆ ಪ್ರಕೃತಿಯನ್ನು ಪ್ರೀತಿಸುವುದಷ್ಟೇ ಅಲ್ಲ ಆರಾಧಿಸುವುದನ್ನೂ ಕಲಿಸುತ್ತದೆ.

**ಆತ್ಮ – ಪರಮಾತ್ಮದ ಅಭೇಧ** – ನಾಟಕದ ಕೇಂದ್ರ ಪಾತ್ರ 'ಜಲಗಾರ'. ಆತ ಸಮಾಜದ ಯಾವುದೇ ಸ್ತರಕ್ಕೆ ಸೇರಿದವನಾಗಿರಲಿ ಕವಿ ಬಯಸುವ ಪರಿಪೂರ್ಣ ವ್ಯಕ್ತಿತ್ವವನ್ನು ಹೊಂದಿದವನು. 'ಲೋಕರೂಢಿಯ ದೃಷ್ಟಿಯಿಂದ ಎಷ್ಟೇ ಅಲ್ಪವಾದುದಾಗಲೀ, ಎಷ್ಟೇ ಮಹತ್ತಾದುದ್ದಾಗಲೀ, ಪ್ರತಿಯೊಂದು ವಸ್ತು–ಸನ್ನಿವೇಶವನ್ನು ವಿರಾಟ್ ದೃಷ್ಟಿಯಿಂದ ನೋಡಲೆಳೆಸುವುದು ನನಗೊಂದು ಹುಚ್ಚು. ಹಾಗೆ ನೋಡಿದರೆ ಅಲ್ಪತ್ವ – ಮಹತ್ವಗಳು ಮಾಯವಾಗಿ ಸಮತ್ವ ಮೂಡುತ್ತದೆ' ಇದು ಕುವೆಂಪುರವರ ಲೋಕ ಗ್ರಹಿಕೆಯ ರೀತಿ. ಹೀಗಾಗಿಯೇ ಸಾಮಾನ್ಯರ ಕಣ್ಣಿಗೆ ಅತೀ ಸಾಮಾನ್ಯನಾಗ ಬಹುದಾದ ಜಲಗಾರ ಕುವೆಂಪು ದೃಷ್ಟಿಯಲ್ಲಿ ಪರಿಪೂರ್ಣ ವ್ಯಕ್ತಿತ್ವದವನಾಗಿದ್ದಾನೆ.

ಅತ್ಯಂತ ವಿಜೃಂಭಣೆಯಿಂದ ನಡೆಯುವ ಶಿವಗುಡಿಯ ಜಾತ್ರೆಗೆ ತೆರಳಲು ನಿರಾಕರಿಸುವ ಆತನಿಗೆ ಕರ್ಮವೇ ಆರಾಧನೆ, ಸೇವೆಯೇ ಪೂಜೆ, ಪೊರಕೆಯೇ ಆರತಿ, ಗುಡಿಸುವುದೇ ದೇವರಪೂಜೆ. ತನ್ನನ್ನು ಜಾತ್ರೆಗೆ ಕರೆದ ರೈತನಿಗೆ

**"ಯಾವೆಡೆಯೊಳಾನಿಹೆನೋ ಅವನಲ್ಲಿಯೇ ಇಹನು**
**ನನ್ನೆದೆಯೆ ದೇಗುಲ, ನನ್ನೊಲ್ಮೆಯದೆ ಪೂಜೆ"**

ಎಂದು ಶಿವನನ್ನು ಕಾಣಲು ಗುಡಿಗೆ ತೆರಳಬೇಕಾದ ಅಗತ್ಯವಿಲ್ಲವೆಂದು ಹೇಳುತ್ತಾ "ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು?" ಎಂದು ಪ್ರಶ್ನಿಸುತ್ತಾನೆ.

'ದೇವರು' ನಮಗಿಂತ ಬಹಳವೇ ದೂರ ಇರುವ ಒಂದು ಶಕ್ತಿ ಎಂಬ ಭಾವವನ್ನೇ ಜಲಗಾರನ ಮೂಲಕ ಕುವೆಂಪು ನಿರಾಕರಿಸುತ್ತಾರೆ.

**ಅಹಂ ಬ್ರಹ್ಮಾಸ್ಮಿ :** ಶಿವನ ಗುಡಿಯಲ್ಲಿ ಇಲ್ಲದ ಶಿವನನ್ನು ಅರಸುತ್ತಾ ಹೊರಟ ರೈತ, ತರುಣರು, ಪಾರ್ವರಿಗೆ ಕಾಣದ ಶಿವ ದುಡಿಮೆಯೇ ದೇವರೆಂದು ಭಾವಿಸುವ ಜಲಗಾರನನ್ನೇ ಅರಸಿ ಬರುತ್ತಾನೆ.

ಬೀದಿಗುಡಿಸುವ ಬಡವನೆದೆಯಲ್ಲಿ, ಉಳುತ್ತಿರುವ ಒಕ್ಕಲಿಗನೆದೆಯಲ್ಲಿ, ತಾನಿರುವೆನೆನ್ನುತ್ತಾ

**"ನೀನೇ ಶಿವಭಕ್ತ, ನಿನ್ನದೇ ಶಿವಭಕ್ತಿ**
**ನೀನೆ ನಾನಾಗಿಹೆನು, ನಾನೆ ನೀನಾಗಿರುವೆ**
**ಶಿವ ನೀನು । ಶಿವ ನೀನು"**

ಎನ್ನುವನು. ಭಾವಪರವಶತೆಗೆ ಒಳಗಾದ ಜಲಗಾರ ತಾನೇ ಶಿವನೆಂದು ಶಿವನನ್ನು ಆಲಂಗಿಸುವನು.

ಪರಿಪೂರ್ಣ ವ್ಯಕ್ತಿತ್ವದ, ಕಾಯಕವನ್ನೇ ಕೈಲಾಸವೆಂದು ಭಾವಿಸುವ ಪ್ರಕೃತಿ ಪ್ರೇಮಿ, ಕರ್ಮಯೋಗಿ ಜಲಗಾರನು ಕೊನೆಗೆ ಶಿವನೇ ಆಗುತ್ತಾನೆ ಎಂಬುದು ನಾಟಕದ ಅಂತಿಮ ನೆಲೆ. ಇದೇ ಅದ್ವೈತವು ಹೇಳುವ 'ಅಹಂ ಬ್ರಹ್ಮಾಸ್ಮಿ'.

ಅದ್ವೈತವೆಂದರೆ ಯಾವುದೇ ಬಗೆಯ ತಾರತಮ್ಯ, ಮೇಲು–ಕೀಳುಗಳಿಲ್ಲದ ಏಕತೆ. ಇಲ್ಲಿಯೂ ಕೂಡಾ ಜಲಗಾರನ ವೇಷದಲ್ಲಿ ಬರುವ ಶಿವ ಜಲಗಾರನನ್ನು ಒಪ್ಪಿ ಅಪ್ಪಿಕೊಳ್ಳುವಾಗ ಯಾವುದೇ ಬಗೆಯ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ತರಗಳು ಅಡ್ಡಿಯಾಗಲಿಲ್ಲವೆಂಬುದು ಗಮನಿಸತಕ್ಕ ಅಂಶ. ಜೊತೆಗೆ ಅಸಮಾನತೆಯ ತಳಹದಿಯ ಮೇಲೆ ರೂಪಿತವಾಗಿರುವ ಸಾಮಾಜಿಕ ವ್ಯವಸ್ಥೆಯನ್ನು, ಹುಟ್ಟಿನಿಂದಲೇ ವ್ಯಕ್ತಿಯ ಗುಣಾವಗುಣಗಳನ್ನು, ಪ್ರತಿಭೆಯನ್ನು ನಿರ್ಧರಿಸುವುದನ್ನು ಕುವೆಂಪು ವಿರೋಧಿಸಿದಂತೆ ಅದ್ವೈತವೂ ವಿರೋಧಿಸುತ್ತದೆ.

ಒಟ್ಟಾರೆ ಕುವೆಂಪು ತಮ್ಮ ನಾಟಕದ ಮೂಲಕ ಪ್ರತಿಪಾದಿಸಿದ ಏಕತೆ/ಅದ್ವೈತ ಏಕಕಾಲಕ್ಕೆ ಆಧ್ಯಾತ್ಮಿಕವೂ ಹೌದು; ಸಾಮಾಜಿಕವೂ ಹೌದು. ಶಂಕರರ ಅದ್ವೈತ ಆಧ್ಯಾತ್ಮಿಕ ಸಾಧಕನಿಗೆ ಮಾತ್ರ ಸಂಬಂಧಪಟ್ಟಿದ್ದರೆ ಕುವೆಂಪುರವರ ತಾತ್ವಿಕತೆ ಅದನ್ನೂ ಮೀರದುದಾಗಿದ್ದು, ತನ್ನೊಟ್ಟಿಗೆ ವಿಶ್ವವನ್ನೇ ಕೊಂಡೊಯ್ಯುವ ಸಮಾನತೆ, ಸರ್ವೋದಯ, ವಿಶ್ವಮಾನವತೆಗಳೆಂಬ ಸಂದೇಶಗಳ ಸಾಕಾರರೂಪವಾಗಿದೆ. ಈ ಕಾರಣಕ್ಕಾಗಿಯೇ ಎಲ್ಲ ಜಾತಿ, ಮತ, ಪಂಥಗಳನ್ನು ನಿರಾಕರಿಸುವ ಕುವೆಂಪುರವರ 'ಆಧ್ಯಾತ್ಮ' ನಮಗಿಂದು ಹೆಚ್ಚು ಪ್ರಸ್ತುತವೆನಿಸುತ್ತದೆ.

### ಆಕರ ಗ್ರಂಥಗಳು


- **ಜಲಗಾರ** : ಕುವೆಂಪು
- **ಬೌದ್ಧಮೀಮಾಂಸೆ** : ಅಂತರಜಾಲ ಪುಟ
- **ಕುವೆಂಪು** : ಕೃತಿವಿಮರ್ಶೆ: ಸಂ. ಅರವಿಂದ ಮಾಲಗತ್ತಿ
- **ಸಂಕ್ರಮಣ** : 2005


– 14ನೇ ಪುಟದಿಂದ ಮುಂದುವರೆದುದು


- **ನಾಗಮೋಹನದಾಸ್, ಎಚ್. ಎನ್.** (2019) : ಸಂವಿಧಾನ ಓದು, ಹೊನ್ನಾವರ ಸಹಯಾನ
- **ಭಾರತ ಸರ್ಕಾರ** (2011) : ಭಾರತದ ಸಂವಿಧಾನ, ಬೆಂಗಳೂರು ಕಾನೂನು ಮತ್ತು ನ್ಯಾಯ ಮಂತ್ರಾಲಯ, ವಿಧಾಯಿ ಇಲಾಖೆ.
- **ಭಾರತ ಸಂವಿಧಾನ ರಚನಾ ಸಭೆಯ ಚರ್ಚೆಗಳು** (ನಡವಳಿಗಳು) (2017) : ಸಂ.1 ಮತ್ತು 10, ಬೆಂಗಳೂರು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- **ಮೇರುನಂದನ್ ಕೆ.ಬಿ.** (2015) : ಭಾರತ ಸಂವಿಧಾನ ಒಂದು ಪರಿಚಯ, ಬೆಂಗಳೂರು ಮೆರುಗು ಪ್ರಕಾಶನ.
- **ಶಿಬಾನಿಕಿಂಕರ್ ಚೌಬೆ, (ಅನು. ಎಸ್.ಆರ್. ಗೌತಮ್)** (2016) : ಭಾರತ ಸಂವಿಧಾನದ ರಚನೆ ಮತ್ತು ಪ್ರಯೋಗ, ನವದೆಹಲಿ ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ.
- **ಪತ್ರಿಕೆ – ಪ್ರಜಾವಾಣಿ, ಬೆಂಗಳೂರು,** ದಿ. 19ನೇ ಜ. 2020, ರಹಮತ್ ತರೀಕೆರೆ, ಸಂವಿಧಾನ ಪೀಠಿಕೆ (ಲೇ.)


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಚಿತ್ರದುರ್ಗ ಜಿಲ್ಲೆಯ ಮಹಿಳಾ ಕಿರಾಣಿ ಗ್ರಾಹಕರ ಖರೀದಿ ನಡವಳಿಕೆಯ ಮೇಲೆ ಪರಿಣಾಮ ಬೀರುವ ಅಂಶಗಳು–ಒಳನೋಟ

**ಹೇಮಾ ಜಿ.**, ಪಿಎಚ್.ಡಿ ಸಂಶೋಧನಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–583276

*ಸಾರಲೇಖ*

*ಮನೆಯ ಖರ್ಚಿನ ಸುಮಾರು 80 ಪ್ರತಿಶತವನ್ನು ಅವರು ನಿಯಂತ್ರಿಸುವುದರಿಂದ ಮಹಿಳೆಯರು ವಿಶ್ವದ ಅತ್ಯಂತ ಶಕ್ತಿಶಾಲಿ ಗ್ರಾಹಕರು. ಮತ್ತು ಇನ್ನು ಮುಂದೆ ಮಹಿಳೆಯರ ಖರ್ಚು ಅಧಿಕಾರ ಮತ್ತು ಪ್ರಭಾವವನ್ನು ನಿರ್ಲಕ್ಷಿಸಲಾಗುವುದಿಲ್ಲ. ಸಮಾಜದಲ್ಲಿ ಮಹಿಳೆಯರ ಪಾತ್ರ ಮತ್ತು ಅವುಗಳ ಪರಿಣಾಮಗಳು ಬದಲಾಗಿವೆ. ಹೆಚ್ಚಿನ ಮಾರಾಟಗಾರರು 'ಮಹಿಳೆಯರು ವಿಭಿನ್ನರು' ಎಂದು ತಿಳಿದಿದ್ದಾರೆ, ಆದರೆ ಅವರು ಹೇಗೆ ಮತ್ತು ಏಕೆ ಭಿನ್ನರಾಗಿದ್ದಾರೆ ಎಂಬ ಬಗ್ಗೆ ನಮಗೆ ಆಳವಾದ ಬೇರೂರಿದೆ. ಕುಟುಂಬ ಕಿರಾಣಿ ಶಾಪಿಂಗ್ ಮಹಿಳೆಯರ ಅಂಗೀಕೃತ ಡೊಮೇನ್ ಆಗಿರುವುದರಿಂದ ಮಹಿಳೆಯರನ್ನು ಅಧ್ಯಯನ ಮಾಡುವುದು ಆಸಕ್ತಿದಾಯಕವಾಗಿದೆ. ಆದಾಗ್ಯೂ, ಆಧುನಿಕ ಸಾಮಾಜಿಕ ಮತ್ತು ಜನಸಂಖ್ಯಾ ಚಲುವಳಿಗಳು ಕುಟುಂಬ ರಚನೆಯೊಳಗಿನ ಸಾಂಪ್ರದಾಯಿಕ ಲಿಂಗ ಪಾತ್ರಗಳನ್ನು ಪ್ರಶ್ನಿಸುತ್ತವೆ. ಈ ಕಾಗದವು ಮಹಿಳೆಯರ ಖರೀದಿ ನಡವಳಿಕೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತದೆ ಮತ್ತು ಆಕೆಯ ಖರೀದಿ ನಡವಳಿಕೆಯಲ್ಲಿ ಯಾವ ಅಂಶಗಳು ಮಹತ್ವದ ಪಾತ್ರ ವಹಿಸುತ್ತವೆ ಎಂಬುದನ್ನು ತಿಳಿಯುವ ಪ್ರಯತ್ನವನ್ನು ಮಾಡುತ್ತದೆ.*

## ಪೀಠಿಕೆ

ಪ್ರಸ್ತುತ ಯುಗದಲ್ಲಿ ಗ್ರಾಹಕ ರಾಜ. ಒಂದು ನಿರ್ದಿಷ್ಟ ಗುಂಪಿನಲ್ಲಿರುವ ಜನರ ಪ್ರಾಬಲ್ಯವು ಉತ್ಪನ್ನ, ಸೇವೆ, ಅಸ್ತಿತ್ವ, ವ್ಯಕ್ತಿ, ಸ್ಥಳ ಅಥವಾ ಬಗ್ಗೆ ಒಂದು ರೀತಿಯಲ್ಲಿ ಅಥವಾ ಇನ್ನೊಂದನ್ನು ಅನುಭವಿಸಿದಾಗ ವಿಷಯ, ಇದು ಸಾಮಾನ್ಯ ಗ್ರಾಹಕ ವರ್ತನೆ ಎಂದು ಹೇಳಲಾಗುತ್ತದೆ. ಆ ವ್ಯಕ್ತಿ, ಉತ್ಪನ್ನ ಅಥವಾ ಅಸ್ತಿತ್ವದ ಮಾರ್ಕೆಟಿಂಗ್ ಅನ್ನು ಧನಾತ್ಮಕ ಅಥವಾ ಋಣಾತ್ಮಕ ರೀತಿಯಲ್ಲಿ ಪರಿಣಾಮ ಬೀರಬಹುದು. ಮಾರುಕಟ್ಟೆದಾರರು ಗ್ರಾಹಕರ ವರ್ತನೆಗಳ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಾರೆ, ಮತ್ತು ಚಾಲ್ತಿಯಲ್ಲಿರುವ ಮನೋಭಾವವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಿದ್ದರೆ ಅದನ್ನು ಬದಲಾಯಿಸುವ ಮೊದಲ ಹೆಜ್ಜೆಯಾಗಿದೆ. ವರ್ತನೆಗಳು “ಮಾನಸಿಕ ಸ್ಥಿತಿಗಳನ್ನು ಬಳಸಲಾಗುತ್ತದೆ. ವ್ಯಕ್ತಿಗಳು ತಮ್ಮ ಪರಿಸರವನ್ನು ಗ್ರಹಿಸುವ ವಿಧಾನವನ್ನು ರೂಪಿಸಲು ಮತ್ತು ಅದಕ್ಕೆ ಅವರು ಪ್ರತಿಕ್ರಿಯಿಸುವ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಾರೆ.

ಗ್ರಾಹಕರ ನಡವಳಿಕೆಯು ಜನರು ಹೇಗೆ ಖರೀದಿಸುತ್ತಾರೆ. ಎಂಬುದರ ಅಧ್ಯಯನವಾಗಿದೆ. ಅವರು ಏನು ಖರೀದಿಸುತ್ತಾರೆ, ಅವರು ಖರೀದಿಸಿದಾಗ ಮತ್ತು ಏಕೆ ಖರೀದಿಸುತ್ತಾರೆ. ಇದು ಖರೀದಿದಾರನ ನಿರ್ಧಾರ ಪ್ರಕ್ರಿಯೆಗಳು/ಖರೀದಿದಾರ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಪ್ರತ್ಯೇಕವಾಗಿ ಮತ್ತು ಗುಂಪುಗಳಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಇದು ವೈಯಕ್ತಿಕ ಗ್ರಾಹಕರ ಗುಣಲಕ್ಷಣಗಳನ್ನು ಅಧ್ಯಯನ ಮಾಡುತ್ತದೆ. ಉದಾಹರಣೆಗೆ ಜನಸಂಖ್ಯಾಶಾಸ್ತ್ರ, ಮನಃಶಾಸ್ತ್ರ ಮತ್ತು ನಡವಳಿಕೆ ಜನರ ಬಯಕೆಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ಅಸ್ಥಿರ. ಅದು ಗ್ರಾಹಕರಿಂದ ಪ್ರಭಾವಗಳನ್ನು ನಿರ್ಣಯಿಸಲು ಸಹ ಪ್ರಯತ್ನಿಸುತ್ತದೆ. ಕುಟುಂಬಗಳು, ಸ್ನೇಹಿತರು, ಉಲ್ಲೇಖ ಗುಂಪುಗಳು ಮತ್ತು ಸಾಮಾನ್ಯವಾಗಿ ಸಮಾಜ. (1) ಗ್ರಾಹಕರ ನಡವಳಿಕೆಯನ್ನು ಅಧ್ಯಯನ ಮಾಡುವುದು ಚಿಲ್ಲರೆ ವ್ಯಾಪಾರವು ಭಾರತದ ಅತಿದೊಡ್ಡ ಉದ್ಯಮವಾಗಿರುವುದರಿಂದ ಚಿಲ್ಲರೆ ವ್ಯಾಪಾರವು ಪ್ರಾಮುಖ್ಯತೆಯನ್ನು ಹೊಂದಿದೆ. ಇದು ಭಾರತದ ಜಿಡಿಪಿಯ ಶೇಕಡಾ 10 ಕ್ಕಿಂತ ಹೆಚ್ಚು ಮತ್ತು ಸುಮಾರು ಎಂಟು ಶೇಕಡಾ ಉದ್ಯೋಗ. ಚಿಲ್ಲರೆ ಕ್ಷೇತ್ರವು ಭಾರತದ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರಗಳಲ್ಲಿ ಒಂದಾಗಿದೆ ಶೇಕಡಾ ಸಂಯುಕ್ತ ವಾರ್ಷಿಕ ಬೆಳವಣಿಗೆ ದರ. ಭಾರತದ ಬೃಹತ್ ಮಧ್ಯಮ ವರ್ಗದ ಮೂಲ ಮತ್ತು ಅದರ ಚಿಲ್ಲರೆ ಉದ್ಯಮವು ಪ್ರಮುಖವಾಗಿದೆ. ಹೊಸ ಮಾರುಕಟ್ಟೆಗಳಲ್ಲಿ ಪ್ರವೇಶಿಸಲು ಯೋಜಿಸುತ್ತಿರುವ ಜಾಗತಿಕ ಚಿಲ್ಲರೆ ದೈತ್ಯರಿಗೆ ಆಕರ್ಷಣೆಗಳು. ಜೀವನ ಶೈಲಿಯನ್ನು ಬದಲಾಯಿಸುವ ಮೂಲಕ, ಬಲವಾದ ಆದಾಯ ಬೆಳವಣಿಗೆ ಮತ್ತು ಅನುಕೂಲಕರ ಜನಸಂಖ್ಯಾ ಮಾದರಿಗಳು, ಭಾರತೀಯ ಚಿಲ್ಲರೆ ವಾರ್ಷಿಕವಾಗಿ ಶೇಕಡಾ 25 ರಷ್ಟು ಬೆಳೆಯುವ ನಿರೀಕ್ಷೆಯಿದೆ.

ಭಾರತದಲ್ಲಿ ಚಿಲ್ಲರೆ ಮೌಲ್ಯವು 5,17,5200 ಯುಎಸ್ ಆಗಿರಬಹುದು ಎಂದು ನಿರೀಕ್ಷಿಸಲಾಗಿದೆ 2016 ರ ಹೊತ್ತಿಗೆ ಬಿಲಿಯನ್. (2), (3) ಆದರೆ ವರ್ತನೆ ಒಂದು ದೊಡ್ಡ ಕ್ಷೇತ್ರ, ಮತ್ತು ಮಹಿಳೆಯರು ಖರೀದಿ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳಬೇಕು ಅದರ ದೊಡ್ಡ ಭಾಗ. ಪುರುಷ ಮತ್ತು ಸ್ತ್ರೀ ಲಿಂಗ ಸಂಸ್ಕೃತಿಗಳ ನಡುವಿನ ವ್ಯತ್ಯಾಸಗಳು ಏಕರೂಪವಾಗಿರಲು ಸಾಧ್ಯವಿಲ್ಲ ಎಂದರ್ಥ ಗ್ರಾಹಕರು ಹೇಗೆ ವರ್ತಿಸುತ್ತಾರೆ ಎಂಬುದರ ವ್ಯಾಖ್ಯಾನ. (5) ಈಗ ಒಂದು ದಿನಗಳು ಮಹಿಳೆಯರು ಹಾರ್ಡ್‌ಕೋರ್ 'ಗೃಹಿಣಿಯರ' ಪಾತ್ರವನ್ನು ಮಾತ್ರ ಮಾಡುತ್ತಿಲ್ಲ, ಅವರು 'ಮುಖ್ಯಸ್ಥ'ನ ವಿಭಿನ್ನ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಖರೀದಿ ಅಧಿಕಾರಿ ಮತ್ತು 85% ಖರೀದಿ ನಿರ್ಧಾರಗಳನ್ನು ನಿಯಂತ್ರಿಸುವುದು ಮತ್ತು ಮಹಿಳೆಯರು ಎಲ್ಲಾ ಗ್ರಾಹಕ ಖರೀದಿಗಳಲ್ಲಿ 85% ಮಾಡುತ್ತಾರೆ. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ. ಅಂತಹ ಕಾರಣಗಳಿಗಾಗಿ ಆರ್ಥಿಕ ಜಗತ್ತು ಈಗ ಉತ್ತಮ ಲೈಂಗಿಕತೆಯ ಪರವಾಗಿ ಯೋಚಿಸುತ್ತಿದೆ. ಜಿಎಫ್‌ಕೆ ಶಾಪಿಂಗ್ ವರ್ತನೆಗಳ ವಿಶೇಷ ಸಮೀಕ್ಷೆಯ ಆಧಾರದ ಮೇಲೆ ಕಸ್ಟಮ್ ಸಂಶೋಧನೆ, ಪಿ.ಎಲ್.ಎಂ.ಎ ಸಮೀಕ್ಷೆಯು ಮಹಿಳೆಯರ ದಿನಸಿ ಶಾಪಿಂಗ್ ಮಾಡುವಾಗ ಅವರ ಅಭ್ಯಾಸವನ್ನು ವಿಚಾರಿಸುತ್ತದೆ. ತಯಾರಿಕೆ ಮತ್ತು ಇತರ ಮನೆಯ ಕಾರ್ಯಗಳು.

## ಪ್ರಶ್ನೆಗಳನ್ನು ಒಳಗೊಂಡಿದೆ

1. ನೀವು ಶಾಪಿಂಗ್ ಪಟ್ಟಿಯನ್ನು ಮಾಡುತ್ತೀರಾ ?
2. ಕ್ಲಿಪ್ ಕೂಪನ್‌ಗಳು ?
3. ನೋಡಿ ವ್ಯವಹಾರಗಳಿಗಾಗಿ ?
4. ವಿಚಾರಗಳನ್ನು ಪಡೆಯುವುದೇ ?
5. ಇತರ ಬ್ರಾಂಡ್‌ಗಳನ್ನು ಪರಿಗಣಿಸುವುದೇ ?
6. ಬಜಾರಗಳನ್ನು ಬ್ರೌಸ್ ಮಾಡುವುದೇ ?

ISSN : 2249-2429 ಸಂಶೋಧನೆ RNI REG.NO.KARKAN/2011/38712

7. ನೀವು ಎಷ್ಟು ದಿನ ಇರುತ್ತೀರಿ ಅಂಗಡಿಯಲ್ಲಿ ?

8. ನೀವು ಎಷ್ಟು ಬೇಗನೆ ಹೊರಬರಲು ಬಯಸುತ್ತೀರಿ ?

ಕುಟುಂಬವನ್ನು ಯಾರು ಸಿದ್ಧಪಡಿಸುತ್ತಾರೆ ಎಂಬುದನ್ನು ಕಂಡು ಹಿಡಿಯಲು ಇತರ ಪ್ರಶ್ನೆಗಳಿಂದ ಪ್ರಯತ್ನಿಸಿದವು. ಲಾಂಡ್ರಿ ಮಾಡುತ್ತದೆ. ಮನೆಯನ್ನು ಸ್ವಚ್ಛಗೊಳಿಸುತ್ತದೆ, ಸಂಗ್ರಹಿಸುತ್ತದೆ. ಕ್ಯಾಬಿನೆಟ್, ಹುಲ್ಲುಹಾಸನ್ನು ಕತ್ತರಿಸುತ್ತದೆ ಮತ್ತು ಮನೆಯತ್ತ ಒಲವು ತೋರುತ್ತದೆ ರಿಪೇರಿ. ಮಹಿಳೆಯರ ಪಾತ್ರವು ಹೊಂದಿಲ್ಲ ಎಂದು ಅಧ್ಯಯನವು ಬಹಿರಂಗಪಡಿಸುತ್ತದೆ ಅನೇಕ ರೀತಿಯಲ್ಲಿ ಬದಲಾಯಿಸಲಾಗಿದೆ. 1,000 ರಲ್ಲಿ ಮೂರನೇ ಎರಡರಷ್ಟು ಅಥವಾ ಹೆಚ್ಚಿನದು ಅಧ್ಯಯನದ ಮಹಿಳೆಯರು ಕುಟುಂಬಕ್ಕಾಗಿ ಕಿರಾಣಿ ಶಾಪಿಂಗ್‌ನ ಬಹುಭಾಗವನ್ನು ನಿಭಾಯಿಸುತ್ತಾರೆ, ಹೆಚ್ಚಾಗಿ ತಯಾರಿಸುವವರು, ಮನೆಯನ್ನು ಸ್ವಚ್ಛಗೊಳಿಸುತ್ತಾರೆ, ಲಾಂಡ್ರಿ ಮಾಡುತ್ತಾರೆ. ಕ್ಯಾಬಿನೆಟ್ ಅನ್ನು ಸಂಗ್ರಹಿಸಿ ಮತ್ತು ಕುಟುಂಬ ಅಗತ್ಯಗಳಿಗಾಗಿ ಶಾಪಿಂಗ್ ಮಾಡಿ ಆಹಾರ ಹೊರತುಪಡಿಸಿ. ಮನೆಯ ಹೊರಗೆ, ಮಹಿಳೆಯರು ಈಗ ಮೂರನೇ ಒಂದು ಭಾಗವನ್ನು ಹೊಂದಿದ್ದಾರೆ. ರಾಷ್ಟ್ರದ ವಕೀಲರು ಮತ್ತು ವೈದ್ಯರು ಮತ್ತು ಅರ್ಧದಷ್ಟು ಕಾರ್ಮಿಕರು ಬಲ. ಹತ್ತರಲ್ಲಿ ಏಳು ಮಂದಿ ಆರ್ಥಿಕ ಅವಶ್ಯಕತೆಯಿಂದ ಕೆಲಸ ಮಾಡುತ್ತಾರೆ ಮತ್ತು ಹತ್ತರಲ್ಲಿ ನಾಲ್ವರು ತಮ್ಮ ಮನೆಗಳಿಗೆ ಏಕೈಕ ಪೂರೈಕೆದಾರರು ಎಂದು ಹೇಳುತ್ತಾರೆ. ವರ್ತಮಾನದ ಆಧಾರದ ಮೇಲೆ ಒಂದು ಪತ್ರಿಕೆ ಭವಿಷ್ಯ ನುಡಿದಿದೆ. ಪ್ರವೃತ್ತಿಗಳು, ಮುಂದಿನ ಪೀಳಿಗೆಯ ಹೊತ್ತಿಗೆ, ಹೆಚ್ಚಿನ ಕುಟುಂಬಗಳು ಇರುತ್ತವೆ. ಪುರುಷರಿಗಿಂತ ಮಹಿಳೆಯ ರಿಂದ ಬೆಂಬಲಿತವಾಗಿದೆ. ವಾಸ್ತವವಾಗಿ, ಈಗ ಮಹಿಳೆಯರು ಸುಮಾರು 60% ಕಾಲೇಜು ವಿದ್ಯಾರ್ಥಿಗಳನ್ನು ಮಾಡಿ ಮತ್ತು ಸಂಪಾದಿಸಿ ಬಹುಪಾಲು ಡಾಕ್ಟರೇಟ್ ಮತ್ತು ಸ್ನಾತಕೋತ್ತರ ಪದವಿಗಳು [6] .ಜೆಂಡರ್ ಸಂಸ್ಕೃತಿಯು ಮಹಿಳೆಯ ಜೀವನದ ಪ್ರತಿ ಕ್ಷಣದಲ್ಲೂ ಪರಿಣಾಮ ಬೀರುತ್ತದೆ. ಮಾರಾಟಗಾರ, ಕಾಳಜಿ ವಹಿಸುವ ಲಕ್ಷಣಗಳು ಅವಳು ಮಾರಾಟಗಾರರ ಉತ್ಪನ್ನದ ಬಗ್ಗೆ ಯೋಚಿಸುತ್ತಿರುವಾಗ ಅಥವಾ ಪ್ರತಿಸ್ಪರ್ಧಿ ಉತ್ಪನ್ನ. ಪುರುಷರು ಮತ್ತು ಮಹಿಳೆಯರು ತಮ್ಮ ವಿಭಿನ್ನ ಪಾಲನೆ ಮತ್ತು ಸಾಮಾಜಿಕತೆಯ ಕಾರಣದಿಂದಾಗಿ ಹಲವಾರು ಇತರರೊಂದಿಗೆ ಸಾಮಾಜಿಕ, ಜೈವಿಕ ಮತ್ತು ಮಾನಸಿಕ ಅಂಶಗಳು ವಿವಿಧ ಸಂದರ್ಭಗಳಲ್ಲಿ ವಿಭಿನ್ನ ರೀತಿಯ ನಡವಳಿಕೆಯನ್ನು ಚಿತ್ರಿಸುತ್ತದೆ. ಅದು ಇರಲಿ ವೈಯಕ್ತಿಕ ಜೀವನದಲ್ಲಿ ಅಥವಾ ವೃತ್ತಿಪರ ಜೀವನದಲ್ಲಿ ನಿರ್ಧಾರ ತೆಗೆದುಕೊಳ್ಳುವುದು, ಅದು ಶಾಪಿಂಗ್ ಅಥವಾ ತಿನ್ನುವ ಬಗ್ಗೆ ಇರಲಿ, ಎರಡೂ ಲಿಂಗಗಳು ವಿಭಿನ್ನವಾಗಿ ವರ್ತಿಸಿ.

## ಅಧ್ಯಯನದ ಉದ್ದೇಶ

**ಗ್ರಾಹಕರ ಖರೀದಿ ಪ್ರಕ್ರಿಯೆಯನ್ನು ಒಬ್ಬರು ಸರಳಗೊಳಿಸಬಹುದು ಐದು ಹಂತಗಳು**

ಎ. ಸಕ್ರಿಯಗೊಳಿಸುವಿಕೆ – ಜಾಗೃತಿ ಮೂಡಿಸುವ ಅವಶ್ಯಕತೆಯಿದೆ.

ಬಿ. ನಾಮನಿರ್ದೇಶನ – ವಿವಿಧ ಆಯ್ಕೆಗಳ ಆಯ್ಕೆ ಮೌಲ್ಯಮಾಪನ.

ಸಿ. ತನಿಖೆ ಮತ್ತು ನಿರ್ಧಾರ– ಬಗ್ಗೆ ಕಲಿಯುವುದು ಮತ್ತು ನಿಜವಾಗಿ ಖರೀದಿಸುವ ಮೊದಲು ಆಯ್ಕೆಗಳನ್ನು ಮೌಲ್ಯಮಾಪನ ಮಾಡುವುದು.

ಜ. ಧಾರಣ – ಉತ್ಪನ್ನ / ಸೇವೆಯನ್ನು ಬಳಸುವುದು ಮತ್ತು ನಿರ್ಧರಿಸುವುದು ಪುನರಾವರ್ತಿತ ಖರೀದಿಗಳ ಮೇಲೆ.

ಇ. ಶಿಫಾರಸು – ಉಲ್ಲೇಖಿಸುವುದು (ಅಥವಾ ವಿರುದ್ಧ ಎಚ್ಚರಿಕೆ) ಉತ್ಪನ್ನ / ಸೇವೆ. (5)




- **ಎ. ಭರದ್ವಾಜ್, ಎ. ಕೆ. ಪತಿ, ಎಚ್. ಶ್ರೀವಾಸ್ತವ ಎ. ಪಾಂಡ, ಎಸ್ ತ್ರಿಪಾಠಿ,ಪ್ರಾಬ್ಲೆಮ್ಸ್ ಫೇಸ್ಡ ಬೈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಸೆಕ್ಟಾರ್, (2018)** :ಇಂಟರ್ನ್ಯಾಷನಲ್ ಕಾನ್ಫರೆನ್ಸ್ ಆನ್ ಮಟೀರಿಯಲ್ಸ್ ಅಂಡ್ ಮ್ಯಾನುಫ್ಯಾಕ್ಚರಿಂಗ್, 390012093.


– 53ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಭಾರತೀಯ ಸ್ಟೇಟ್ ಬ್ಯಾಂಕಿನ ಮಹಿಳಾ ಉದ್ಯೋಗಿಗಳ ಒತ್ತಡದ ಮಟ್ಟ

✍ ಸವಿತಾ ಎಲ್. ಹೆಚ್. ಪಿಎಚ್.ಡಿ ಸಂಶೋಧನ ವಿದ್ಯಾರ್ಥಿನಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕ.ವಿ.ವಿ ಹಂಪಿ.
✍ ಡಾ. ಹನುಮಂತರಾಯುಡು ಬಿ. 7ನೇ ವಾರ್ಡ್ ವಾಲ್ಮೀಕಿ ನಗರ, ಕಂಪ್ಲಿ–ಕೊಟ್ಟಾಲ್ ಕಂಪ್ಲಿ, ಬಳ್ಳಾರಿ ಜಿಲ್ಲೆ.

*ಪ್ರಸ್ತಾವನೆ*

*ಹಿಂದಿನ ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳೆಯರು ಕೇವಲ ಮನೆಕೆಲಸಗಳಾದ ಸ್ವಚ್ಛತೆ, ಅಡಿಗೆ, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ಮಕ್ಕಳ ಪೋಷಣೆ ಮುಂತಾದವುಗಳಲ್ಲಿ ತೊಡಗುತ್ತಿದ್ದರು. ಅವರನ್ನು ಒಂದು ಕುಟುಂಬವನ್ನು ಕಟ್ಟುವವರೆಂದು ಭಾವಿಸಲಾಗಿ ಹೊರಗಿನ ಕೆಲಸಗಳಲ್ಲಿ ಭಾಗವಹಿಸಲು ಅವಕಾಶವನ್ನು, ಹಾಗೂ ಅವರ ಹಕ್ಕನ್ನು ಕಸಿದುಕೊಳ್ಳಲಾಗಿತ್ತು. ಆದರೆ ಇಂದಿನ ಚಿತ್ರಣವು ಬದಲಾಗಿದೆ. ಉತ್ತಮವಾದ ಶಿಕ್ಷಣದಿಂದ ಪತಿ, ಪತ್ನಿಯರೂ ಇಬ್ಬರೂ ಉದ್ಯೋಗಾವಕಾಶಗಳಿಂದ ಹೊರಗಿನ ಜಗತ್ತಿನಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನಿರಂತರವಾಗಿ ಬೆಲೆ ಮಟ್ಟದಲ್ಲಿ ಏರಿಕೆಯಾಗುತ್ತಿರುವ ಪ್ರಸ್ತುತ ಸನ್ನಿವೇಷದಲ್ಲಿ ತಮ್ಮ ಜೀವನವನ್ನು ನಿಬಾಯಿಸುವಲ್ಲಿ ಪತಿ ಹಾಗೂ ಪತ್ನಿಯರ ಪಾತ್ರ ಅತ್ಯವಶ್ಯವಾಗಿದೆ.*

*ಕಾಲಾನುಕ್ರಮದಲ್ಲಿ ಪತಿಗಿಂತ ಪತ್ನಿಯು ತನ್ನ ಜೀವನದ ಹೆಜ್ಜೆಯಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸುತ್ತಾ ಹೋದಳು. ಶಿಕ್ಷಣವು ಅವರನ್ನು ಸಬಲರನ್ನಾಗಿ ಮಾತ್ರ ಮಾಡುವುದಲ್ಲದೇ ಎಲ್ಲಾ ಕ್ಷೇತ್ರಗಳಲ್ಲೂ ಅತ್ಯಂತ ಬಿರುಸಿನ ಸಾಧನೆಯನ್ನು ಮಾಡಲು ಸಹಾಯಕವಾಯಿತು. ತಮ್ಮ ಮೆದುಳಿನ ಶಕ್ತಿ ಹಾಗೂ ಚುರುಕುತನದಿಂದ ಎಲ್ಲಾ ಉದ್ದಿಮೆಗಳಲ್ಲಿ ಮಹಿಳಾ ಉದ್ಯೋಗಿಗಳು ಪುರುಷರಿಗಿಂತ ಮೇಲ್ಗೈ ಸಾಧಿಸಿದರು. ಆದರೆ ಗೃಹ ಕೆಲಸವನ್ನು ನಿಭಾಯಿಸುವ ಕಾರ್ಯದಲ್ಲಿ ಯಾವುದೇ ಬದಲಾವಣೆ ಕಾಣಲಾಗಲಿಲ್ಲ. ಬಹುತೇಕ ಮನೆಗಳಲ್ಲಿ ಮಹಿಳೆಯೇ ಮನೆಗೆಲಸಗಳನ್ನು ನಿಬಾಯಿಸುತ್ತಾ ಅಡುಗೆ ಕೆಲಸವನ್ನು, ಕುಟುಂಬದ ನಿರ್ವಹಣೆಯನ್ನು ಹೊರಗಿನ ಕೆಲಸದೊಂದಿಗೆ ನಿಬಾಯಿಸುತ್ತಿರುವುದು ಕಂಡುಬರುತ್ತಿದೆ. ಮಹಿಳಾ ಉದ್ಯೋಗಿಗಳು ವಿವಾಹವಾದರೆ ಅವರ ಸಮಸ್ಯೆಯು ಮತ್ತಷ್ಟು ಕ್ಲಿಷ್ಟವಾಗುತ್ತದೆ. ಮನೆಗೆಲಸ, ಮಕ್ಕಳ ಪೋಷಣೆ, ಕುಟುಂಬದ ಜವಾಬ್ದಾರಿಯಿಂದ ಒತ್ತಡದ ಪರಿಮಾಣವು ಅಧಿಕಗೊಳ್ಳುತ್ತದೆ. ಈ ರೀತಿ ಎರಡೂ ಕಾರ್ಯದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಾ ಒತ್ತಡಕ್ಕೆ ಸಿಲುಕುತ್ತಾರೆ. ಈ ನಿಟ್ಟಿನಲ್ಲಿ ತಮ್ಮ ವೃತ್ತಿಪರ ಜವಾಬ್ದಾರಿಯನ್ನು ನಿಬಾಯಿಸುವಲ್ಲಿ ಅಧಿಕ ಒತ್ತಡಕ್ಕೆ ಸಿಲುಕುತ್ತಾರೆ.*

*ಒತ್ತಡವು ದೈಹಿಕ ಹಾಗೂ ಮಾನಸಿಕವಾಗಿ ಒಟ್ಟು ವ್ಯಕ್ತಿಯ ಮೇಲೆ ಪರಿಣಾಮವನ್ನು ಬೀರುತ್ತದೆ. ಇದು ದೈಹಿಕ ಅಥವಾ ಮಾನಸಿಕ ಅಥವಾ ಭಾವನಾತ್ಮಕ ಒತ್ತಡವಾಗಿರಬಹುದು. ಒಂದು ವಿಧದ ಆತಂಕವನ್ನು ಸೃಷ್ಟಿಸುವ ಸಂದರ್ಭ ಅಥವಾ ಅಂಶದಿಂದ ಒತ್ತಡವು ಉಂಟಾಗುತ್ತದೆ. ಹೆಚ್ಚಾಗಿರುವ ಭಾವನೆ, ಚಿಂತೆ ಮತ್ತು ಆತಂಕಕ್ಕೊಳಗಾಗಿದ್ದವರಿಗೆ ಒತ್ತಡವು ಹೆಚ್ಚಾಗುತ್ತದೆ. ಕೆಲವೊಮ್ಮೆ ನಮ್ಮ ಅನುಭವದಿಂದ ಒತ್ತಡ ಅಧಿಕವಾಗುತ್ತದೆ. ಇದು ಕೆಲವೊಮ್ಮೆ ಕೆಲಸವನ್ನು ಮುಗಿಸಲು ನಮಗೆ ಪ್ರೇರೇಪಿಸಲು ಅಥವಾ ಉತ್ತಮವಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡಬಹುದು. ಆದರೆ ನಾವು ಒತ್ತಡದಿಂದ ಕೂಡಿದರೆ ಒತ್ತಡವು ಹಾನಿಕಾರಕವಾಗಬಹುದು ಮತ್ತು ಇದು ನಮ್ಮ ಸಾಮಾನ್ಯ ಜೀವನದೊಂದಿಗೆ ದೀರ್ಘಾವಧಿಯವರೆಗೆ ಸಾಧಿಸುವ ಸಾಮರ್ಥ್ಯದ ಮೇಲೆ ಹಸ್ತಕ್ಷೇಪ ಮಾಡುತ್ತದೆ. ಉದ್ಯೋಗದ ಒತ್ತಡಕ್ಕೆ ಕಾರಣವೆಂದರೆ, ತಾನು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ಅಥವಾ ಕಂಪನಿಯ ಬೇಡಿಕೆಯನ್ನು ತನ್ನ ವೈಯಕ್ತಿಕ ಸಾಮರ್ಥ್ಯದಿಂದ ಪೂರೈಸುವಲ್ಲಿ ಅಸಫಲತೆ ಹೊಂದುವುದು. ಒತ್ತಡಕ್ಕೊಳಗಾದ ವ್ಯಕ್ತಿಯು ಶಾರೀರಿಕವಾಗಿ ಪ್ರತಿಕ್ರಿಯೆಯಿಂದ ತನ್ನ ಮಾನಸಿಕ ಹಾಗೂ ದೈಹಿಕ ಒತ್ತಡಕ್ಕೆ ಒಳಪಡುತ್ತಾನೆ. ಹೀಗೆ ಹಲವಾರು ಅಂಶಗಳು ಉದ್ಯೋಗದ ಒತ್ತಡಕ್ಕೆ ಕಾರಣವಾಗುತ್ತವೆ. ಅದು ನಕರಾತ್ಮಕ ಕೆಲಸದ ಹೊರೆ, ಪ್ರತ್ಯೇಕತೆ, ಅಧಿಕ ಅವಧಿಯ ಹೊರೆಯ ಕೆಲಸ, ವಿಷಮ ಸ್ಥಿತಿಯ ಪರಿಸರ, ಸ್ವಾಯತ್ತತೆಯ ಕೊರತೆ, ವ್ಯವಸ್ಥೆ ಹಾಗೂ ಸಹೋದ್ಯೋಗಿಗಳ ನಡುವೆ ಸಂಬಂಧಗಳ ತೊಂದರೆ, ಕಿರುಕುಳ, ಅವಕಾಶಗಳ ಕೊರತೆ, ವ್ಯಕ್ತಿಯ ಕೌಶಲ್ಯವನ್ನು ಅಧಿಕಗೊಳಿಸಲು ಪ್ರೇರಣೆಯ ಕೊರತೆ ಮುಂತಾದವುಗಳಿಂದ ಒತ್ತಡವು ಉಂಟಾಗುತ್ತದೆ. ಹಿಂದಿನ ಪೀಳಿಗೆಗಿಂತಲೂ ಇಂದು ಅಧಿಕ ಒತ್ತಡವನ್ನು ಉದ್ಯೋಗಿಗಳು ಎದುರಿಸುತ್ತಿದ್ದಾರೆ. ಕಾರ್ಯನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಸತತ ಒತ್ತಡದಿಂದ ಮಾನಸಿಕ ಹಾಗೂ ಶಾರೀರಿಕ ಸಮಸ್ಯೆಗಳು ಉಂಟಾಗಿ ಉನ್ನತ ಸ್ಥಾನಗಳನ್ನು ತಲುಪುವಲ್ಲಿ ಅಸಾಧ್ಯತೆ ಉಂಟಾಗುತ್ತದೆ.*

## ಅಧ್ಯಯನಗಳ ಸಮೀಕ್ಷೆ

1. **ಬಿ. ಕಿಶೋರಿ (2016) ಅವರು ಎ ಸ್ಟಡಿ ಆನ್ ವರ್ಕ್ ಸ್ಟ್ರೆಸ್ ಅಮಾಂಗ್ ಬ್ಯಾಂಕ್ ಎಂಪ್ಲಾಯಿಸ್ ಇನ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವಿಥ್ ರೆಫೆರೆನ್ಸ್ ಟು ತಿರುಚಿರಪಲ್ಲಿ** ಎಂಬ ಲೇಖನದಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ದೀರ್ಘಕಾಲದ ಕೆಲಸದಿಂದ ಹೆಚ್ಚು ಫಲಿತಾಂಶ ಕಂಡುಬಂದಿದೆ. ಆದರೆ ಖಾಸಗಿ ಮತ್ತು ಸಾರ್ವಜನಿಕ ವಲಯದ ಬ್ಯಾಂಕ್ ಉದ್ಯೋಗಿಗಳ ನಡುವೆ ಸಂಘರ್ಷ ಹಾಗೂ ರಾಜಕೀಯದ ಒತ್ತಡದ ಪಾತ್ರವು ಹೆಚ್ಚಿರುತ್ತದೆ. ಸುಮಾರು 1/3ರಷ್ಟು ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಅತಿಯಾದ ಒತ್ತಡವನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಬ್ಯಾಂಕುಗಳು ತಮ್ಮ ಉದ್ಯೋಗಿಗಳಿಗೆ ತಮ್ಮ ಕುಟುಂಬ ಜೀವನಕ್ಕೆ ಹಾಗೂ ಬ್ಯಾಂಕಿಂಗ್ ವೃತ್ತಿಗೆ ಧಕ್ಕೆಯಾಗದಂತೆ ಒತ್ತಡದ ನಡುವೆಯೂ ಗುರಿಯನ್ನು ತಲುಪಲು ತರಬೇತಿ ನೀಡಲಾಗುತ್ತಿದೆ ಎಂದು ಲೇಖಕಿಯು ಸೂಚಿಸಿದ್ದಾರೆ.

2. **ಬಿ. ನಾಗರಾಜು ಮತ್ತು ನಂದಿನಿ ಎಚ್. ಪಿ. (2013) ಅವರು ಸ್ಟ್ರೆಸ್ ಇನ್ ವಿಮೆನ್ ಎಪ್ಲಾಯಿ; ಎಸ್ಟಡಿ ಆನ್ ಇಫ್ಲೂಯೆನ್ಸ್ ಆಫ್ ಎಜ್** ಎಂಬ ಲೇಖನದಲ್ಲಿ ಉದ್ಯೋಗದ ಒತ್ತಡ ಮತ್ತು ಕೆಲಸದ ಹೊರೆ ಹಾಗೂ ಕೆಲಸದ ಸ್ವಭಾವವನ್ನು ಉಂಟುಮಾಡುತ್ತಾ ವಿಮೆ ಉದ್ಯೋಗಿಗಳ ನಡುವೆ ಒತ್ತಡವನ್ನು ಹೆಚ್ಚಿಸುತ್ತದೆ. ವಿಮೆ ಉದ್ಯಮದ ಪ್ರಸ್ತುತ ಸನ್ನಿವೇಶದಲ್ಲಿ ಉದ್ಯೋಗಿಗಳು ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ವಿಮೆ ಕ್ಷೇತ್ರದಲ್ಲಿನ ತೃಪ್ತಿಯ ಮಟ್ಟವನ್ನು ಅಳೆಯುವ ಮತ್ತು ಔದ್ಯೋಗಿಕ ಒತ್ತಡ, ಆರೋಗ್ಯ ಹಾಗೂ ಉದ್ಯೋಗ ತೃಪ್ತಿಯ ನಡುವಿನ ಸಂಬಂಧಗಳನ್ನು ಪರಿಶೋಧಿಸಲಾಗಿದೆ. ವಿಮೆ ನೌಕರರ ನಡುವೆ ಔದ್ಯೋಗಿಕ ಒತ್ತಡದ ಮೇಲೆ ವಯಸ್ಸಿನ ಅಂಶದ ಪ್ರಭಾವವನ್ನು ಅಳೆಯುವುದು ಹಾಗೂ ಉದ್ಯೋಗ ತೃಪ್ತಿಯ ಮೇಲೆ ಔದ್ಯೋಗಿಕ ಒತ್ತಡದ ಮಟ್ಟದ ಪ್ರಭಾವವನ್ನು ಮೌಲ್ಯಮಾಪನ ಮಾಡುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

3. **ಎಂ. ಎಸ್. ನಾರಾಯಣ ಮತ್ತು ಜೆ. ನೀಲಿಮ (2017) ಅವರು ವರ್ಕ್ ಲೈಫ್ ಬ್ಯಾಲೆನ್ಸ್ ಆಫ್ ದಿ ವಿಮೆನ್ ಎಂಪ್ಲಾಯಿಸ್ : ಎ ಸ್ಟಡಿ ಆನ್ ಎಸ್‌ಬಿಐ ಇನ್ ಕೃಷ್ಣಾ ಡಿಸ್ಟ್ರಿಕ್ಟ್** ಎಂಬ ಲೇಖನದಲ್ಲಿ 218 ಮಹಿಳಾ ಮಾಹಿತಿದಾರರನ್ನು ಆಯ್ಕೆಮಾಡಿಕೊಂಡು ಇವರಲ್ಲಿ ವಯೋಮಿತಿ, ವೈವಾಹಿಕ ಸ್ಥಿತಿ, ಶಿಕ್ಷಣ ಮುಂತಾದ ಅಂಶಗಳ ಮೂಲಕ ಅಧ್ಯಯನವನ್ನು ಕೈಗೊಂಡು ಮಾಹಿತಿ ನೀಡಿದ್ದಾರೆ. ವೃತ್ತಿಯಲ್ಲಿ ಮಹಿಳೆಯರು ಪ್ರಮುಖ ಭಾಗವಾಗಿದ್ದಾರೆ. ಉತ್ತಮ ಅರ್ಹತೆಯುಳ್ಳ ಮಹಿಳೆಯರು ಹಲವಾರು ಕಾರಣಗಳಿಂದ ಉದ್ಯೋಗವನ್ನು ತೊರೆದಿದ್ದಾರೆ. ಇಂಥವರಿಂದ ಕಾರಣಗಳನ್ನು ತಿಳಿದುಕೊಳ್ಳುವ ಅವಶ್ಯಕತೆಯಿದೆ. ತಾಯ್ತನ ಹಾಗೂ ಕುಟುಂಬದ ಹಲವು ಜವಾಬ್ದಾರಿಗಳಿಂದ ಉದ್ಯೋಗವನ್ನು ತೊರೆಯಬೇಕಾಗುತ್ತದೆ. ಈ ಅಧ್ಯಯನದಿಂದ ತಿಳಿಯುವುದೇನೆಂದರೆ ಬ್ಯಾಂಕಿಂಗ್ ವಲಯಗಳಲ್ಲಿ ಮಹಿಳೆಯರು ವೃತ್ತಿ ಜೀವನದ ಸಮತೋಲನ ಕಾಯ್ದುಕೊಳ್ಳುವಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಎರಡರ ನಡುವೆ ಸಮತೋಲನ ಕಾಯ್ದುಕೊಳ್ಳದಿದ್ದಲ್ಲಿ ಸಮಸ್ಯೆಯು ಉಲ್ಬಣಗೊಂಡು ತೀವ್ರ ಒತ್ತಡವನ್ನು ಎದುರಿಸುವ ಪರಿಸ್ಥಿತಿ ಉಂಟಾಗುತ್ತದೆ. ತಮ್ಮ ವೃತ್ತಿ ಬೆಳವಣಿಗೆಗಾಗಿ ತಮ್ಮ ದೃಷ್ಟಿಕೋನವನ್ನು ಬದಲಾಯಿಸುವ ಅಗತ್ಯವಿದೆ.

4. **ಕೆ.ಡಿ.ವಿ ಪ್ರಸಾದ್ ಮತ್ತು ಇತರರು (2016)ಅವರು ಎ ಕಂಪೇರೇಟಿವ್ ಅನಾಲಸಿಸ್ ಆನ್ ದಿ ಕಾಸೆಸ್ ಆಫ್ ಆಕುಪೇಷನಲ್ ಸ್ಟ್ರೆಸ್ ಅಮಾಂಗ್ ಮೆನ್ ಅಂಡ್ ವಿಮೆನ್ ಎಂಪ್ಲಾಯಿಸ್ ಅಂಡ್ ಇಟ್ಸ್ ಎಫೆಕ್ಟ್ ಆನ್ ಪರ್‌ಫಾರ್‌ಮೆನ್ಸ್ ಅಟ್ ದಿ ವರ್ಕ್‌ಪ್ಲೇಸ್ ಆಫ್ ಇನ್‌ಫರ್‌ಮೇಷನ್ ಟೆಕ್ನಾಲಜಿ ಸೆಕ್ಟರ್, ಹೈದರಾಬಾದ್** ಎಂಬ ಲೇಖನದಲ್ಲಿ ಐ.ಟಿ. ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ 110 ಪುರುಷರು ಮತ್ತು 90 ಮಹಿಳೆಯರನ್ನು ಒಳಗೊಂಡಿರುವ 200 ನೌಕರರ ಸಮೀಕ್ಷೆಯನ್ನು ವೈಯಕ್ತಿಕ ಅಂಶಕ್ಕೆ ಹಾಗೂ ಅವಲಂಬಿತ ಅಂಶಗಳು ನೌಕರರ ಕಾರ್ಯಕ್ಷಮತೆಯ ಮೇಲೆ ಅದರ ಪರಿಣಾಮವನ್ನು ತಿಳಿಸಲಾಗಿದೆ. ಮಧ್ಯಮ ಮಟ್ಟದ ಔದ್ಯೋಗಿಕ ಒತ್ತಡವು ಸಾಮಾನ್ಯವಾಗಿ ಕೆಲಸದ ಸ್ಥಳದಲ್ಲಿದ್ದು, ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಅಧ್ಯಯನದ ಫಲಿತಾಂಶಗಳು ಸೂಚಿಸುತ್ತವೆ. ಆರೋಗ್ಯ ಕುರಿತಂತೆ ಕೆಲಸದ ಸುದೀರ್ಘ ಕುಳಿತುಕೊಳ್ಳುವಿಕೆಯ ಪರಿಣಾಮದಿಂದ ಉದ್ಯೋಗಿಗಳಿಗೆ ದೀರ್ಘಕಾಲದ ಕುತ್ತಿಗೆ ಮತ್ತು ಬೆನ್ನು ನೋವಿನಿಂದ ಬಳಲುತ್ತಿದ್ದಾರೆ. ಅಧ್ಯಯನದ ಪ್ರಕಾರ ಮಹಿಳೆಯರು ಪುರುಷರಿಗಿಂತ ಹೆಚ್ಚು ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಆದರೂ ಪುರುಷರು ಮತ್ತು ಮಹಿಳೆಯರಲ್ಲಿ ಒತ್ತಡವನ್ನು ಉಂಟುಮಾಡುವ ಅಂಶಗಳು ಒಂದೇ ರೀತಿಯಾಗಿರುವುದಿಲ್ಲ. ಮಹಿಳೆಯರು ವೃತ್ತಿ ಸ್ಥಳದಲ್ಲಿ ಅಧಿಕ ಒತ್ತಡದಿಂದ ಕುಟುಂಬ ಹಾಗೂ ವೃತ್ತಿಯ ನಡುವಿನ ಅಸಮತೋಲನ ನಿಬಾಯಿಸುವಲ್ಲಿ ವಿಫಲರಾಗುತ್ತಿದ್ದಾರೆ.

5. **ಲಖ್‌ವಿಂದರ್ ಪಾಲ್‌ಸಿಂಗ್ ಮತ್ತು ಇತರರು (2012)ಅವರು ಇನ್‌ವೆಸ್ಟಿಗೇಷನ್ ಇನ್ ಟು ಸಟೀಸ್‌ಫ್ಯಾಕ್ಷನ್ ಲೆವೆಲ್ ಆಫ್ ಮೇಲ್ಸ್ ಎಂಪ್ಲಾಯಿಸ್ ಆಫ್ ಇನ್ಸುರೆನ್ಸ್ ಇಂಡಸ್ಟ್ರಿ** ಎಂಬ ಲೇಖನದಲ್ಲಿ ಪ್ರಸ್ತುತ ಅಧ್ಯಯನವು ವಿಮೆ ಉದ್ಯಮದಲ್ಲಿ ಕಾರ್ಯನಿರ್ವಹಿಸುವ ಪುರುಷರ ತೃಪ್ತಿಕರ ಗುಣಮಟ್ಟದ ಕುರಿತಾಗಿದೆ. ಉದ್ಯೋಗದ ಒತ್ತಡ, ಅನಾರೋಗ್ಯ ಹಾಗೂ ಸಂಸ್ಥೆಯೊಡನೆ ಮಾಡಿಕೊಂಡ ಬದ್ಧತೆಯಿಂದ ಉಂಟಾಗುವ ತೊಂದರೆಯನ್ನು ತಿಳಿಸುತ್ತದೆ. ಈ ಮಾಹಿತಿಯ ಪರಿಶೀಲನೆಗಾಗಿ ಒಂದು ಡೇಟಾವನ್ನು ಪ್ರಯೋಗಿಸಿದಾಗ ಈ ಊಹೆಯು ಸತ್ಯವೆಂದು ತಿಳಿಸಿದ್ದಾರೆ. ಈ ಅಧ್ಯಯನದಲ್ಲಿ ಉದ್ಯೋಗಿಗಳ ಅತೃಪ್ತಿಕರ ಮಟ್ಟವೇ ಒತ್ತಡಕ್ಕೆ ಪ್ರಮುಖ ಕಾರಣವೆಂದು ಕಂಡುಬರುತ್ತದೆ. ಪುರುಷರ ತೃಪ್ತಿಕರ ಮಟ್ಟವು ಅವರ ಶಿಕ್ಷಣ ಮಟ್ಟ, ವಯೋಮಿತಿ, ನಿರಂತರ ಅಥವಾ ಅಧಿಕ ಅವಧಿಯ ಕಾರ್ಯ, ಖಾಸಗಿ ಹಾಗೂ ಸಾರ್ವಜನಿಕ ವಲಯ, ವೈವಾಹಿಕ ಸ್ಥಿತಿಗತಿ ಹಾಗೂ ಉದ್ಯೋಗದ ಗುಣಮಟ್ಟವನ್ನು ಅವಲಂಬಿಸಿರುತ್ತದೆ.

6. **ಹರಮನ್ ಪ್ರೀತ್‌ಸಿಂಗ್ ಮತ್ತು ಇತರರು (2012) ಅವರು ಆ್ಯನ್ ಇನ್‌ವೆಸ್ಟಿಗೇಷನ್ ಇನ್‌ಟು ಸಟಿಸ್‌ಫ್ಯಾಕ್ಷನ್ ಲೆವೆಲ್ ಆಫ್ ಫಿಮೇಲ್ಸ್ ಎಂಪ್ಲಾಯಿಸ್ ಆಫ್ ಇನ್ಸುರೆನ್ಸ್ ಇಂಡಸ್ಟ್ರಿ: ಎ ಸ್ಟಡಿ ಇನ್ ಇಂಡಿಯಾ** ಎಂಬ ಲೇಖನದಲ್ಲಿ ಮಹಿಳೆಯರ ಅತೃಪ್ತಿಯ ಮಟ್ಟವು ಒತ್ತಡಕ್ಕೆ ಪ್ರಮುಖ ಕಾರಣವಾಗಿದೆ. ಇದಕ್ಕೆ ಕಾರಣ ಉದ್ಯೋಗದ ಒತ್ತಡ, ಅನಾರೋಗ್ಯ ಹಾಗೂ ಸಂಸ್ಥೆಯೊಂದಿಗಿನ ಬದ್ಧತೆ. ಇದನ್ನು ತಿಳಿಯುವುದಕ್ಕೆ ಪ್ರಶ್ನಾವಳಿಯನ್ನು ರಚಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದರಿಂದ ತೆಗೆದುಕೊಂಡ ನಿರ್ಧಾರವೆಂದರೆ, ಭಾರತೀಯ ವಿಮೆ ಉದ್ಯಮವು ವಯಕ್ತಿಕ ಆರೋಗ್ಯವನ್ನು ನಾಶಪಡಿಸುತ್ತದೆ. ಮಹಿಳೆಯ ತೃಪ್ತಿಜೀವನದ ಮಟ್ಟವು ಅವರ ಶಿಕ್ಷಣದ ಮಟ್ಟ, ವಯೋಮಿತಿ, ನಿರಂತರ ಅಥವಾ ಅಧಿಕ ಅವಧಿಯ ಕಾರ್ಯ, ಕಾರ್ಯನಿರ್ವಹಿಸುತ್ತಿರುವ ಕಂಪನಿಯ ಹೆಸರು, ಖಾಸಗಿ ಅಥವಾ ಸಾರ್ವಜನಿಕ ವಲಯ, ವೈವಾಹಿಕ ಸ್ಥಿತಿ ಮತ್ತು ಉದ್ಯೋಗದ ಗುಣಮಟ್ಟವನ್ನು ಒಳಗೊಂಡಿರುತ್ತದೆ. ಇವುಗಳೆಲ್ಲ ಒತ್ತಡದಿಂದ ವಿಮೆಯ ಉದ್ಯೋಗಿಗಳ ಜೀವನದಲ್ಲಿ ಅಸಮತೋಲ ಉಂಟಾಗುತ್ತದೆ.

7. **ಡಬ್ಲ್ಯೂ. ಜೆ.ಕೋಟ್ಜೆರ್ ಮತ್ತು ಎಸ್.ರೋಥ್‌ಮನ್ (2006) ಅವರ ಆಕುಪೇಷನಲ್ ಸ್ಟ್ರೆಸ್ ಆಫ್ ಎಂಪ್ಲಾಯಿಸ್ ಇನ್ ಆ್ಯನ್ ಇನ್ಸುರೆನ್ಸ್ ಕಂಪನಿ** ಎಂಬ ಲೇಖನದ ಪ್ರಮುಖ ಉದ್ದೇಶವು ಅಂತರ ಸ್ಥಿತಿಯನ್ನು ಊಹಿಸುವುದು ಹಾಗೂ ವಿಮಾ ಕಂಪನಿಯ ಉದ್ಯೋಗಿಗಳ ಮೇಲುಂಟಾಗುವ ಉದ್ಯೋಗದ ಒತ್ತಡವನ್ನು ಪರಿಗಣಿಸುವುದು, ಇದರಿಂದ ಅನಾರೋಗ್ಯ ಮತ್ತು ಸಂಸ್ಥೆಯೊಂದಿಗಿನ ಬದ್ಧತೆಯನ್ನು ಕಾಯ್ದುಕೊಳ್ಳುವಲ್ಲಿ ಉಂಟಾಗುವ ಒತ್ತಡವನ್ನು ಅರಿಯುವುದು. ವಿಮೆ ಉದ್ಯಮದಲ್ಲಿ ಉದ್ಯೋಗ ಅಸ್ಥಿರತೆ, ವೇತನ ಹಾಗೂ ಪ್ರಯೋಜನೆಗಳನ್ನು ಪಡೆಯುವುದು ಬಹುದೊಡ್ಡ ಒತ್ತಡವಾಗಿದೆ. ಅತಿಯಾದ ಒತ್ತಡದಿಂದ ಆರೋಗ್ಯ ಸಮಸ್ಯೆ ಹಾಗೂ ಉದ್ಯೋಗ ಗುಣಲಕ್ಷಣಗಳನ್ನು ನಿಬಾಯಿಸುವುದು ವಿಮೆ ವಲಯದಲ್ಲಿ ಅತ್ಯಂತ ಕ್ಲಿಷ್ಟಕರ. ಈ ವಿಮೆ ವಲಯದ ಉದ್ಯೋಗಿಗಳು ಮೂರು ವಿಧದ ಒತ್ತಡವನ್ನು ಎದುರಿಸಬೇಕಾಗುತ್ತದೆ. ಉದ್ಯೋಗ ಜೀವನ ಸಮತೋಲನ, ಅತಿಯಾದ ಹೊರೆ ಹಾಗೂ ಉದ್ಯೋಗ ಗುಣಲಕ್ಷಣಗಳನ್ನು ಕಾಯ್ದುಕೊಳ್ಳುವುದು. ಇದರಿಂದ ನೇರವಾಗಿ ಮಾನಸಿಕ ಅನಾರೋಗ್ಯ ಉಂಟಾಗುತ್ತದೆ.

8. **ಶುಕ್ಲ ಮತ್ತು ಗಾರ್ಗ್ (2013) ಅವರು ಎ ಸ್ಟಡಿ ಆನ್ ಸ್ಟ್ರೆಸ್ ಮ್ಯಾನೇಜ್‌ಮೆಂಟ್ ಅಮಾಂಗ್ ದಿ ಎಂಪ್ಲಾಯಿಸ್ ಆಫ್ ನ್ಯಾಷನಲೈಜಡ್ ಬ್ಯಾಂಕ್ಸ್** ಎಂಬ ಲೇಖನದಲ್ಲಿ ಬಹುತೇಕ ಬ್ಯಾಂಕಿನ ಉದ್ಯೋಗಿಗಳು ತಮ್ಮಲ್ಲಿರುವ ಗುಣಮಟ್ಟದ ಕೊರತೆಯಿಂದ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಶೇ 50ರಷ್ಟು ಉದ್ಯೋಗಿಗಳು ಅತಿಯಾದ ಕೆಲಸಕ್ಕೆ ಒಳಪಟ್ಟಿದ್ದಾರೆ. ಶೇ 44ರಷ್ಟು ಉದ್ಯೋಗಿಗಳು ತಮ್ಮ ಕಾರ್ಯದ ಗುರಿಯನ್ನು ತಲುಪಲು ಸಾಧ್ಯವಾಗುತ್ತಿಲ್ಲದಿರುವುದರಿಂದ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಶೇ 38ರಷ್ಟು ಉದ್ಯೋಗಿಗಳು ತಮ್ಮ ಮಹತ್ವದ ದಿನನಿತ್ಯದ ಕೆಲಸಗಳನ್ನು ತಮ್ಮ ಬಾಸ್‌ನ ಆಜ್ಞೆಯನ್ನು ಪರಿಪಾಲಿಸಲು ತ್ಯಾಗಮಾಡಿರುತ್ತಾರೆ. ಇದು ಉದ್ಯೋಗಿಗಳಲ್ಲಿ ಭಯ ಹಾಗೂ ಒತ್ತಡವನ್ನು ಸೂಚಿಸುತ್ತದೆ. ಶೇ 50ರಷ್ಟು ಉದ್ಯೋಗಿಗಳು, ಉದ್ಯೋಗಿಗಳ ನಡುವೆ ಸಂಘರ್ಷವಿರುವುದನ್ನು ಒಪ್ಪಿಕೊಂಡಿದ್ದಾರೆ. ಶೇ 48ರಷ್ಟು ಉದ್ಯೋಗಿಗಳು, ಬ್ಯಾಂಕುಗಳ ಉದ್ಯೋಗಿಗಳ ಒತ್ತಡವನ್ನು ನಿರ್ವಹಿಸುವಲ್ಲಿ ಪರಿಣಾಮಕಾರಿಯಾಗಿದ್ದಾರೆ ಎಂದು ತಿಳಿದಿದ್ದಾರೆ. ಬಹುತೇಕ ಉದ್ಯೋಗಿಗಳು ತಮ್ಮ ಒತ್ತಡವನ್ನು ಶಮನಗೊಳಿಸಲು ಯತ್ನಿಸುತ್ತಿದ್ದಾರೆ. ಶೇ 50ರಷ್ಟು ಉದ್ಯೋಗಿಗಳು ಯೋಗಕ್ಕೆ ಮೊರೆ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಹೋಗಿದ್ದಾರೆ. ಕೆಲವು ಉದ್ಯೋಗಿಗಳು ಒತ್ತಡಗಳ ನಡುವೆಯೂ ಸಾಮಾಜಿಕ ಸಮತೋಲನವನ್ನು ಕಾಯ್ದುಕೊಳ್ಳುತ್ತಿದ್ದಾರೆ.

9. **ಮಸೂದ್ (2013) ಅವರು ಎಫೆಕ್ಟ್ಸ್ ಆಫ್ ಜಾಬ್ ಸ್ಟ್ರೆಸ್ ಆನ್ ಎಂಪ್ಲಾಯಿ ರಿಟೆನ್ಸ್‌ನ್** ಎಂಬ ಲೇಖನದಲ್ಲಿ ಬ್ಯಾಂಕಿನ ಉದ್ಯೋಗಿಗಳು ತಮ್ಮ ಸಾಮರ್ಥ್ಯದ ಶಕ್ತಿಯನ್ನು ಮೀರಿಯು ಹಲವು ಬಾರಿ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಬೆಂಬಲವಿಲ್ಲದ ಸಮಯದಲ್ಲಿಯೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಅಧಿಕ ಒತ್ತಡವಿದ್ದಾಗ ಕೆಲಸಗಳ ಮೇಲೆ ಪ್ರಭಾವ ಉಂಟಾಗಿ ಅವರ ಕಾರ್ಯನಿರ್ವಹಣೆಯ ಮಟ್ಟ ಕುಸಿಯುತ್ತದೆ. ಇಲ್ಲದಿದ್ದಲ್ಲಿ ವಹಿವಾಟು ಅಧಿಕಗೊಂಡು ಉತ್ತಮ ಪ್ರತಿಫಲ ಉಂಟಾಗಿ ಕಾರ್ಯನಿರ್ವಹಣೆಯ ಮಟ್ಟ ಅಧಿಕಗೊಳ್ಳುತ್ತದೆ. ಆದರೆ ಅತಿಯಾದ ಒತ್ತಡದಿಂದ ವಹಿವಾಟಿನ ಅನುಪಾತದ ಮೊತ್ತದಲ್ಲಿ ಇತ್ತೀಚಿನ ದಿನಗಳಲ್ಲಿ ಕುಸಿಯುತ್ತಿರುವುದು ಕಂಡುಬರುತ್ತದೆ. ಅತಿಯಾದ ಒತ್ತಡದಿಂದ ಆರೋಗ್ಯದಲ್ಲಿ ಏರುಪೇರುಗಳಾಗಿ ವಿಶ್ರಾಂತಿಯ ಅಗತ್ಯ ಕಂಡುಬರುತ್ತಿದೆ ಎಂದು ತಿಳಿಸಿದ್ದಾರೆ.

10. **ಎಸ್. ಉಮಾಮಹೇಶ್ವರಿ (2014) ಅವರು ಅಕುಪೇಷನಲ್ ಸ್ಟ್ರೆಸ್–ಎ ಸ್ಟಡಿ ವಿಥ್ ರೆಫೆರೆನ್ಸ್ ಟು ಸೆಲೆಕ್ಟೆಡ್ ಬ್ಯಾಂಕ್ ಎಂಪ್ಲಾಯಿಸ್ ಇನ್ ಚೆನ್ನೈ ರೀಜಿಯನ್** ಎಂಬ ಲೇಖನದಲ್ಲಿ ಒತ್ತಡಕ್ಕೆ ಕಾರಣವಾಗುವ ಅಂಶಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಬ್ಯಾಂಕಿಂಗ್ ವಲಯಗಳಲ್ಲಿ ಒತ್ತಡ ನಿರ್ವಹಣೆಯ ಕುರಿತು ಹಲವಾರು ಅಧ್ಯಯನಗಳನ್ನು ನಡೆಸಿ ಫಲಿತವನ್ನು ನೀಡಿದ್ದಾರೆ. ಹಲವು ಫಲಿತಗಳು ಸಕಾರಾತ್ಮಕ ಅಂಶಗಳನ್ನು ನೀಡಿವೆ. ಒತ್ತಡ ನಿರ್ವಹಣೆಯು ಸುವ್ಯವಸ್ಥಿತವಾಗಿದ್ದಲ್ಲಿ ಉತ್ಪಾದಕತೆಯು ಅಧಿಕಗೊಂಡಿರುವುದು ಕಂಡುಬರುತ್ತದೆ. ಆದಕಾರಣ ವ್ಯವಸ್ಥಿತವಾದ ಒತ್ತಡವು ಹಲವು ಸಂದರ್ಭಗಳಲ್ಲಿ ಸಕಾರಾತ್ಮಕ ಫಲಿತಾಂಶ ನೀಡುತ್ತದೆ. ಒತ್ತಡವನ್ನು ಸೂಕ್ತ ಮಟ್ಟದಲ್ಲಿಡುವುದು ಅವಶ್ಯಕ. ಪ್ರಸ್ತುತದಲ್ಲಿ ಒತ್ತಡವು ಮಿತವಾಗಿರುವುದು ಕಂಡುಬರುತ್ತದೆ. ಒತ್ತಡವನ್ನು ತರುವಂತಹ ವ್ಯವಸ್ಥಾಪಕ ಯೋಜನೆಗಳನ್ನು ಉದ್ಯೋಗಿಗಳ ನಿರೀಕ್ಷೆಗನುಗುಣವಾಗಿ ಬದಲಾಯಿಸಬಹುದು. ಖಾಸಗಿ ಬ್ಯಾಂಕ್‌ಗಳಲ್ಲಿ ಉದ್ಯೋಗದ ಅವಶ್ಯಕತೆಗಳಿಗನುಗುಣವಾಗಿ ಒತ್ತಡವನ್ನು ಹೇರಬಹುದು. ಅವಶ್ಯಕ ಹೆಜ್ಜೆಯನ್ನು ಒತ್ತಡವು ನೀಡುವಂತಿರಬೇಕು. ವ್ಯವಸ್ಥಾಪಕ ವರ್ತನೆಯು ಉದ್ಯೋಗಿಗಳನ್ನು ಉನ್ನತವಾಗಿ ಬೆಳೆಯಲು ತೃಪ್ತಿನೀಡುವಂತಿರಬೇಕು. ಇದರಿಂದ ಒತ್ತಡವೆನ್ನುವ ಅಂಶವೂ ಅವರ ಗಣನೆಗೆ ಬಂದಿರಕೂಡದು. ಉತ್ತಮ ವಿದ್ಯಾರ್ಹತೆ ಹಾಗೂ ಅನುಭಾವಸಕ್ತಿಗೆ ಗಮನ ಹರಿಸಬೇಕು. ಹಿರಿಯರಿಗೆ ಮತ್ತು ಅರ್ಹತೆಯುಳ್ಳ ಉದ್ಯೋಗಿಗಳಿಗೆ ಒತ್ತಡವನ್ನು ಎದುರಿಸಿ ಯಶಸ್ಸನ್ನು ಸಾಧಿಸುವ ತರಬೇತಿಯನ್ನು ನೀಡಬೇಕು. ಒತ್ತಡವನ್ನು ನಿವಾರಿಸಿಕೊಳ್ಳುವ ತಂತ್ರವನ್ನು ತಿಳಿಸಿಕೊಡಬೇಕು. ಈ ತಂತ್ರಗಳಿಂದ ಒತ್ತಡವನ್ನು ಶಮನಗೊಳಿಸಬಹುದು ಎಂದು ತಿಳಿಸಿದ್ದಾರೆ.

## ಅಧ್ಯಯನದ ಉದ್ದೇಶಗಳು

1. ಎಸ್.ಬಿ.ಐ. ಬ್ಯಾಂಕ್ ಮಹಿಳಾ ಉದ್ಯೋಗಿಗಳು ಎದುರಿಸುತ್ತಿರುವ ಒತ್ತಡಕ್ಕೆ ಕಾರಣವಾದ ಅಂಶಗಳನ್ನು ಗುರುತಿಸುವುದು
2. ಬ್ಯಾಂಕ್ ಮಹಿಳಾ ಉದ್ಯೋಗಿಗಳ ವೃತ್ತಿ ಒತ್ತಡದ ಮಟ್ಟವನ್ನು ಮೌಲ್ಯಮಾಪನ ಮಾಡುವುದು.
3. ವೃತ್ತಿ ಒತ್ತಡವು ಎಸ್.ಬಿ.ಐ. ಮಹಿಳಾ ಉದ್ಯೋಗಿಗಳ ಕಾರ್ಯದ ಮೇಲೆ ಯಾವ ರೀತಿಯ ಪರಿಣಾಮ ಬೀರುವುದೆಂದು ಅಧ್ಯಯನ ಮಾಡುವುದು.

## ವ್ಯಾಪ್ತಿ

ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶ ಎಸ್.ಬಿ.ಐ. ಮಹಿಳಾ ಉದ್ಯೋಗಿಗಳ ಒತ್ತಡದ ಮಟ್ಟವನ್ನು ತಿಳಿದುಕೊಳ್ಳುವುದು. ಅಧ್ಯಯನದ ಉದ್ದೇಶಕ್ಕಾಗಿ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಹೊಸಪೇಟೆ, ಸಂಡೂರು ಮತ್ತು ಸಿರುಗುಪ್ಪ ತಾಲೂಕುಗಳಲ್ಲಿರುವ ಎಸ್.ಬಿ.ಐ.ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯೋಗಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

## ಮಿತಿಗಳು

1. ಈ ಅಧ್ಯಯನವನ್ನು ಹೊಸಪೇಟೆ, ಸಂಡೂರು ಮತ್ತು ಸಿರುಗುಪ್ಪ ತಾಲೂಕುಗಳಲ್ಲಿರುವ ಎಸ್.ಬಿ.ಐಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.
2. ಎಸ್.ಬಿ.ಐ. ಬ್ಯಾಂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯ (Clerk, Filed officer, Manager and Asistant Manager)ರನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

## ಸಂಶೋಧನ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಬರುವ ಹೊಸಪೇಟೆ, ಸಂಡೂರು ಮತ್ತು ಸಿರುಗುಪ್ಪ ತಾಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ವಿವರಣಾತ್ಮಕ ಸಂಶೋಧನೆ ನಡೆಸಲಾಗಿದೆ. ಈ ಮೂರು ತಾಲೂಕುಗಳಲ್ಲಿರುವ ಬ್ಯಾಂಕುಗಳಲ್ಲಿ ಕೆಲಸ ಮಾಡುವ 100 ಜನ ಮಹಿಳೆಯರನ್ನು ಅನುಕೂಲಕರ ಮಾದರಿ ವಿಧಾನವನ್ನು ಬಳಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ ಮಾಡಿ ಸಂಗ್ರಹಿಸಲಾಗಿದೆ. ಸಂದರ್ಶನದ ಮೂಲಕ ಸಂಗ್ರಹಿಸಿದ ಪ್ರಾಥಮಿಕ ದತ್ತಾಂಶವನ್ನು ಕೋಷ್ಟಕಗಳ ರೂಪದಲ್ಲಿ ನಿರೂಪಿಸಲಾಗಿದೆ. ಅಂಕಿ–ಅಂಶಗಳ ಮಾಪನಗಳು, ಸರಾಸರಿ ವಿಚಲನ ಸಂಬಂಧ ಅಗತ್ಯವಿದ್ದಲ್ಲಿ ಬಳಸಲಾಗಿದೆ. ಮತ್ತಷ್ಟು ಸಂಗ್ರಹಿಸಿದ ಕೆಲವು ಸಾಮಾನ್ಯ ಅಂಕಿ–ಅಂಶಗಳ ಆಧಾರದ ಮೇಲೆ ಸಂಶೋಧನೆಯ ಸಲಹೆಗಳನ್ನು ಮತ್ತು ತೀರ್ಮಾನಗಳನ್ನು ಪಡೆಯಲು ಇದರಿಂದ ಸಾಧ್ಯವಾಗಿದೆ. ಈ ರೀತಿಯಾಗಿ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಿದ ಮಾಹಿತಿಯನ್ನು ಕಂಪ್ಯೂಟರ್ ಮೂಲಕ ಹಾಗೂ ಅಂಕಿ–ಅಂಶಗಳ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ.

**ವಿಶ್ಲೇಷಣೆ ಮತ್ತು ದತ್ತಾಂಶ ಇಂಟ್ರಪ್ರಿಟೇಷನ್**

| ಕ್ರ. ಸಂ | ಸೂಚ್ಯಾಂಕಗಳು | ಮೌಲ್ಯ | ಡಿಎಫ್ (df) | ಲಕ್ಷಣರಹಿತ ಮಹತ್ವ (ಎರಡೂ ಕಡೆ) |
|---|---|---|---|---|
| 1. | ಪಿಯರ್ಸನ್ ಚಿ–ಸ್ಕ್ವೈರ್ | 6.636 | 03 | .084 |
| 2. | ಲೈಕ್ಲಿಹುಡ್ ಅನುಪಾತ | 6.758 | 03 | .080 |
| 3. | ಏಕಪರಿಮಾಣಾತ್ಮಕದಿಂದ ಏಕಪರಿಮಾನಾತ್ಮಕ ಸಂಘಟನೆ | .375 | 01 | .541 |
| 4. | ಮಾನ್ಯ ಪ್ರಕರಣಗಳ ಸಂಖ್ಯೆ | 100 | -- | -- |

**2 ಕೋಶಗಳು (ಶೇ.25.0) 5ಕ್ಕಿಂತ ಕಡಿಮೆ ಎಣಿಕೆ ನಿರೀಕ್ಷಿಸಿವೆ. ನಿರೀಕ್ಷಿತ ಕನಿಷ್ಠ ಎಣಿಕೆ 2.88**

## ಫಲಿತಾಂಶ

ಲೆಕ್ಕ ಹಾಕಿದ ಮೌಲ್ಯ = 6.636

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕೋಷ್ಟಕ ಮೌಲ್ಯ = 12.592

ಲೆಕ್ಕ ಹಾಕಿದ ಮೌಲ್ಯ < ಕೋಷ್ಟಕ ಮೌಲ್ಯ

H0 = ಸ್ವೀಕರಿಸದೆ

ಬ್ಯಾಂಕುಗಳಲ್ಲಿ ಲಿಂಗ ಮತ್ತು ಒತ್ತಡದ ನಡುವೆ ಗಮನಾರ್ಹವಾದ ವ್ಯತ್ಯಾಸವಿಲ್ಲ.

## ಊಹೆಗಳು

H0 : ಬ್ಯಾಂಕುಗಳಲ್ಲಿ ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಒತ್ತಡದ ನಡುವೆ ಯಾವುದೇ ವ್ಯತ್ಯಾಸವಿಲ್ಲ.

H1 : ಬ್ಯಾಂಕುಗಳಲ್ಲಿ ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಒತ್ತಡದ ನಡುವೆ ವ್ಯಾತ್ಯಾಸವಿದೆ.

**ಪಟ್ಟಿ 1 : ಶಿಕ್ಷಣ : ಬ್ಯಾಂಕಿನಲ್ಲಿ ಒತ್ತಡವನ್ನು ಎದುರಿಸುವುದು**

| ಕ್ರ. ಸಂ. | ಸೂಚ್ಯಾಂಕಗಳು | | ಬ್ಯಾಂಕಿನಲ್ಲಿ ಒತ್ತಡವನ್ನು ಎದುರಿಸುವುದು | | | | ಒಟ್ಟು |
|---|---|---|---|---|---|---|---|
| | | | ಹೆಚ್ಚಾಗಿ | ಅಪರೂಪ | ಕೆಲವೊಮ್ಮೆ | ಇಲ್ಲವೇ ಇಲ್ಲ | |
| 1. | ಪದವಿ | ಎಣಿಕೆ | 02 | 04 | 02 | 02 | 10 |
| | | ನಿರೀಕ್ಷಿತ ಎಣಿಕೆ | 1.4 | 4.8 | 3.2 | 06 | 10.0 |
| | ಸ್ನಾತಕೋತ್ತರ ಪದವಿ | ಎಣಿಕೆ | 06 | 36 | 22 | 0 | 64 |
| | | ನಿರೀಕ್ಷಿತ ಎಣಿಕೆ | 9.0 | 30.7 | 20.5 | 3.8 | 64.0 |
| | ತಾಂತ್ರಿಕ ಪದವಿ | ಎಣಿಕೆ | 04 | 06 | 04 | 02 | 16 |
| | | ನಿರೀಕ್ಷಿತ ಎಣಿಕೆ | 202 | 77 | 501 | 1.0 | 16.0 |
| | ಇತರೆ | ಎಣಿಕೆ | 02 | 02 | 04 | 02 | 10 |
| | | ನಿರೀಕ್ಷಿತ ಎಣಿಕೆ | 1.4 | 408 | 302 | 06 | 10 |
| | ಒಟ್ಟು | ಎಣಿಕೆ | 14 | 48 | 32 | 06 | 100 |
| | | ನಿರೀಕ್ಷಿತ ಎಣಿಕೆ | 14.0 | 48.0 | 32.0 | 6.0 | 100.0 |

ಮೂಲ : ಕ್ಷೇತ್ರ ಕಾರ್ಯ

**ಪಟ್ಟಿ 2 : ಚಿ-ಸ್ಕ್ವೈರ್ ಪರೀಕ್ಷೆ**

| ಕ್ರ. ಸಂ. | ಸೂಚ್ಯಾಂಕಗಳು | ಮೌಲ್ಯ | ಡಿ.ಎಫ್.(df) | ಲಕ್ಷಣರಹಿತ ಮಹತ್ವ (ಎರಡೂ ಕಡೆ) |
|---|---|---|---|---|
| 1. | ಪಿಯರ್ಸನ್ ಚಿ-ಸ್ಕ್ವೈರ್ | 18.424 | 09 | .031 |
| 2. | ಲೈಕ್ಲಿಹುಡ್ ಅನುಪಾತ | 19.825 | 09 | .019 |
| 3. | ಏಕಪರಿಮಾಣಾತ್ಮಕ ದಿಂದ ಏಕಪರಿಮಾನಾತ್ಮಕ ಸಂಘಟಣೆ | .483 | 01 | .487 |
| 4. | ಮಾನ್ಯ ಪ್ರಕರಣಗಳ ಸಂಖ್ಯೆ | 100 | -- | -- |

**11 ಕೋಶಗಳು (ಶೇ.68.8) 5ಕ್ಕಿಂತ ಕಡಿಮೆ ಎಣಿಕೆ ನಿರೀಕ್ಷಿಸಿವೆ. ನಿರೀಕ್ಷಿತ ಕನಿಷ್ಟ ಎಣಿಕೆ 60**

## ಫಲಿತಾಂಶ

ಲೆಕ್ಕ ಹಾಕಿದ ಮೌಲ್ಯ = 18.424

ಕೋಷ್ಟಕ ಮೌಲ್ಯ = 16.919

ಲೆಕ್ಕ ಹಾಕಿದ ಮೌಲ್ಯ > ಕೋಷ್ಟಕ ಮೌಲ್ಯ

H0 = ತಿರಸ್ಕರಿಸಿದೆ

ಬ್ಯಾಂಕುಗಳಲ್ಲಿ ಲಿಂಗ ಮತ್ತು ಒತ್ತಡದ ನಡುವೆ ಗಮನಾರ್ಹವಾದ ವ್ಯತ್ಯಾಸವಿದೆ.

## ಊಹೆಗಳು

H0 : ಬ್ಯಾಂಕುಗಳಲ್ಲಿ ವಯಸ್ಸು ಮತ್ತು ಒತ್ತಡದ ನಡುವೆ ಯಾವುದೇ ವ್ಯತ್ಯಾಸವಿಲ್ಲ.

H1 : ಬ್ಯಾಂಕುಗಳಲ್ಲಿ ವಯಸ್ಸು ಮತ್ತು ಒತ್ತಡದ ನಡುವೆ ವ್ಯತ್ಯಾಸವಿದೆ.

**ಪಟ್ಟಿ 3 : ವಯೋಮಿತಿ : ಒತ್ತಡಕ್ಕೆ ಸಂಬಂಧಿಸಿದ ಅಂಶಗಳು**

| ಕ್ರ. ಸಂ. | ಸೂಚ್ಯಾಂಕಗಳು | | | ಬ್ಯಾಂಕಿನಲ್ಲಿ ಒತ್ತಡವನ್ನು ಎದುರಿಸುವುದು | | | | ಒಟ್ಟು |
|---|---|---|---|---|---|---|---|---|
| | | | | ಕೆಲಸದ ವಾತಾವರಣ | ಮೇಲಾಧಿಕಾರಿಗಳು | ಕಾರ್ಯ ಸಮೂಹ | ಸಾಮಾಜಿಕ ಅನ್ಯಾಯ | |
| 1. | ವಯೋಮಿತಿ | 20-30 | ಎಣಿಕೆ | 06 | 0 | 02 | 0 | 08 |
| | | | ನಿರೀಕ್ಷಿತ ಎಣಿಕೆ | 1.8 | 4.0 | 1.8 | .5 | 8.0 |
| | | 30-40 | ಎಣಿಕೆ | 12 | 34 | 12 | 4 | 62 |
| | | | ನಿರೀಕ್ಷಿತ ಎಣಿಕೆ | 13.6 | 31.0 | 13.6 | 3.7 | 62.0 |
| | | 40-50 | ಎಣಿಕೆ | 04 | 16 | 08 | 02 | 30 |
| | | | ನಿರೀಕ್ಷಿತ ಎಣಿಕೆ | 6.6 | 15.0 | 6.6 | 1.8 | 30.0 |
| | | ಒಟ್ಟು | ಎಣಿಕೆ | 22 | 50 | 22 | 06 | 100 |
| | | | ನಿರೀಕ್ಷಿತ ಎಣಿಕೆ | 22.0 | 50.0 | 22.0 | 6.0 | 100.00 |

ಮೂಲ : ಕ್ಷೇತ್ರ ಕಾರ್ಯ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪಟ್ಟಿ 4 : ಚಿ–ಸ್ಕೈರ್ ಪರೀಕ್ಷೆ

| ಕ್ರ. ಸಂ. | ಸೂಚ್ಯಾಂಕಗಳು | ಮೌಲ್ಯ | ಡಿ.ಎಫ್.(df) | ಲಕ್ಷಣರಹಿತ ಮಹತ್ವ (ಎರಡೂ ಕಡೆ) |
|---|---|---|---|---|
| 1. | ಪಿಯರ್ಸನ್ ಚಿ–ಸ್ಕೈರ್ | 16.843 | 06 | .010 |
| 2. | ಲೈಕ್ಲಿಹುಡ್ ಅನುಪಾತ | 17.500 | 06 | .008 |
| 3. | ಏಕಪರಿಮಾಣಾತ್ಮಕದಿಂದ ಏಕಪರಿಮಾನಾತ್ಮಕ ಸಂಘಟಣೆ | 3.930 | 01 | .047 |
| 4. | ಮಾನ್ಯ ಪ್ರಕರಣಗಳ ಸಂಖ್ಯೆ | 100 | –– | –– |

06 ಕೋಶಗಳು (ಶೇ.50.0) 5ಕ್ಕಿಂತ ಕಡಿಮೆ ಎಣಿಕೆ ನಿರೀಕ್ಷಿಸಿವೆ. ನಿರೀಕ್ಷಿತ ಕನಿಷ್ಟ ಎಣಿಕೆ 48

## ಫಲಿತಾಂಶ

ಲೆಕ್ಕ ಹಾಕಿದ ಮೌಲ್ಯ = 16.843

ಕೋಷ್ಟಕ ಮೌಲ್ಯ = 12.592

ಲೆಕ್ಕ ಹಾಕಿದ ಮೌಲ್ಯ > ಕೋಷ್ಟಕ ಮೌಲ್ಯ

H0 = ತಿರಸ್ಕರಿಸಿದೆ

ಬ್ಯಾಂಕುಗಳಲ್ಲಿ ವಯೋಮಿತಿ ಮತ್ತು ಒತ್ತಡದ ನಡುವೆ ಗಮನಾರ್ಹವಾದ ವ್ಯತ್ಯಾಸವಿದೆ.

## ಸಹಸಂಬಂಧಗಳು

## ಊಹೆಗಳು

H0 : ಬ್ಯಾಂಕುಗಳಲ್ಲಿ ಒತ್ತಡ ಮತ್ತು ಕೆಲಸದ ಹೊರೆಯ ನಡುವೆ ಯಾವುದೇ ಸಂಬಂಧವಿಲ್ಲ.

H0 : ಬ್ಯಾಂಕುಗಳಲ್ಲಿ ಒತ್ತಡ ಮತ್ತು ಕೆಲಸದ ಹೊರೆಯ ನಡುವೆ ಸಂಬಂಧವಿದೆ.

ಸಹಸಂಬಂಧಗಳು

| ಸೂಚ್ಯಾಂಕಗಳು | | ಬ್ಯಾಂಕಿನಲ್ಲಿ ಒತ್ತಡವನ್ನು ಎದುರಿಸುವುದು | ಕೆಲಸದ ಹೊರೆ |
|---|---|---|---|
| ಬ್ಯಾಂಕಿನಲ್ಲಿ ಒತ್ತಡವನ್ನು ಎದುರಿಸುವುದು | ಪಿಯರ್ಸನ್ ಸಹಸಂಬಂಧ | 01 | .176 |
| | ಸಿಗ್ಮ. (2 ಟೈಲ್ಡ್) | –– | .080 |
| | ಎನ್ | 100 | 100 |
| ಕೆಲಸದ ಹೊರೆ | ಪಿಯರ್ಸನ್ ಸಹಸಂಬಂಧ | .176 | 01 |

ಧನಾತ್ಮಕ ಏಕಪರಿಮಾಣಾತ್ಮಕ ರೇಖೆಯ ಪರಸ್ಪರ ಸಂಬಂಧ

ಸಹಸಂಬಂಧ < 1

H1 : ಸ್ವೀಕರಿಸಿದೆ.

ಕೆಲಸದ ಹೊರೆ ಮತ್ತು ಒತ್ತಡದ ನಡುವೆ ಸಂಬಂಧವಿದೆ.

## ಉಪಸಂಹಾರ

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೆಲಸದ ಒತ್ತಡವು ಮತ್ತು ತಮ್ಮ ಕುಟುಂಬದ ಒತ್ತಡದಿಂದಾಗಿ ಮಹಿಳೆಯರ ಜೀವನದಲ್ಲಿ ಅಸಮತೋಲನ ಉಂಟಾಗುತ್ತಿದೆ ಆದ್ದರಿಂದ ಈ ಅಸಮತೋಲನವನ್ನು ನಿವಾರಿಸಲು ಬ್ಯಾಂಕುಗಳು ಮತ್ತು ಅವರ ಕುಟುಂಬದ ಸದಸ್ಯರು ಪ್ರೋತ್ಸಾಹ ನೀಡುವ ಅಂಶಗಳ ಬಗ್ಗೆ ಗಮನಹರಿಸಬೇಕು. ಕೆಲಸದ ಒತ್ತಡ ಉತ್ಪಾದಕತೆಯ ಅತ್ಯಂತ ನಿರ್ಣಾಯಕ ಏಕೆಂದರೆ ಇದು ಸಂಘಟನೆಯ ಯಶಸ್ಸಿಗೆ ಸಂಬಂಧಪಟ್ಟಂತಹ ಅಂಶವಾಗಿರುತ್ತದೆ. ಉತ್ಪಾದಕತೆಯು ನೌಕರರ ಮಾನಸಿಕ, ಸಾಮಾಜಿಕ ಯೋಗಕ್ಷೇಮದ ಮೇಲೆ ಅವಲಂಬಿತವಾಗಿರುತ್ತದೆ. ಹೆಚ್ಚು ಕ್ರಿಯಾತ್ಮಕ ಮತ್ತು ಸ್ಪರ್ಧಾತ್ಮಕ ಜಗತ್ತಿನಲ್ಲಿ ಜೀವನದ ಎಲ್ಲಾ ಕ್ಷೇತ್ರಗಳ ಮೇಲೆ ಮನುಷ್ಯನು ಅವನ ಮೇಲೆ ಪರಿಣಾಮ ಬೀರುವ ಎಲ್ಲಾ ರೀತಿಯ ಒತ್ತಡಗಳನ್ನು ಎದುರಿಸಲು ಸಿದ್ಧನಿರುತ್ತಾನೆ. ಮಧ್ಯವರ್ತಿಯ ಕಾರ್ಯತಂತ್ರಗಳ ಹೆಚ್ಚುತ್ತಿರುವ ಪ್ರಾಮುಖ್ಯತೆಯನ್ನು ಸಾಂಸ್ಥಿಕ ಮಟ್ಟದಲ್ಲಿ ಹೆಚ್ಚು ಅನುಭವಿಸಲಾಗುತ್ತದೆ. ಪ್ರಸ್ತುತ ಅಧ್ಯಯನದ ಉದ್ದೇಶವು ಭಾರತೀಯ ಸ್ಟೇಟ್ ಬ್ಯಾಂಕಿನ ಮಹಿಳಾ ಉದ್ಯೋಗಿಗಳ ಒತ್ತಡದ ಮಟ್ಟವನ್ನು ತಿಳಿದುಕೊಳ್ಳುವುದು. ಈ ಲೇಖನದಲ್ಲಿ ಕೆಲವು ಮಿತಿಗಳನ್ನು ಪೂರೈಸಲಾಗಿದ್ದರೂ ಸಹ ಅದನ್ನು ಹೆಚ್ಚು ವಿಸ್ತಾರಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದೆ.

## ಆಕರ ಗ್ರಂಥಗಳು


- **B. Kishori** (May 2016) **:** A Study on work stress among Bank employees in state bank of India with reference to Tiruchirapalli, International journal for innovative research in science and tehnology, vol 2, issue 12.
- **B. Nagarau and others** (July-August-2013) **:** stress women employee; A Study on influnce of age (with reference to insurence sector), Journal of business and management, vol 12, issue 3.
- **M. S. Narayana** and **J. Neelima** (Noveber 2017) **:** work life balance of the women employees : A Study on SBI in Krishna district, International Journal of Advanced educational research, vol 2, issue 6.
- **KDV Prasad and others** (August 2016) **:** A Comparative Analysis on the causes of decenpational stress among men and women employees and its effect on perfomance at the workplace of Information technology sector, Hyderbad, intenational journal of management Excellence, Vol.7, No 2.
- **Lakhwinder pal Singh** and **others** (2012) **:** Investigation into satisfaction level of males employees of insurece industry, Journal of research in International business and management, Vol 2.
- **Harmanpreet and others** (2012) **:** An Investigation into satisfaction level of Females employees of insurence industry : A Study in India, International Journal of Physical and social science, vol 2, issue 5.
- **W. J. Coetzer** and **S. Rothmam** (2006) **:** Dccupational stress of employees if an insurence company, South African Journal of Business Management, vol 37 (3).
- **Shukla. H** and **Garg M. R.** (December 2013)**:** A Study on stress managemant among the employees of Nationalised banks, voice of research, vol 2, issue 3.
- **Masood A.** (September 2013) **:** effects of Job stress on employee Retention: A study on banking sector of Pakistan, International Journal of scientific and research publications, vol 3.
- **S. Uma Maheshwary** (May 2014) **:** Occupational stress A Study with reference to selected Bank employees in Chennai region, IOSR Journal of Business and Management, Vol 16, Issue 5.


■■

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರು ಎದುರಿಸುತ್ತಿರುವ ಸಮಸ್ಯೆಗಳು ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ಕಾಂಬಳೆ ರಾಜು ವಸಂತ,** ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಡಾ. ಶಾಮಲಾ ಭೀ. ದಾಸೋಗ** ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು ಎಮ್.ಎಮ್.ಎಸ್ ಕಲಾ, ವಾಣಿಜ್ಯ, ವಿಜ್ಞಾನ ಹಾಗೂ ಗೃಹ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ,

*ಪ್ರಸ್ತಾವನೆ*

*ಪ್ರಸ್ತುತ ಸಂಶೋಧನ ಲೇಖನವು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ 38 ಗ್ರಾಮ ಪಂಚಾಯತಿಗಳಲ್ಲಿ ಇರುವ 140 ಗ್ರಾಮ ಪಂಚಾಯತ ಪರಿಶಿಷ್ಟ ಜಾತಿಯ ಸದಸ್ಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಅಧ್ಯಯನ ಮಾಡಲಾಗಿದೆ. ಶೇ.70.00 ರಷ್ಟು ಪರಿಶಿಷ್ಟ ಜಾತಿಯ ಸದಸ್ಯರಿಗೆ ಅಧ್ಯಕ್ಷರ ಆಯ್ಕೆಯ ಸಂದರ್ಭದಲ್ಲಿ ಆಮಿಷಗಳಿಗೆ ಒಳಗಾಗಿರುವುದು ಕಂಡು ಬಂದಿದೆ. ಶೇ. 92.42 ರಷ್ಟು ಪರಿಶಿಷ್ಟ ಜಾತಿ ಸದಸ್ಯರು ಸಮುದಾಯದ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ. ಶೇ. 63.84 ರಷ್ಟು ಪರಿಶಿಷ್ಟ ಜಾತಿ ಸದಸ್ಯರು ಸರಕಾರದ ನಿರ್ಲಕ್ಷದಿಂದ ಮಾಸಿಕ ವೇತನ ಪಡೆಯುವುದು ತೃಪ್ತಿ ಇಲ್ಲ ಎಂದಿದ್ದಾರೆ. ಶೇ. 84.24 ರಷ್ಟು ಪರಿಶಿಷ್ಟ ಜಾತಿ ಸದಸ್ಯರು ಯಾವುದೇ ಅನಾರೋಗ್ಯಕ್ಕೆ ಒಳಗಾಗಿರುವುದಿಲ್ಲ. ಶೇ. 31.84 ರಷ್ಟು ಪರಿಶಿಷ್ಟ ಜಾತಿ ಸದಸ್ಯರು ಕಡಿಮೆ ಪ್ರಮಾಣದಲ್ಲಿ ಇತರೆ ರೋಗಗಳಿಗೆ ಒಳಗಾಗಿದ್ದಾರೆ, ಶೇ.46.66 ರಷ್ಟು ಪರಿಶಿಷ್ಟ ಜಾತಿ ಸದಸ್ಯರು ವಿವಿಧ ಕೆಲಸಗಳ ಒತ್ತಡದಿಂದ ಸದಸ್ಯರಾಗಿರುವುದು ನಮಗೆ ತೃಪ್ತಿ ಇಲ್ಲ ಎಂದು ಹೇಳಿಕೊಂಡಿರುವುದು ಸಂಶೋಧನಾ ಲೇಖನದಿಂದ ತಿಳಿದು ಬಂದಿದೆ.*

*ಮುಖ್ಯ ಪದಗಳು : ಗ್ರಾಮ ಪಂಚಾಯತ, ಪರಿಷ್ಟಜಾತಿ, ಸದಸ್ಯರು, ಸಮಸ್ಯೆಗಳು.*

## ಪೀಠಿಕೆ

ಪ್ರಾಚೀನ ಕಾಲದಿಂದಲೂ ಆಚರಿಸಿಕೊಂಡು ಬಂದಿರುವ ಜಾತಿ ವ್ಯವಸ್ಥೆಯಿಂದ ಪರಿಶಿಷ್ಟ ಜಾತಿಯ ಜನರು ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ ಶೋಷಿತ ರಾಗಿರುವುದು ಇತಿಹಾಸದ ಪುಟಗಳಿಂದ ನಮಗೆ ಕಂಡು ಬಂದಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಪರಿಶಿಷ್ಟ ಜಾತಿಯ ಜನರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಬಹುದೊಡ್ಡ ಆಶಯದಿಂದ ಸಂವಿಧಾನ ಅವರಿಗೆ ಅನೇಕ ಹಕ್ಕುಗಳನ್ನು ಮತ್ತು ಸಂವಿಧಾನಿಕ ಸವಲತ್ತುಗಳನ್ನು ನೀಡಿರುವ ಫಲವಾಗಿ ದೇಶದ ಜನಸಂಖ್ಯೆಯ ಒಟ್ಟು ಶೇಕಡಾ 16.06 ರಷ್ಟಿರುವ ಪರಿಶಿಷ್ಟ ಜಾತಿಯ ಜನರು ಇಂದು ಸಾಕ್ಷರರಾಗಿ ಅನೇಕ ರಂಗಗಳಲ್ಲಿ ಮುನ್ನೆಡೆಗೆ ಬಂದಿರುವುದು ತಿಳಿಯುತ್ತದೆ. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿಯ ಸೂತ್ರ ಅಳವಡಿಸಲಾಗಿದೆ. ಈ ಎಲ್ಲಾ ಬಗೆಯ ಸವಲತ್ತುಗಳಿಂದ ಅಂಚಿನಲ್ಲಿರುವ ಪರಿಶಿಷ್ಟ ಜಾತಿಯ ಜನರಿಗೆ ಎಷ್ಟರ ಮಟ್ಟಿಗೆ ಅಧಿಕಾರ ದೊರಕಿದೆ ಹಾಗೂ ಅದರ ಫಲಗಳು ಎಷ್ಟರ ಮಟ್ಟಿಗೆ ಜನರಿಗೆ ತಲುಪಿವೆ ಎನ್ನುವುದಕ್ಕಿಂತ ಮೀಸಲಾತಿ ನೀತಿಯಿಂದಾಗಿ ಅಧಿಕಾರವನ್ನು ಅನುಭವಿಸುವ ಮತ್ತು ಅದರಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವಷ್ಟರ ಮಟ್ಟಿಗಾದರೂ ಪರಿಶಿಷ್ಟ ಜಾತಿಯ ಜನರಿಗೆ ಅವಕಾಶ ದೊರೆತಿರುವುದು ಒಳ್ಳೆಯ ಸಂಗತಿಯಾಗಿದೆ.

## ಸಂಶೋಧನಾ ಅಧ್ಯಯನದ ಮಹತ್ವ

ಈ ಹಿಂದೆ ನಡೆದ ಬಹಳಷ್ಟು ಸಂಶೋಧನಾ ಅಧ್ಯಯನಗಳು ಗ್ರಾಮ ಪಂಚಾಯತ ಸದಸ್ಯರ ಕುರಿತಾಗಿವೆ. ಆದರೆ ಪ್ರಸ್ತುತ ಲೇಖನವು ಗ್ರಾಮ ಪಂಚಾಯತ ಪರಿಶಿಷ್ಟ ಜಾತಿಯ ಸದಸ್ಯರು ಎದುರುಸುತ್ತಿರುವ ಸಮಸ್ಯೆಗಳ ಕುರಿತು ತಿಳಿದುಕೊಳ್ಳುವುದು ಈ ಲೇಖನದ ಉದ್ದೇಶವಾಗಿದೆ.

## ಸಂಶೋಧನೆಯ ಸಮಸ್ಯೀಕರಣ

ದೇಶದಲ್ಲಿ ಗ್ರಾಮ ಪಂಚಾಯತಗಳು ಇದ್ದವು ಎನ್ನುವುದಕ್ಕೆ ಹಲವಾರು ಐತಿಹಾಸಿಕ ದಾಖಲೆಗೆ ಸಿಗುತ್ತವೆ. ಅದರಂತೆ ವೇದಗಳ ಕಾಲ, ಮಹಾಕಾವ್ಯಗಳಾದ **'ರಾಮಾಯಣ ಹಾಗೂ ಮಹಾಭಾರತ, ಪ್ರಾಚೀನ ಕಾಲ, ಮೌರ್ಯರು, ಬೌದ್ಧರ, ಜೈನರ ಹಾಗೂ ಗುಪ್ತರ, ಮೋಘಲರ ಮತ್ತು ಬ್ರಿಟೀಷರು'** ಹೀಗೆ ಮುಂತಾದವರ ಆಡಳಿತ ಅವಧಿಯಲ್ಲಿ ಗ್ರಾಮ ಪಂಚಾಯತಗಳ ಆಡಳಿತ ಬಗ್ಗೆ ಐತಿಹಾಸಿಕ ದಾಖಲೆಗಳು ಲಭಿಸುತ್ತವೆ. ಗ್ರಾಮದ ಆಡಳಿತವನ್ನು **"ಗ್ರಾಮೀಣಿ"** ನೋಡಿಕೊಳ್ಳುತ್ತಿದ್ದ ಎನ್ನುವ ವಿಷಯವು ತಿಳಿಯುತ್ತದೆ. ಬ್ರಿಟೀಷ ಅವಧಿಯಲ್ಲಿ ಪಂಚಾಯತಿಗಳು ಅವನತಿ ಹೊಂದಿದ್ದವು.

## ಸಾಹಿತ್ಯ ಪರಾಮರ್ಶೆ

**ಅಲಿ. ಸಾಲಿಕ್(1964) : "ರಿಪೋರ್ಟ ಆಫ್ ದಿ ಸ್ಟೈಡ್ ಟೀಮ್ ಆ್ಯನ್ ಪಂಚಾಯತ್ ರಾಜ್, ಜೈಪೂರ್"** : ಪಂಚಾಯತ್ ಆ್ಯಂಡ್ ಡೆವೆಲಪ್‌ಮೆಂಟ್ ಗೌರ್ನಮೆಂಟ್ ಆಫ್ ರಾಜ್‌ಸ್ತಾನ್. ಅವರು ತಮ್ಮ ವರದಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆ ತುಳಿತಕ್ಕೊಳಪಟ್ಟ ಜಾತಿಗಳಿಗೆ ವಿಶೇಷವಾದ ಗಮನ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಕಾರಣ ಅವರ ಪರಿಮಿತ ಹಣಕಾಸಿನ ಸಂಪನ್ಮೂಲಗಳಿಂದಾಗಿ ಪಂಚಾಯತ್ ರಾಜ್ ಸಂಸ್ಥೆಯು ಅವರಿಗಾಗಿ ವಿಶೇಷವಾದ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸದೆ ಇರುವುದು ಈ ಅಧ್ಯಯನದಿಂದ ತಿಳಿದು ಬಂದಿದೆ.

## ಅಧ್ಯಯನದ ಉದ್ದೇಶಗಳು

- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿಯ ಸದಸ್ಯರ ಸಮಸ್ಯೆಗಳನ್ನು ತಿಳಿದುಕೊಳ್ಳುವುದು.
- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿಯ ಸದಸ್ಯರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು.

## ಮಾಹಿತಿದಾರರ ಆಯ್ಕೆ

ಪ್ರಸ್ತುತ ರಾಯಬಾಗ ತಾಲ್ಲೂಕಿನಲ್ಲಿ ಒಟ್ಟು 61 ಗ್ರಾಮಗಳಿದ್ದು ಇಷ್ಟು ಗ್ರಾಮಗಳಿಗೆ ಸಂಬಂಧಿಸಿದಂತೆ ಒಟ್ಟು 38 ಗ್ರಾಮ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪಂಚಾಯತಿಗಳಿದ್ದು, ಅವುಗಳೆಂದರೆ **ನಿಪನಾಳ, ಶಿರಗೂರ, ಮೇಖಳಿ, ಕುಡಚಿ ಗ್ರಾಮೀಣ, ರಾಯಬಾಗ ಗ್ರಾಮೀಣ, ನಂದಿಕುರಳಿ, ನಸಲಾಪೂರ, ಸೌಂದತ್ತಿ, ಅಲಖನೂರ, ಹಿಡಕಲ್, ನಿಲಜಿ, ಬ್ಯಾಕೂಡ, ಪಾಲಭಾವಿ, ಕೋಳಿಗುಡ್ಡ, ದಿಗ್ಗೇವಾಡಿ, ಭಿರಡಿ, ಖೇಮಲಾಪೂರ, ಹಂದಿಗುಂದ, ಇಟನಾಳ, ಬೆಕ್ಕೇರಿ, ಮೊರಬ, ಸವಸುದ್ದಿ, ಭೆಂಡವಾಡ, ಹುಬ್ಬರವಾಡಿ, ಕಟಕಭಾವಿ, ನಿಡಗುಂದಿ, ಅಳಗವಾಡಿ, ಕಪ್ಪಲಗುದ್ದಿ, ಪರಮಾನಂದವಾಡಿ, ಜಲಾಲಪೂರ, ಸಿದ್ದಾಪೂರ, ಯಬರಟ್ಟಿ, ಖನದಾಳ, ಕೆಂಪಟ್ಟಿ, ಯಡ್ರಾಂವ, ಯಲಾರಟ್ಟಿ, ಸುಟ್ಟಟ್ಟಿ, ಮಂಟೂರ** ಇಷ್ಟು ಗ್ರಾಮ ಪಂಚಾಯತಿಗಳನ್ನು ಒಳಗೊಂಡಿರುವ ರಾಯಬಾಗ ತಾಲ್ಲೂಕಿನಲ್ಲಿ ಒಟ್ಟು 61 ಗ್ರಾಮಗಳಿವೆ. 61 ಗ್ರಾಮಗಳಿಗೆ ಸಂಬಂಧಿಸಿದ ಒಟ್ಟು 38 ಗ್ರಾಮ ಪಂಚಾಯತಗಳು ರಾಯಬಾಗ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಪ್ರಸ್ತುತ ರಾಯಬಾಗ ತಾಲ್ಲೂಕಿನ 38 ಗ್ರಾಮ ಪಂಚಾಯತಿಗಳಲ್ಲಿ **688** ಸದಸ್ಯರು ಇದ್ದು, ಇವರಲ್ಲಿ **355 ಮಹಿಳೆಯರು** ಹಾಗೂ **333 ಪುರುಷರು** ಇದ್ದಾರೆ. ಇವರಲ್ಲಿ ಒಟ್ಟು **140** ಪರಿಶಿಷ್ಟ ಜಾತಿ ಗ್ರಾಮ ಪಂಚಾಯತ ಸದಸ್ಯರಿದ್ದು, ಇವರಲ್ಲಿ **84 ಮಹಿಳೆಯರು** ಹಾಗೂ **56 ಪುರುಷರಿದ್ದಾರೆ**. ಈ **140** ಪರಿಶಿಷ್ಟ ಜಾತಿ ಗ್ರಾಮ ಪಂಚಾಯತ ಸದಸ್ಯರನ್ನು ಮಾಹಿತಿದಾರರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

## ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು **"ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರು ಎದುರಿಸುತ್ತಿರುವ ಸಮಸ್ಯೆಗಳು"**ಎಂಬ ವಿಷಯಕ್ಕೆ ಸಂಬಂಧಿಸಿದ್ದು ಅಧ್ಯಯನಕ್ಕೆ ಸಂಶೋಧನಾ ತಂತ್ರಗಳಾದ ಸರಳ ಯಾದೃಚ್ಛಿಕ ನಮೂನೆ ಮತ್ತು ಸಂದರ್ಶನ ಅನುಸೂಚಿಯ ಸಹಾಯದೊಂದಿಗೆ ಪೂರ್ವ ರಚಿತ ಸಂದರ್ಶನ ತಪಶೀಲನ್ನು ಒಂದು ಪ್ರಮುಖ ತಂತ್ರವಾಗಿ ಬಳಸಿಕೊಳ್ಳಲಾಗುವುದು.

## ಮಾಹಿತಿಯ ಮೂಲಗಳು

"ಪ್ರಸ್ತುತ ಲೇಖನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪ್ರಾಥಮಿಕ ದತ್ತಾಂಶಗಳನ್ನು ಅಧ್ಯಯನಕ್ಕೆ ಒಳಗಾದ ಮಾಹಿತಿದಾರರಿಂದ ಮತ್ತು ಆನುಷಾಂಗಿಕ ದತ್ತಾಂಶಗಳಾದ ಪುಸ್ತಕಗಳು, ನಿಯತಕಾಲಿಕಗಳು, ಮಾಸ ಪತ್ರಿಕೆಗಳು, ಜನಗಣತಿ ವರದಿಗಳು, ದಿನ ಪತ್ರಿಕೆಗಳು, ಅಂತರ ಜಾಲಗಳು ಮುಂತಾದವುಗಳಿಂದ ಸಂಗ್ರಹಿಸಲಾಗಿದೆ.

## ಗ್ರಾಮ ಪಂಚಾಯತ ಮತ್ತು ಪರಿಶಿಷ್ಟ ಜಾತಿಯ ವ್ಯಾಖ್ಯೆಗಳು

- **ಕೆ. ಎಮ್. ಫಣೀಕ್ಕಾರವರ** : ಪ್ರಾದೇಶಿಕ ಸ್ವತಂತ್ರ್ಯ ಸರಕಾರವೇ ಪಂಚಾಯತ.
- **ಸೈಮನ್ ಆಯೋಗದ ಪ್ರಕಾರ** : ಉಚ್ಚ ಜಾತಿಯವರಿಂದ ಪರಂಪರಗತವಾಗಿ ವಿಧಿಸಲಾದ ಹಾಗೂ ಸಾಮಾಜಿಕವಾಗಿ ಹೇರಲಾದ ವಿವಿಧ ಸಾಮಾಜಿಕ ಹಾಗೂ ರಾಜಕೀಯ ದೌರ್ಬಲ್ಯಗಳಿಂದ ನರಳುತ್ತಿರುವ ಜಾತಿಗಳನ್ನು ಪರಿಶಿಷ್ಟ ಜಾತಿಗಳೆಂದು ಹೇಳಿದೆ.

## ವ್ಯಾಪ್ತಿ ಮತ್ತು ಇತಿಮಿತಿಗಳು

- ಪ್ರಸ್ತುತ ಸಂಶೋಧನಾ ಲೇಖನವು 2015ರಲ್ಲಿ ಗ್ರಾಮ ಪಂಚಾಯತಗಳಿಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಜಾತಿ ಗ್ರಾಮ ಪಂಚಾಯತ ಸದಸ್ಯರಿಗೆ ಮಾತ್ರ ಸೀಮಿತವಾಗಿರುತ್ತದೆ.
- ರಾಯಬಾಗ ತಾಲ್ಲೂಕಿನಲ್ಲಿ ಒಟ್ಟು 38 ಗ್ರಾಮ ಪಂಚಾಯತಗಳಿದ್ದು ಈ ಲೇಖನವು 38 ಗ್ರಾಮ ಪಂಚಾಯತಗಳಾದ **ನಿಪನಾಳ, ಶಿರಗೂರ, ಮೇಖಳಿ, ಕುಡಚಿ ಗ್ರಾಮೀಣ, ರಾಯಬಾಗ ಗ್ರಾಮೀಣ, ನಂದಿಕುರಳಿ, ನಸಲಾಪೂರ, ಸೌಂದತ್ತಿ, ಅಲಖನೂರ, ಹಿಡಕಲ್, ನಿಲಜಿ, ಬ್ಯಾಕೂಡ, ಪಾಲಭಾವಿ, ಕೋಳಿಗುಡ್ಡ, ದಿಗ್ಗೇವಾಡಿ, ಭಿರಡಿ, ಖೇಮಲಾಪೂರ, ಹಂದಿಗುಂದ, ಇಟನಾಳ, ಬೆಕ್ಕೇರಿ, ಮೊರಬ, ಸವಸುದ್ದಿ, ಭೆಂಡವಾಡ, ಹುಬ್ಬರವಾಡಿ, ಕಟಕಭಾವಿ, ನಿಡಗುಂದಿ, ಅಳಗವಾಡಿ, ಕಪ್ಪಲಗುದ್ದಿ, ಪರಮಾನಂದವಾಡಿ, ಜಲಾಲಪೂರ, ಸಿದ್ದಾಪೂರ, ಯಬರಟ್ಟಿ, ಖನದಾಳ, ಕೆಂಪಟ್ಟಿ, ಯಡ್ರಾಂವ, ಯಲಾರಟ್ಟಿ, ಸುಟ್ಟಟ್ಟಿ, ಮಂಟೂರ** ಗ್ರಾಮ ಪಂಚಾಯತಗಳಲ್ಲಿರುವ ಪರಿಶಿಷ್ಟ ಜಾತಿ ಗ್ರಾಮ ಪಂಚಾಯತ ಸದಸ್ಯರಿಗೆ ಸಂಬಂಧಿಸಿದೆ.

## ಪ್ರಾಕಲ್ಪನೆಗಳು

- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.
- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿಯ ಸದಸ್ಯರು ರಾಜಕೀಯವಾಗಿ ವೈಯಕ್ತಿಕವಾಗಿ ಸಮಸ್ಯೆಗೆ ಒಳಗಾಗಿದ್ದಾರೆ. .
- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿಯ ಸದಸ್ಯರು ರಾಜಕೀಯವಾಗಿ ಪ್ರಬಲರಾಗಿ ಬೆಳೆದಿಲ್ಲ.

**ಕೋಷ್ಟಕ – 01 : ಮಾಹಿತಿದಾರರು ಗ್ರಾಮ ಪಂಚಾಯತ ಅಧ್ಯಕ್ಷರ ಆಯ್ಕೆಯ ಸಂದರ್ಭದಲ್ಲಿ ನೀಡುವ ಆಮಿಷಗಳ ಅಭಿಪ್ರಾಯಗಳು.**

| ಅ.ನಂ. | ಅಭಿಪ್ರಾಯಗಳು | ಪುರುಷರು | | ಮಹಿಳೆಯರು | | ಒಟ್ಟು | ಪ್ರತಿಶತ |
|---|---|---|---|---|---|---|---|
| | | ಒಟ್ಟು | ಪ್ರತಿಶತ | ಒಟ್ಟು | ಪ್ರತಿಶತ | | |
| 01. | ಹೌದು | 38 | 67.85 | 60 | 71.42 | 98 | 70.00 |
| 02. | ಇಲ್ಲ | 18 | 32.15 | 24 | 28.58 | 42 | 30.00 |
| | ಒಟ್ಟು | 56 | 100 | 84 | 100 | 140 | 100 |

**ಮೂಲ : ಕ್ಷೇತ್ರ ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿ.**

ಈ ಮೇಲಿನ ಅಂಕಿ ಅಂಶಗಳ ವಿಶ್ಲೇಷಣೆಯನ್ನು ಗಮನಿಸಿದಾಗ ತಿಳಿದು ಬಂದ ಅಂಶವೆಂದರೆ ಅಧ್ಯಯನದ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯ ಪ್ರತಿಶತ 70.00 ರಷ್ಟು ಮಾಹಿತಿದಾರರು ಗ್ರಾಮ ಪಂಚಾಯತ ಅಧ್ಯಕ್ಷರ ಆಯ್ಕೆಯ ಸಂದರ್ಭದಲ್ಲಿ ಆಮಿಷ ಒಡ್ಡುತ್ತಾರೆ ಎಂದು ಹೇಳಿದ್ದಾರೆ. ಅತೀ ಕಡಿಮೆ ಸಂಖ್ಯೆಯ ಅಂದರೆ ಪ್ರತಿಶತ 30.00 ರಷ್ಟು ಮಾಹಿತಿದಾರರು ನಾವು ಯಾವುದೇ ಆಸೆ ಆಮೀಷಗಳಿಗೆ ಒಳಗಾಗಿಲ್ಲ ಎಂದು ಹೇಳಿರುವುದು ಸಂಶೋಧನಾ ಅಧ್ಯಯನದಿಂದ ಕಂಡು ಬಂದಿದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕೋಷ್ಟಕ – 02 : ಮಾಹಿತಿದಾರರು ಸಮುದಾಯದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಅಭಿಪ್ರಾಯಗಳು.

| ಅ.ನಂ. | ಅಭಿಪ್ರಾಯಗಳು | ಪುರುಷರು | | ಮಹಿಳೆಯರು | | ಒಟ್ಟು | ಪ್ರತಿಶತ |
|---|---|---|---|---|---|---|---|
| | | ಒಟ್ಟು | ಪ್ರತಿಶತ | ಒಟ್ಟು | ಪ್ರತಿಶತ | | |
| 01. | ಹೌದು | 54 | 96.42 | 81 | 96.42 | 135 | 96.42 |
| 02. | ಇಲ್ಲ | 02 | 03.58 | 03 | 03.58 | 05 | 03.58 |
| | ಒಟ್ಟು | 56 | 100 | 84 | 100 | 140 | 100 |

ಮೂಲ : ಕ್ಷೇತ್ರ ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿ.

ಈ ಮೇಲಿನ ಅಂಕಿ ಅಂಶಗಳ ವಿಶ್ಲೇಷಣೆಯನ್ನು ಗಮನಿಸಿದಾಗ ತಿಳಿದು ಬಂದ ಪ್ರಮುಖ ಸಂಗತಿಯೆಂದರೆ ಅಧ್ಯಯನ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯ ಮಾಹಿತಿದಾರರು ಪ್ರತಿಶತ 96.42 ರಷ್ಟು ತಮ್ಮ ಸಮುದಾಯದ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವುದು ಕಂಡು ಬಂದಿದೆ. ಅತೀ ಕಡಿಮೆ ಸಂಖ್ಯೆಯ ಸದಸ್ಯರು ಪ್ರತಿಶತ 03.58 ರಷ್ಟು ತಮ್ಮ ಸಮುದಾಯದ ಜನರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ ಎಂದು ಹೇಳಿರುವುದು ಸಂಶೋಧನಾ ಅಧ್ಯಯನದಿಂದ ಕಂಡು ಬಂದಿದೆ.

ಕೋಷ್ಟಕ – 03 : ಮಾಹಿತಿದಾರರು ಪಡೆಯುತ್ತಿರುವ ಮಾಸಿಕ ವೇತನದಿಂದ ತೃಪ್ತಿಯಿಲ್ಲದಿರುವುದಕ್ಕೆ ಕಾರಣವಾದ ಅಂಶಗಳು.

| ಅ.ನಂ. | ಅಭಿಪ್ರಾಯಗಳು | ಪುರುಷರು | | ಮಹಿಳೆಯರು | | ಒಟ್ಟು | ಪ್ರತಿಶತ |
|---|---|---|---|---|---|---|---|
| | | ಒಟ್ಟು | ಪ್ರತಿಶತ | ಒಟ್ಟು | ಪ್ರತಿಶತ | | |
| 01. | ದುರ್ಬಲವಾದ ಆರ್ಥಿಕ ಹಿನ್ನೆಲೆ | 05 | 09.27 | 03 | 03.79 | 08 | 06.01 |
| 02. | ಸರಕಾರದ ನಿರ್ಲಕ್ಷ್ಯ | 28 | 51.85 | 57 | 72.15 | 85 | 63.84 |
| 03. | ದುಬಾರಿಯಾದ ವಸ್ತುಗಳ ಬೆಲೆ | 06 | 11.11 | 04 | 05.06 | 10 | 07.51 |
| 04. | ಹೋರಾಟ ಇಲ್ಲದಿರುವುವಿಕೆ. | 15 | 27.77 | 15 | 18.46 | 30 | 22.55 |
| | ಒಟ್ಟು | 54 | 100 | 79 | 100 | 133 | 100 |

ಮೂಲ : ಕ್ಷೇತ್ರ ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿ.

ಈ ಮೇಲಿನ ಅಂಕಿ ಅಂಶಗಳ ವಿಶ್ಲೇಷಣೆಯನ್ನು ನೋಡಿದಾಗ ತಿಳಿದು ಬಂದ ಸಂಗತಿಯೆಂದರೆ ಅಧ್ಯಯನ ಕ್ಷೇತ್ರದಲ್ಲಿ ಬಹು ಸಂಖ್ಯಾತ ಅಂದರೆ ಪ್ರತಿಶತ 63.84 ರಷ್ಟು ಮಾಹಿತಿದಾರರು ತಮಗೆ ದೊರೆಯುವ ಮಾಸಿಕ ವೇತನವು ತೃಪ್ತಿ ತರುವುದೇ ಇರುವುದಕ್ಕೆ ಕಾರಣವೆಂದರೆ ಸರಕಾರ ನಮ್ಮ ವೇತನವನ್ನು ಹೆಚ್ಚಿಸುವುದಕ್ಕೆ ಸರಕಾರದ ನಿರ್ಲಕ್ಷ್ಯ ಎಂದು ಹೇಳಿಕೊಂಡಿದ್ದಾರೆ. ಅತೀ ಕಡಿಮೆ ಸಂಖ್ಯೆ ಅಂದರೆ ಪ್ರತಿಶತ 06.01 ರಷ್ಟು ಮಾಹಿತಿದಾರರು ತಮ್ಮ ಕುಟುಂಬದ ಆರ್ಥಿಕ ಹಿನ್ನಲೆ ದುರ್ಬಲವಾಗಿರುವುದರಿಂದ ತಾವು ಪಡೆದುಕೊಳ್ಳುವ ಮಾಸಿಕ ವೇತನದಿಂದ ತಮಗೆ ಯಾವುದೇ ರೀತಿಯ ತೃಪ್ತಿ ಇರುವುದಿಲ್ಲ ಎಂದು ಹೇಳಿರುವುದು ಈ ಅಧ್ಯಯನದಲ್ಲಿ ಕಂಡು ಬಂದಿದೆ.

ಕೋಷ್ಟಕ – 04 : ಮಾಹಿತಿದಾರರು ಮೇಲಿಂದ ಮೇಲೆ ಅನಾರೋಗ್ಯದ ಸಮಸ್ಯೆಗೆ ಒಳಗಾಗುವ ಅಭಿಪ್ರಾಯಗಳು.

| ಅ.ನಂ. | ಅಭಿಪ್ರಾಯಗಳು | ಪುರುಷರು | | ಮಹಿಳೆಯರು | | ಒಟ್ಟು | ಪ್ರತಿಶತ |
|---|---|---|---|---|---|---|---|
| | | ಒಟ್ಟು | ಪ್ರತಿಶತ | ಒಟ್ಟು | ಪ್ರತಿಶತ | | |
| 01. | ಹೌದು | 08 | 14.28 | 14 | 14.66 | 22 | 15.71 |
| 02. | ಇಲ್ಲ | 48 | 85.72 | 70 | 83.34 | 118 | 84.29 |
| | ಒಟ್ಟು | 56 | 100 | 84 | 100 | 140 | 100 |

ಮೂಲ : ಕ್ಷೇತ್ರ ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿ.

ಈ ಮೇಲಿನ ಅಂಕಿ ಅಂಶಗಳ ವಿಶ್ಲೇಷಣೆಯನ್ನು ನೋಡಿದಾಗ ಕಂಡು ಬಂದ ಸಂಗತಿಯೆಂದರೆ **"ಆರೋಗ್ಯವೇ ಭಾಗ್ಯ"** ಎಂಬ ಮಾತಿನಂತೆ ಮಾಹಿತಿದಾರರು ಹೆಚ್ಚಾಗಿ **"ಜನ ಸೇವೆಯೇ ಜನಾರ್ಧನ ಸೇವೆ"** ಎನ್ನುವಂತೆ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿರುತ್ತಾರೆ. ಅತೀ ಕಡಿಮೆ ಮಾಹಿತಿದಾರರು ಪ್ರತಿಶತ 15.71 ರಷ್ಟು ಅನಾರೋಗ್ಯದ ಸಮಸ್ಯೆ ಎಂದು ಹೇಳಿರುವುದು ಕಂಡು ಬಂದಿದೆ. ಅಧಿಕ ಪ್ರಮಾಣದ ಮಾಹಿತಿದಾರರು ಪ್ರತಿಶತ 84.29 ರಷ್ಟು ಯಾವುದೇ ಅನಾರೋಗ್ಯದ ಸಮಸ್ಯೆ ಇಲ್ಲ ಎಂದು ಹೇಳಿರುವುದು ಸಂಶೋಧನಾ ಅಧ್ಯಯನದಿಂದ ತಿಳಿದು ಬಂದಿದೆ.

ಕೋಷ್ಟಕ – 05 : ಮಾಹಿತಿದಾರರಿಗೆ ಅನಾರೋಗ್ಯದ ಸಮಸ್ಯೆಗಳು.

| ಅ.ನಂ. | ಅನಾರೋಗ್ಯಗಳು | ಪುರುಷರು | | ಮಹಿಳೆಯರು | | ಒಟ್ಟು | ಪ್ರತಿಶತ |
|---|---|---|---|---|---|---|---|
| | | ಒಟ್ಟು | ಪ್ರತಿಶತ | ಒಟ್ಟು | ಪ್ರತಿಶತ | | |
| 01. | ಸಕ್ಕರೆ ಕಾಯಿಲೆ | 04 | 50.00 | 03 | 21.42 | 07 | 31.81 |
| 02. | ರಕ್ತದ ಒತ್ತಡ | 02 | 25.00 | 04 | 28.57 | 06 | 27.27 |
| 03. | ಕ್ಷಯ ರೋಗ | – | – | 01 | 07.14 | 01 | 04.54 |
| 04. | ಪಾರ್ಶ್ವವಾಯು | – | – | 01 | 07.14 | 01 | 04.54 |
| 05. | ಇತರೆ | 02 | 25.00 | 05 | 35.73 | 07 | 31.84 |
| | ಒಟ್ಟು | 08 | 100 | 14 | 100 | 22 | 100 |

ಮೂಲ : ಕ್ಷೇತ್ರ ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಈ ಮೇಲಿನ ಅಂಕಿ ಅಂಶಗಳ ವಿಶ್ಲೇಷಣೆಯನ್ನು ನೋಡಿದಾಗ ತಿಳಿದು ಬಂದ ಸಂಗತಿಯೆಂದರೆ ಪ್ರತಿಶತ 31.81 ರಷ್ಟು ಮಾಹಿತಿ ದಾರರು ಸಕ್ಕರೆ ಕಾಯಿಲೆ ಸಮಸ್ಯೆಯಿಂದ ಬಳಲುತ್ತಿರುವುದಾಗಿ ಹೇಳಿಕೊಂಡಿದ್ದಾರೆ. ಅತೀ ಕಡಿಮೆ ಸಂಖ್ಯೆ ಅಂದರೆ ಪ್ರತಿಶತ 04.54 ರಷ್ಟು ಮಾಹಿತಿದಾರರು ಪಾರ್ಶ್ವವಾಯು ಕಾಯಿಲೆಯಿಂದ ಬಳಲು ತ್ತಿರುವುದಾಗಿ ಹೇಳಿರುವುದು. ಆದ್ದರಿಂದ ಸರಕಾರದಿಂದ ಗ್ರಾಮ ಪಂಚಾಯತ ಪರಿಶಿಷ್ಟ ಜಾತಿಯ ಸದಸ್ಯರಿಗೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ ಅವರ ಸ್ವಯಂ ಪ್ರಯತ್ನದ ಮೂಲಕ ಸುಧಾರಿಸಿಕೊಳ್ಳಬೇಕು ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬಂದಿದೆ.

**ಕೋಷ್ಟಕ – 06 : ಮಾಹಿತಿದಾರರು ಗ್ರಾಮ ಪಂಚಾಯತ ಸದಸ್ಯರಾದ ಮೇಲೆ ತೃಪ್ತಿ ಇಲ್ಲದಿರುವುದಕ್ಕೆ ಕಾರಣಗಳು.**

| ಅ.ನಂ. | ಕಾರಣವಾದ ಅಂಶಗಳು | ಪುರುಷರು | | ಮಹಿಳೆಯರು | | ಒಟ್ಟು | ಪ್ರತಿಶತ |
|---|---|---|---|---|---|---|---|
| | | ಒಟ್ಟು | ಪ್ರತಿಶತ | ಒಟ್ಟು | ಪ್ರತಿಶತ | | |
| 1. | ವಿವಿಧ ಕೆಲಸಕ್ಕೆ ಜನರ ಒತ್ತಡ | 04 | 57.16 | 03 | 37.50 | 07 | **46.66** |
| 2. | ಆರೋಗ್ಯದ ಸಮಸ್ಯೆ | 01 | 14.28 | 02 | 25.00 | 03 | **20.00** |
| 3. | ಭಾಷೆ ಸಮಸ್ಯೆ | 01 | 14.28 | 01 | 12.50 | 02 | **13.34** |
| 4. | ಜನರ ಕಿರುಕುಳ | 01 | 14.28 | 02 | 25.00 | 03 | **20.00** |
| | ಒಟ್ಟು | **07** | **100** | **08** | **100** | **15** | **100** |

**ಮೂಲ : ಕ್ಷೇತ್ರ ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿ.**

ಈ ಮೇಲಿನ ಅಂಕಿ ಅಂಶಗಳ ವಿಶ್ಲೇಷಣೆಯನ್ನು ನೋಡಿದಾಗ ತಿಳಿದು ಬಂದ ಸಂಗತಿಯೆಂದರೆ ಅಧ್ಯಯನ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ಮಾಹಿತಿದಾರರು ಪ್ರತಿಶತ 46.66 ರಷ್ಟು ಸದಸ್ಯರು ವಿವಿಧ ಕೆಲಸಕ್ಕೆ ಜನರು ಒತ್ತಡ ಹೇರುತ್ತಿರುವುದರಿಂದ ತಮಗೆ ಗ್ರಾಮ ಪಂಚಾಯತ ಸದಸ್ಯರಾದ ಮೇಲೆ ತೃಪ್ತಿಯಿಲ್ಲ ಎಂದು ತಿಳಿಸಿದ್ದಾರೆ. ಅತೀ ಕಡಿಮೆ ಸಂಖ್ಯೆಯ ಮಾಹಿತಿದಾರರು 13.34 ರಷ್ಟು ಸದಸ್ಯರು ತಮಗೆ ಮಾತನಾಡಲು ಭಾಷೆ ಸಮಸ್ಯೆ ಇರುವುದರಿಂದ ಗ್ರಾಮ ಪಂಚಾಯತ ಸದಸ್ಯರಾದ ಮೇಲೆ ತೃಪ್ತಿಯಿಲ್ಲ ಎಂದು ಹೇಳಿರುವುದು ಸಂಶೋಧನಾ ಅಧ್ಯಯನದಿಂದ ಕಂಡು ಬಂದಿದೆ.

## ಸಂಶೋಧನೆಯಿಂದ ಕಂಡುಕೊಂಡ ಅಂಶಗಳು

- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರು ವಿವಿಧ ಸಮಸ್ಯೆಗಳನ್ನು ಎದುರಿಸುವುದು ಕಂಡು ಬಂದಿದೆ.
- ಗ್ರಾಮ ಪಂಚಾಯತಗಳಲ್ಲಿ ಪರಿಶಿಷ್ಟ ಜಾತಿ ಸದಸ್ಯರು ಗ್ರಾಮ ಪಂಚಾಯತ ಅಧ್ಯಕ್ಷರ ಆಯ್ಕೆ ಸಂದರ್ಭದಲ್ಲಿ ಆಮೀಷೆಗಳಿಗೆ ಒಳಗಾಗಿರುವುದು ತಿಳಿದು ಬಂದಿದೆ.
- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರು ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸಿರುವುದು ಕಂಡುಕೊಳ್ಳಲಾಗುವುದು.
- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಕಡಿಮೆ ಪ್ರಮಾಣದ ಸದಸ್ಯರು ಅನಾರೋಗ್ಯದಿಂದ ಬಳಲುತ್ತಿದ್ದಾರೆ.

## ಉಪಸಂಹಾರ

ಪ್ರಸ್ತುತ ದಿನಗಳಲ್ಲಿ ಪಂಚಾಯತ ರಾಜ್ ಸಂಸ್ಥೆಗಳಲ್ಲಿ ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರು ಭಾಗವಹಿಸುತ್ತಿರುವ ಪ್ರಮಾಣ ಅಧಿಕವಾಗಿರುವುದು ತಿಳಿದು ಬರುತ್ತಿವೆ. ಅವರಿಗೆ ರಾಜಕೀಯ ಜೀವನ ಹೊಸದಾಗಿದೆ. ಈ ಹಿನ್ನಲೆಯಲ್ಲಿ ಅವರ ರಾಜಕೀಯ ನಾಯಕತ್ವದ ಬೆಳವಣಿಗೆಗೆ, ಸದಸ್ಯರ ನಿರ್ಣಯದ ಸಾಮರ್ಥ್ಯ, ಸ್ವರೂಪ, ಅವರ ಸ್ಥಾನಮಾನದಲ್ಲಿ ಉಂಟಾಗಿರುವ ಬದಲಾವಣೆ ಮತ್ತು ಅವರು ಗ್ರಾಮ ಪಂಚಾಯುತಿಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳೇನು ಎಂದು ತಿಳಿಯುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಇದನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದ ಹಿನ್ನಲೆಯಲ್ಲಿ ಅಧ್ಯಯನ ಮಾಡುವ ಒಂದು ಪ್ರಮುಖ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

## ಸಲಹೆಗಳು

- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರಿಗೆ ರಾಜಕೀಯ ತರಬೇತಿ ನೀಡಬೇಕು.
- ಗ್ರಾಮ ಪಂಚಾಯತಗಳಲ್ಲಿ ಪರಿಶಿಷ್ಟ ಜಾತಿ ಸದಸ್ಯರಿಗೆ ಮಾಸಿಕ ವೇತನ ಹೆಚ್ಚಿಸಬೇಕು.
- ಪರಿಶಿಷ್ಟ ಜಾತಿ ಸದಸ್ಯರಿಗೆ ಆರೋಗ್ಯ ವೆಚ್ಚವನ್ನು ಸರಕಾರ ಭರಿಸಬೇಕು.
- ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರಿಗೆ ಹೆಚ್ಚಿನ ಅನುದಾನ ನೀಡಬೇಕು.

## ಆಕರ ಗ್ರಂಥಗಳು


- **ಕೆ. ಎಸ್. ಕೇಶವಮೂರ್ತಿ :** ಕರ್ನಾಟಕದಲ್ಲಿ ಪಂಚಾಯತ್ ರಾಜ್.
- **ಚ. ನ. ಶಂಕರರಾವ್ :** ಭಾರತದಲ್ಲಿ ಗ್ರಾಮೀಣಾಭಿವೃದ್ಧಿ.
- **ಕೆ. ಎಮ್. ಸುರೇಶ :** ಭಾರತದ ಸಂವಿಧಾನ.
- **ಅಂತರಜಾಲ, ದಿನಪತ್ರಿಕೆಗಳು, ಮಾಸಪತ್ರಿಕೆಗಳು.**


■■

– 44ನೇ ಪುಟದಿಂದ ಮುಂದುವರೆದುದು


- **ಎಸ್. ಪ್ರತಿಭಾ, ಪ್ರೊ. ಜಿ. ಕತ್ಯಾಯನಿ (2017) :**ಇಂಪ್ಯಾಕ್ಟ್ ಆಫ್ ಎಚ್.ಆರ್.ಎಂ ಪ್ರ್ಯಾಕ್ಟೀಸಸ್ ಆನ್ ಪರ್‌ಪಾರ್ಮೆನ್ಸ್ ಆಫ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ಇಂಟರ್ನ್ಯಾಷನಲ್ ಜರ್ನಲ್ ಆಫ್ ಮ್ಯಾನೇಜ್‌ಮೆಂಟ್ (ಐಜೆಎಂ), ಸಂಪುಟ 8 ಸಂಚಿಕೆ 5,
- **ತಾರಾ ಚಂದ್ ಸಕ್ಸೇನಾ, (2017) :** ರೋಲ್ ಅಂಡ್ ಡೆವಲಪ್‌ಮೆಂಟ್ ಆಫ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಇನ್ ಇಂಡಿಯಾ, ಸಂಪುಟ 8, ಸಂಚಿಕೆ 1 ಐಎಸ್‌ಎಸ್‌ಎನ್ 2277–9809 ಐಆರ್ಜೆಎಂಎಸ್ಟೆಚ್
- **ಎಂ. ಎಚ್. ಬಾಲಸುಬ್ರಮನ್ ಅಂಡ್ ಪಿ.ಬಾಲಚಂದ್ರ, (2002) :** ಆ ಎಕ್ಸಪ್ಲೋರೇಟರಿ ಸ್ಟಡಿ ಆಫ್ ಎನ್ವಿರಾನ್ಮೆಂಟಲ್ ಪೊಲ್ಯುಶನ್ ಬೈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಸೆಕ್ಟಾರ್ ಇನ್ ಕರ್ನಾಟಕ, ಇಇಆರ್‌ಸಿ ಡಬ್ಲುಪಿ.02.
- **ಪ್ರೊ. ಎಂ. ಚಂದ್ರಯ್ಯ, ಆರ್. ವಾಣಿ :** ಪ್ರಾಬ್ಲೆಮ್ಸ್ ಅಂಡ್ ಪ್ರಾಸ್ಪೆಕ್ಟ್ಸ್ ಆಫ್ ಎಂಎಸ್‌ಎಂಇ ಇನ್ ಇಂಡಿಯಾ: ಎ ಅನಲಿಕಲ್ ಸ್ಟಡಿ, ಐಜೆಬಿಎಂಐ, ಸಂಪುಟ 3, ಸಂಚಿಕೆ 8, ಆಗಸ್ಟ್ 2014.


■■

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

# ಜೆ. ಕೃಷ್ಣಮೂರ್ತಿ (1895-1986)

## (J. KRISHNAMURTHI-1895-1986)

✍ ಜಯದೇವ ಎಂ. ಮೆಣಸಗಿ ಎಂ.ಎ., ಮೈಲಾರಪ್ಪ ಮೆಣಸಗಿ ಮೇಮೊರಿಯಲ್ ಟ್ರಸ್ಟ್, ಗದಗ-582103

### ಸಂಕ್ಷಿಪ್ತ ಜೀವನ ಚರಿತ್ರೆ

ಮಾದನಪಲ್ಲಿಯ ಆಂಧ್ರಪ್ರದೇಶದ ಚಿತ್ತೂರು ಒಂದು ಗ್ರಾಮ. ಈ ಪುಟ್ಟ ಗ್ರಾಮದಲ್ಲಿ ಜಿದ್ದು ನಾರಾಯಣಯ್ಯ ಮತ್ತು ಸಂಜೀವಮ್ಮ ಅವರದು ಸಂಪ್ರದಾಯದ ಬ್ರಾಹ್ಮಣ ಕುಟುಂಬವಾಗಿತ್ತು, ಇವರೇ ಕೃಷ್ಣಮೂರ್ತಿಯವರ ತಂದೆತಾಯಿಗಳು. ಜಿದ್ದು ನಾರಾಯಣಯ್ಯ ಮತ್ತು ಸಂಜೀವಮ್ಮ ದಂಪತಿಗಳಿಗೆ 8ನೇ ಮಗುವಾಗಿ ಜನ್ಮ ತಾಳಿದರು. ಇವರು ಮೇ 11, 1895 ರಂದು ಮಧ್ಯರಾತ್ರಿ ಪೂಜಾಕೋಣೆಯಲ್ಲಿ 12-30 ಘಂಟೆಗೆ ಜಿದ್ದು ನಾರಾಯಣಯ್ಯ ಮತ್ತು ಸಂಜೀವಮ್ಮನವರ ಮಗನಾಗಿ ಜನಿಸಿದರು. ಈ ದಂಪತಿಗಳಿಗೆ 8ನೇ ಮಗನಾಗಿ ಕೃಷ್ಣಮೂರ್ತಿ ಜನಿಸಿದ್ದರಿಂದ ಮಗುವಿಗೆ (ಇವರಿಗೆ) ಶ್ರೀ ಕೃಷ್ಣ ಹೆಸರನ್ನು ಇಡಲಾಯಿತು. ಒಬ್ಬ ಜ್ಯೋತಿಷಿಗಳು ಈತನ ಜಾತಕ ಬರೆದು ಭವಿಷ್ಯದಲ್ಲಿ ಈತ ಅತ್ಯಂತ ಶ್ರೇಷ್ಠ ಪುರುಷನಾಗುತ್ತಾನೆ. ಎಂದು ನುಡಿದಿದ್ದರು.

ಕೃಷ್ಣಮೂರ್ತಿಯವರು ತಮ್ಮ ನಿತ್ಯಾನಂದ ಚುರುಕುತನ, ಚಟುವಟಿಕೆಯಿಂದ ಕೂಡಿದ ವ್ಯಕ್ತಿತ್ವದವನಾಗಿದ್ದರೆ, ಇವರು ವಿರುದ್ಧ ಸ್ವಬಾವ.ಇವರು ಮಂದಗತಿಯವರಾಗಿದ್ದರು. ಬಾಲಕನಾಗಿದ್ದಾಗ ಕೃಷ್ಣಮೂರ್ತಿಯ ಸ್ವಭಾವ ಅಂತರ್ಮುಖವಾಗಿತ್ತು, ಕೃಷ್ಣಮೂರ್ತಿ ಹತ್ತೂವರೆ ವರ್ಷದವರಾಗಿದ್ದಾಗ, ಅವರ ತಾಯಿ ಸಂಜೀವನ್ನು ದೈವಾಧೀನರಾದರು. ಇದು ಕೃಷ್ಣಮೂರ್ತಿಯವರ ಮೇಲೆ ಕೆಟ್ಟ ಪರಿಣಾಮವನ್ನು ಬೀರಿತು. ಇದರಿಂದ ಹೊರಬರಲು ಅನೇಕ ವರ್ಷಗಳೇ ಹಿಡಿದವು. ಇದರಿಂದ ಅವರು ತಾಯಿಯ ಮೇಲೆ ಇಟ್ಟಿರುವ ಮಾತ್ರ ಭಕ್ತಿಯ ಬಗ್ಗೆ ತಿಳಿಯುತ್ತದೆ. ಇವರ ತಂದೆ ನಾರಾಯಣಯ್ಯ ಮದ್ರಾಸಿನಲ್ಲಿರುವ 'ಥಿಯೋಸೋಫಿಕಲ್ ಸೊಸಾಯಿಟಿ'ಯ ಸದಸ್ಯರಾಗಿದ್ದರು. ಇವರ ತಂದೆ ತಮ್ಮ 52 ನೇ ವಯಸ್ಸಿನಲ್ಲಿ 1907 ರಲ್ಲಿ ಶ್ರೀಮತಿ ಆ್ಯನಿಬೆಸೆಂಟ್ ಎನ್ನುವರು ಇದರ ಅಧ್ಯಕ್ಷರಾದರು. ಇವರೂ ಕೂಡಾ ಭಾರತೀಯ ಶಿಕ್ಷಣದ ವ್ಯವಸ್ಥೆಯ ಬಗ್ಗೆ ಅಧ್ಯಾಯನ ಮಾಡಿ ಅದರಲ್ಲಿದ್ದ ಕುಂದುಕೊರತೆಗಳನ್ನು ನಿವಾರಿಸಲು ಸಲಹೆಗಳನ್ನು ನೀಡಿದರು. ಈ ಥಿಯೋಸೋಫಿಸ್ಟರ ನಂಬಿಕೆಯಂತೆ ''ಜಗತ್ತಿಗೆ ಅತ್ಯಂತ ಅವಶ್ಯಕವಿದ್ದ ಹೊಸ ಜ್ಞಾನ ನೀಡುವ ಸಲುವಾಗಿ ದೇವರು ಅವತಾರವೆತ್ತುತ್ತಾನೆ. ಈ ಹಿಂದೆ ಆತ ಕೃಷ್ಣನಾಗಿ, ಏಸುಕ್ರಿಸ್ತನಾಗಿ, ಬುದ್ಧನಾಗಿ ಬಂದಿಳಿದಿದ್ದಾನೆ. ಈಗ ಮತ್ತೊಮ್ಮೆ ಕಾಲ ಪರಿಪಕ್ವವಾಗಿದ್ದು ದೇವರು ಅವತಾರವೆತ್ತಿ ಜಗತ್ತಿಗೆ ಹೊಸಧರ್ಮ ನೀಡುವುದಾಗಿ ಅವರು ನಂಬಿದ್ದರು. ಈ ವಿಶ್ವ ಗುರು ಬಂದಿಳಿದಾಗ ಅವನನ್ನು ಸ್ವಾಗತಿಸಲು ಮಾನವ ಜನಾಂಗವನ್ನು ಅಣಿಗೊಳಿಸುವುದೇ ಈ ಸೊಸೈಟಿಯ ಸ್ಥಾಪನೆಯ ಉದ್ದೇಶವಾಗಿತ್ತು.

ವಿಶ್ವಗುರುವಿನ ಪೀಠವೇರಲು ತಾವು ಮಾಡುತ್ತಿರುವ ಕಾರ್ಯಗಳಿಗೂ ತಮ್ಮ ಅಂತರಂಗದಲ್ಲಿರುವ ಅನುಭವಕ್ಕೂ ಇರುವ ವ್ಯತ್ಯಾಸ ಅವರಲ್ಲಿ ಯಾತನೆ ಉಂಟು ಮಾಡುತ್ತಿತ್ತು, ತೀವ್ರವಾಗಿ ತಲೆನೋವು ಅವರನ್ನು ಯಾವಾಗಲೂ ಕಾಡುತ್ತಿತ್ತು, ಆದರೆ ಇದೇ ಸಂದರ್ಭದಲ್ಲಿ ಅವರ ಸಹೋದರ ನಿತ್ಯಾನಂದರ ಆರೋಗ್ಯ ಹದಗೆಟ್ಟಿತು. ಕ್ರಿ.ಶ. 1925ರಲ್ಲಿ ಅವರು ನಿಧನ ಹೊಂದಿದರು. ಇವರ ಸಾವು ಅಂತರಂಗದ ತುಮಲವನ್ನು ಹೆಚ್ಚಿಸಿತು. ಶ್ರೀಮತಿ ಆ್ಯನಿಬೆಸೆಂಟರ ಮಾತ್ರ ಪ್ರೇಮ ಅವರ ಅಂತರಂಗದ ಸತ್ಯವನ್ನು ಮುಚ್ಚಿಡಲಾಗಲಿಲ್ಲ, ಸಂಘ-ಸಂಸ್ಥೆಗಳ, ಧರ್ಮ-ಕರ್ಮಗಳ ಪುಸ್ತಕ ಪುರಾಣಗಳ ಹಾಗೂ ವಿಧಿವಿಧಾನಗಳ ನಿರುಪಯುಕ್ತತೆ ಅವರಿಗೆ ಮನದಟ್ಟಾಯಿತು. ಇದಕ್ಕಾಗಿ ಅವರು ಒಂದು ಗಟ್ಟಿಯಾದ ನಿರ್ಧಾರವನ್ನು ತೆಗೆದುಕೊಂಡರು. ಕ್ರಿ.ಶ. 1929, ಅಗಷ್ಟ 3 ನೇ ತಾರೀಖ ಹಾಲೆಂಡ್ ದೇಶದ ಓಮೆನದಲ್ಲಿ ಸಮಾವೇಶಗೊಂಡ ಸಹಸ್ರಾರು ಜನರ ಸಮ್ಮೇಳನದಲ್ಲಿ ತಮಗಾಗಿ ರಚಿಸಿದ ಸಂಸ್ಥೆಯನ್ನು ಅಪಾರವಾದ ಹಣ ಆಸ್ತಿಪಾಸ್ತಿಗಳನ್ನು, ಅಪಾರ ಶಿಷ್ಯಸ್ತೋಮವನ್ನು ಎಲ್ಲವನ್ನು ವಿಸರ್ಜಿಸಿ ಘೋಷಣೆಮಾಡಿದರು. ಇದರಿಂದ ಆಶ್ಚರ್ಯ ಉಂಟಾಯಿತು. ''ಸತ್ಯವೂ ಪಥವಿಲ್ಲದ ತಾಣ'' ಎಂದು.''ಸತ್ಯವನ್ನು ಅರಿಯಲು ಸಂಘಟನೆ ಬೇಕಿಲ್ಲ'' ಎಂದು ಘೋಷಿಸಿದರು.

ಕೃಷ್ಣಮೂರ್ತಿಯವರು ಥಾಯೋಸೊಫಿಕಲ್ ಸೊಸೈಟಿಯಿಂದ ದೂರವಾದರೂ, ಅದನ್ನು ತ್ಯಜಿಸಿದರೂ ಕೂಡ ಶ್ರೀಮತಿ ಆ್ಯನಿಬೆಸೆಂಟರ್ ಪ್ರೇಮದಿಂದ ಎಂದೂ ವಿಮುಖರಾಗಲಿಲ್ಲ, ಅನಂತರ ಅವರು ಯಾವುದೇ ಆಧ್ಯಾತ್ಮಿಕ ಸಂಘಟನೆಯನ್ನು ಕೈಗೊಳ್ಳಲಿಲ್ಲ, ತಾವು ಕಂಡ ಸತ್ಯವನ್ನು ತಿಳಿಸುತ್ತ ಪ್ರವಚನ, ಸಂಭಾಷಣೆ, ಚರ್ಚೆ ಹಾಗೂ ಪುಸ್ತಕಗಳನ್ನು ಪ್ರಕಟಿಸಲು ಕೆಲವು ದೇಶಗಳಲ್ಲಿ ''ಕೃಷ್ಣಮೂರ್ತಿ ಫೌಂಡೇಶನ್'' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

ಅಮೇರಿಕೆಯ ಕ್ಯಾಲಿಫೋರ್ನಿಯಾದ ಓಹಾಯನಲ್ಲಿ ಕೃಷ್ಣಮೂರ್ತಿಯವರು ಒಂದು ಶಾಲೆಯನ್ನು, ಇಂಗ್ಲೆಂಡಿನ ಹ್ಯಾಂಪ್‌ಶೈರ್‌ನಲ್ಲಿ ಬ್ರಾಕ್‌ವುಡ್ ಪಾರ್ಕನಲ್ಲಿ ಒಂದು ಶಾಲೆಯನ್ನು ಭಾರತದ ರಾಜಘಾಟದಲ್ಲಿ ಒಂದು ಶಾಲೆಯನ್ನು, ರಿಷಿವ್ಯಾಲಿಯಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದರು. ಈ ರೀತಿ ತಮಗೆ ಪ್ರಿಯ ವಿಷಯವನ್ನು ವ್ಯಕ್ತಪಡಿಸಲು ಶಿಕ್ಷಣದ ಮೂಲಕ ಪ್ರಯೋಗರೂಪದಲ್ಲಿತ್ತು, ಆಳವಡಿಸಿದರು. ಇವರು ಶಾಲೆಯನ್ನು ಪ್ರಾರಂಭಿಸಿ ಶಿಕ್ಷಣ ಪ್ರಸಾರ ಮಾಡುವಲ್ಲಿ ಯಶಸ್ವಿಯಾದರು.

ಜಗತ್ತಿನ ತುಂಬ ತಮ್ಮ ಬೋಧನೆಯನ್ನು ಪ್ರವಚನಗಳ ಮೂಲಕ ಸುಮಾರು 60 ವರ್ಷಗಳವರೆಗೆ ಸಾರಿದರು. ತಮ್ಮ ಬಾಳಿಗೆ ತಾವೇ ಬೆಳಕಾಗಬೇಕು ಹಾಗೂ ಸ್ಪಷ್ಟವಾದ ಅವಲೋಕನದಿಂದ ಮಾತ್ರ ಪ್ರೇಮ, ಕರುಣೆ ಮತ್ತು ಶಾಂತಿ ಸಾಧ್ಯ ಎಂದು ಸಾರಿದರು. ತಾವು ಸ್ಥಾಪಿಸಿದ ಶಾಲೆಗಳಲ್ಲಿ ಪೈಪೋಟಿ ರಹಿತ ಶಿಕ್ಷಣದ ಪಠ್ಯಕ್ರಮವನ್ನು ಜಾರಿಯಲ್ಲಿ ತಂದರು. ವಿಶ್ವದುದ್ದಕ್ಕೂ ತಮ್ಮ ಸಂದೇಶ ಬೀರಿದರೂ ಸಹ, ಎಂದು ಯಾವುದೇ ಕೀರ್ತಿ ಗೌರವ ಮತ್ತು ಸ್ಮಾರಕಗಳನ್ನು ಬಯಸಲಿಲ್ಲ, ವಿಜ್ಞಾನಿಗಳು ಮನಃಶಾಸ್ತ್ರಜ್ಞರು, ಬುದ್ಧಿಜೀವಿಗಳು, ಪಂಡಿತರು, ಪಾಮರರು, ಸಾಮಾನ್ಯರೂ ಅವರ ಬೋಧನೆಯ ಸವಿಪಡೆದಿದ್ದಾರೆ.

ಆಲ್ಡಸ್ ಹಕ್ಸಲಿ, ಜಾರ್ಜ ಬರ್ನಾಡ್, ಹೆನ್ರಿ ಮಿಲ್ಲರ್, ಜವಾಹರಲಾಲ ನೆಹರು ಹಾಗೂ ಅನೇಕ ಗಣ್ಯರು ಅವರಿಂದ ಪ್ರಭಾವಿತರಾಗಿದ್ದಾರೆ.

ಕೃಷ್ಣಮೂರ್ತಿಯವರು ನಿಸರ್ಗದ ಪ್ರೇಮಿ, ನಿಸರ್ಗದ ಶ್ರೇಷ್ಠ ಆರಾಧಕರು. ಪ್ರತಿನಿತ್ಯ ಪ್ರಕೃತಿಯ ಮಡಿಲಲ್ಲಿ ಮೌನವಾಗಿ ಮೈಲುಗಟ್ಟಲೇ ತಿರುಗುವುದು ಅವರಿಗೆ ಅಚ್ಚುಮೆಚ್ಚಿನ ಸಂಗತಿ.

ಜೀವನವಿಡೀಪ್ರವಚನ ನೀಡುವುದು ಅವರಿಗೆ ಪ್ರೀತಿಯವಿಷಯವಾಗಿತ್ತು ಎಂದು ತಮಗೆ ಪ್ರವಚನ ನೀಡುವುದು ಸಾಧ್ಯವಾಗುವುದಿಲ್ಲವೋ ಆಗ ತಮ್ಮ ದೇಹ ಪ್ರಾಣ-ರಹಿತವಾಗುವುದೆಂದು ಅವರು ಹೇಳಿದ್ದಾರೆ. ತಮ್ಮ ಪ್ರಾಣರಹಿತ ದೇಹಕ್ಕೆ ಕಟ್ಟಿಗೆಯ ಕೊರಡಿನಷ್ಟೇ ಮಹತ್ವ ನೀಡಬೇಕೆಂದು ವಿನಂತಿಸಿದ್ದರು. ಕ್ರಿ. ಶ. 1986 ರಲ್ಲಿ ಜನೇವರಿಯಲ್ಲಿ ಭಾರತದಲ್ಲಿ ಪ್ರವಚನ ನೀಡಿದರು. ಇದುವೇ ಅವರ ಕೊನೆಯ ಪ್ರವಚನವಾಯಿತು. ಅಮೇರಿಕೆಯ ತಮ್ಮ ಪ್ರಿಯ ಮನೆ 'ಪಾಯಿನ ಕಾಟೇಜ್' ನಲ್ಲಿ 17ನೇ ಫೆಬ್ರುವರಿ, 1986 ರಂದು ಜೆ. ಕೃಷ್ಣಮೂರ್ತಿಯವರು ದೈವಾಧೀನರಾದರು.

■■

**SHIKSHAN SOUDAH** *Kannada Quarterly* Printer, Publisher, Editor and Owned by : **Jayadev Mailarappa Menasagi** Resi. : Okkalageri Oni, GADAG-582101, Tq. Gadag, Dist.:Gadag. Karnataka State Printed at **Maima Akshara Mudrana,** S.P. Gadag Compound, J.T.Math Road, GADAG 582101, Tq. Gadag, Dist.:Gadag. Karnataka State Phone: 08372-237527, email : shikshansoudha@gmail.com.